ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

09 ಜುಲೈ 2014 ಪುಟ 16 ರೂ. 15/-

ಒಂದು ಅಜ್ಜಿಯ ಕಥೆ


ಅಂಬಲಪಾಡಿ ಮಹಾಕಾಳಿಗೆ ಮುಕ್ತಿ



ಕುಟ್ಟಿರಾಜನ ಸ್ಕೆಚ್ ಕವಳನ ಅಂತ್ಯ



ಉತ್ತರ ಕನ್ನಡ ರಾಜಕೀಯ ನಡುಕ



ಮೂರ್ತ ಮತ್ತು ಅಮೂರ್ತ

ಇಳಕಲ್ ಗ್ರಾನೈಟ್ ಮಾಫಿಯಾ

ಇಂತ ಮಕ್ಕಳನ್ನು ಕಂಡಿದ್ದೀರಾ!

ಗೆಳೆಯ ಶ್ರೀನಿವಾಸ್ "ಇಲ್ಲೊಂದು ನ್ಯಾಯ ಪಂಚಾಯ್ತಿ ಇದೆ ಬನ್ನಿ" ಎಂದು ಕರೆದುಕೊಂಡು ಹೊರಟರು. ಆ ತರದ ಬೆಂಗಳೂರನ್ನೆ ನಾನು ನೋಡಿರಲಿಲ್ಲ, ಬೀದಿ ತುಂಬ ಪಾಬರು. ಬಾಂಬೆಯ ಒಂದು ಏರಿಯಾದಲ್ಲಿ ಇಂತಹ ಜಾಗ ನೋಡಿದ್ದೆ. ಅನುಮಾನದಿಂದ "ಇದು ಯಾವ ಏರಿಯಾ?" ಎಂದು ಕೇಳಿದೆ. ಗೆಳೆಯ "ಇದು ಗೋರಿಪಾಳ್ಯ" ಎಂದರು. ಅದನ್ನ ತದಾಯ್ದು ಮತ್ತೆ ಅಂತದೆ ಜನನಿಬಿಡ ಗಲ್ಲಿ ಪ್ರವೇಶಿಸಿದಾಗ "ಇದ್ಯಾವ ಪಾಳ್ಯ" ಎಂದೆ. "ನಮ್ಮವರ ಪಟ್ಟೆಗಾರ ಪಾಳ್ಯ" ಎಂದರು. ಜನಸಾಂದ್ರತೆಯಲ್ಲಿ ಅವೆರಡೂ ಸ್ಪರ್ಧೆಯಲ್ಲಿದ್ದಂತೆ ಕಂಡವು.

ನಮ್ಮ ನ್ಯಾಯ ಪಂಚಾಯ್ತಿಯಲ್ಲಿ ಭಾಗವಹಿಸಬೇಕಾಗಿದ್ದ ಆಸಾಮಿಗಳಿಗಾಗಿ ಫೋನ್ ಮಾಡಿದರು. ಅವರು ಕ್ಷಣಾರ್ಧದಲ್ಲಿ ಪ್ರತ್ಯಕ್ಷರಾದರು. ಅಲ್ಲದೆ ನಿಗದಿಯಾಗಿದ್ದ ನ್ಯಾಯಾಸ್ಥಾನಕ್ಕೆ ಮೌನವಾಗಿ ನಡೆಯತೊಡಗಿದರು. ನೋಡಲು ಅವಳಿಜವಳಿಯಂತಿದ್ದರೂ ಒಬ್ಬನಿಗೆ ಐದಾರು ವರ್ಷ ಜಾಸ್ತಿಯಾದಂತೆ ಕಾಣಿಸಿತು. ಸಾಗರೋಪಾದಿಯಲ್ಲಿ ಬರುತ್ತಿದ್ದ ವಾಹನಗಳನ್ನು ತಪ್ಪಿಸಿ ರಸ್ತೆ ದಾಟುವಲ್ಲಿ ನಾಲ್ಕು ಜನರೂ ನಾಲ್ಕು ದಿಕ್ಕಾಗಿ ಕಡೆಗೆ ಸೇರಿಕೊಂಡೆವು. ನಂತರ ಕಿಕ್ಕಿರಿದ ಮನೆಗಳ ಸಾಲಿನಲ್ಲಿದ್ದ ಯಾವುದೋ ಮನೆಗೆ ನುಗ್ಗಿದರು.

ಆ ಮನೆಯಲ್ಲಿ ಕುರ್ಚಿಯ ಮೇಲೆ ಕುಳಿತ ಆರಡಿ ಆಸಾಮಿಯೊಂದು "ಬನ್ನಿ ಕುತಗಳ್ರಿ" ಎಂದು ಅತ್ಯಂತ ಅಸಹನೆ ಮತ್ತು ಸಿಟ್ಟಿನಿಂದ ಸ್ವಾಗತಿಸಿದ. ಮನೆಗೆ ಬಂದ ಅತಿಥಿಗಳನ್ನು ಈ ತರಹ ಸ್ವಾಗತಿಸಿದ್ದನ್ನು ನಾನೆಂದೂ ನೋಡಿರಲಿಲ್ಲ, ಆದ್ದರಿಂದ ಇಂತಹ ಜಾಗಕ್ಕೆ ಕರೆದುಕೊಂಡು ಬಂದ ಶ್ರೀನಿವಾಸರ ಬಗ್ಗೆ ಸಿಟ್ಟು ಬಂತು. ಅದನ್ನ ಗ್ರಹಿಸಿದ ಶ್ರೀನಿವಾಸ್ "ಇವರು ಚಂದ್ರೇಗೌಡರು ಅಂತ. ಗೌರಿ ಲಂಕೇಶ್ ಪತ್ರಿಕೇಲಿ ಬರಿತರೆ" ಎಂದು ಇನ್ನೂ ಏನೇನೊ ಪರಿಚಯಿಸಿದರು. ಅದರಿಂದಲೂ ಕುತೂಹಲಗೊಳ್ಳದ ಆ ವ್ಯಕ್ತಿ "ಓ..." ಎಂದಷ್ಟೇ ಹೇಳಿದರು.

ಶ್ರೀನಿವಾಸ್ ಆ ವ್ಯಕ್ತಿಯನ್ನು ಪರಿಚಯಿಸುತ್ತ "ಇವರು ಪೊಲೀಸಾಗಿದ್ದಾರೆ ಸಾರ್" ಎಂದರು. ನನಗಾಗ ಅವರ ನಡವಳಿಕೆಗೆ ನ್ಯಾಯ ಸಿಕ್ಕಿ ಸುಮ್ಮನಾದೆ. ಪೊಲೀಸರ ಕುರ್ಚಿಯ ಪಕ್ಕದಲ್ಲಿ ನೆಲದಲ್ಲೇ ಒಂದು ಮುದುಕಿ ಅಸಹಾಯಕತೆಯಿಂದ ಕಣ್ಣು ಬಿಡುತ್ತ ಕುಳಿತಿತ್ತು.

ಪೊಲೀಸರು ತಮ್ಮ ಹೆಂಡತಿ ಕರೆದು "ಇವರಿಗೆಲ್ಲಾ ಕಾಫಿ ಕೊಡು. ಯಾರಾದ್ರು ಲೆಸ್ ಕುಡಿತಿರೇನ್ರಿ" ಎಂದು ಕುಡಿಯದಿದ್ದರೆ ಕುಡಿಸುವ ದನಿಯಲ್ಲಿ ಕೇಳಿದರು. "ನನಿಗೂ ಲೆಸ್" ಎಂದೆ.

ನ್ಯಾಯದ ವಿಷಯವನ್ನ ನನ್ನಿಂದ ಬಚ್ಚಿಟ್ಟದ್ದರಿಂದ ನಿಧಾನವಾಗಿ ಬಿಚ್ಚಿಕೊಳ್ಳತೊಡಗಿತು.

ಆ ಪೊಲೀಸಪ್ಪನ ಪಕ್ಕ ಕುಳಿತಿದ್ದ ಅಜ್ಜಿಗೆ ಐದಾರು ಮಕ್ಕಳು. ಆ ಮಕ್ಕಳನ್ನ ಹೆತ್ತು, ಸಾಕಿ, ಓದಿಸಿ, ಮದುವೆ ಮಾಡಲೋಸ್ಕರ ಇದ್ದ ಆಸ್ತಿಯೆಲ್ಲಾ ಕರಗಿದೆ. ಇದ್ದ ಇಬ್ಬರು ಗಂಡು ಮಕ್ಕಳ ಪೈಕಿ ಹಿರಿಯವನಾಗಲಿ, ಕಿರಿಯವನಾಗಲಿ ಅಜ್ಜಿಯನ್ನು ಇಟ್ಟುಕೊಳ್ಳಲು ತಯಾರಿಲ್ಲ. ಪೊಲೀಸಪ್ಪ ಮೊದಲನೆ ಅಪರಾಧಿಯಾದ ಹಿರಿಮಗನನ್ನ "ಏನೇಳ್ತಿಯಪ್ಪ ನೀನು?" ಎಂದ. "ನಾನು ತಂಗಿರ ಮದುವೆ ಮಾಡಿದ್ದಿನಿ. ಅಪ್ಪ ಸತ್ತಾಗ ತಿಥಿ ಮಾಡಿದ್ದಿನಿ. ನಮ್ಮಪ್ಪ ಕೊಟ್ಟ ಯಾವ ಆಸ್ತಿನೂ ನನ್ನತ್ರ ಇಲ್ಲ, ಆದ್ರು ಈ ಹಿಂದೆ ನ್ಯಾಯಸ್ಥರು ಹೇಳಿದಂಗೆ, ನನ್ನ ತಮ್ಮ ತಿಂಗಳಿಗೆ ಒಂದು ಸಾವಿರ ರೂಪಾಯಿ ಕೊಡುವ ಕರಾರಿನ ಮ್ಯಾಲೆ ನಮ್ಮ ತಾಯಿನ ನಾನೇ ಸಾಕ್ತಾಯಿದ್ದೆ. ಆದ್ರೆ ನನ್ನ ತಮ್ಮ ಈಗ ಎರಡು, ಮೂರು ತಿಂಗಳಿಂದ ಐನೂರು ರೂಪಾಯಿ ಕೊಡ್ತ ಅವನೆ. ಅದ್ಕೆ ನನ್ನ ಹೆಂಡತಿ 'ಆ ಮುದುಕಿ ತಗಂಡೋಗಿ ಅವನ ಮನೆಗೆ ಬಿಟ್ಟು ಬಾ' ಅಂದ್ಲು, ಅದ್ಕೆ ಇಲ್ಲಿಗೆ ತಂದು ಬುಟ್ಟಿದ್ದಿನಿ" ಎಂದು ತನ್ನ ಜವಾಬ್ದಾರಿಯಿಂದ ಮುಕ್ತನಾದಂತೆ ವರದಿ ಒಪ್ಪಿಸಿ ಕಾಫಿ ಹೀರತೊಡಗಿದ.

ಇನ್ನ ಕಿರಿ ಮಗನನ್ನ ಉದ್ದೇಶಿಸಿ "ನಿಂದೇನ್ನ ತಕರಾರು?" ಎಂದರು. ಆತ ಯಾವ ಮುಲಾಜೂ ಇಲ್ಲದೆ "ನನ್ನೆಂಡ್ತಿ 'ಆ ಮುದುಕಿಯ ಮನೆಗೆ ಕರಕಂಡು ಬಂದ್ರೆ ನಾನು ಬಾವಿಗೆ ಬೀಳ್ತಿನಿ' ಅಂತಳೆ. ನಾನೇನು ಮಾಡ್ಲಿ?" ಎಂದು ನಮ್ಮನ್ನೆ ದುರುಗುಟ್ಟಿ ನೋಡಿದ. ಅಷ್ಟರಲ್ಲಿ ಯಾರಿಗೂ ಬೇಕಿಲ್ಲದ ಆ ಅಜ್ಜಿ ಎಲ್ಲರ ಕಾಫಿ ಲೋಟಗಳನ್ನು ಲಗುಬಗೆಯಿಂದ ತೆಗೆದುಕೊಂಡು ಹೋಗಿ ತೊಳೆದಿಟ್ಟು ಬಂತು.

ನಿಧಾನವಾಗಿ ನನ್ನ ಅರಿವಿಗೆ ಬಂದಂತೆ ಆ ಪೊಲೀಸನ ಮನೆ ಅಜ್ಜಿಯ ಸಂಬಂಧಿಕರದ್ದೂ ಅಲ್ಲ, ಹೋಗಲಿ ಜಾತ್ಯಸ್ಥರ ಮನೆಯೂ ಅಲ್ಲ. ಒಂದು ಕಾಲದಲ್ಲಿ ಅಜ್ಜಿ ಕುಟುಂಬ ಪೊಲೀಸನ ಮನೆ ಎದುರಿಗಿದ್ದರು ಅಷ್ಟೆ. ಆದರೂ ತನ್ನ ಹಿರಿ ಮಗನ ಮನೆಗೆ ಬಂದಂತೆ ಇಬ್ಬರೂ ಮಕ್ಕಳಿಂದ ತಿರಸ್ಕೃತಗೊಂಡು ಪೊಲೀಸಪ್ಪನ ಮನೆಗೆ ಬಂದು ಕುಳಿತಿತ್ತು.

ಪೊಲೀಸ್ ಈಗ ನನಗೆ ಒಪ್ಪಿಸತೊಡಗಿದರು: "ನೋಡಿ ಸಾರ್, ಈ ಅಜ್ಜಿ ಆ ಕಾಲದಿಂದ್ಲೂ ಆವಾಗೀವಾಗ ಬಂದು ನನ್ನ ಮನೆ ಊಟ ಮಾಡಿಕೊಂಡೋಯ್ತದೆ. ಈಗ್ಲು ನಮ್ಮ ಜೊತೆ ಅದೂ ಒಂದು ತುತ್ತು ಅನ್ನ ತಿಂದು ಹೋಗದು ನಮಗೆ ಹೊರೆಯಲ್ಲ. ಆದ್ರೆ ನಾವು ಮನೆಲಿಟ್ಗಳಕ್ಕಾಗದಿಲ್ಲ, ಯಾಕಂದ್ರೆ ಮನಿಗೆ ಅಳಿಯ ಬಂದವ್ರುನೆ. ನಮಗೂ ಮಕ್ಕಳು ಮರಿ ಅವೆ. ಈ ಅಜ್ಜಿ ಅವಳ ಮಕ್ಕಳ ಮನೇಲಿ ಇದ್ದುಕೊಂಡು, ಇಲ್ಲಿ ಬಂದು ಊಟ ಮಾಡಿಕಂಡೋಗ್ಲಿ, ಇವತ್ತು ಅನ್ನ ಹಾಕನ ಅಂದ್ರೆ ನನ್ನ ತಾಯಿಯಿಲ್ಲ. ಈ ನನ್ನ ಮಕ್ಕಳಿಗೇನಾಗ್ಯದೆ ಕೇಳಿ" ಎಂದರು.

ನಾನು ಪೊಲೀಸಪ್ಪನ ಹೃದಯಕ್ಕೆ ಬೆಚ್ಚಿ ಕೂತೆ. ಅಜ್ಜಿಯ ಮಕ್ಕಳ ಮೇಲೆ ಸಿಟ್ಟು ಬಂತು. ಕಿರಿ ಮಗನನ್ನ ಕುರಿತು "ನಿನ್ನ ತಾಯಿ ಕರಕೊಂಡೋಗಕ್ಕೇನಾಗ್ಯದೆ ನಿಂಗೆ?" ಎಂದೆ. "ನನ್ನೆಂಡ್ತಿ ಬಾವಿಗೆ ಬೀಳ್ತಳಂತೆ" ಎಂದ. "ಬೆಂಗಳೂರಲ್ಲಿ ಒಂದೇ ಒಂದು ಬಾವಿನೂ ಇಲ್ಲ" ಎಂದೆ. ನನ್ನ ಹಾಸ್ಯವನ್ನ



ಗ್ರಹಿಸದೆ "ಮನೆನೆ ಬುಟ್ಟು ಹೋಯ್ತಳಂತೆ ನಾನೇನು ಮಾಡ್ಲಿ" ಎಂದ. "ಏನು ಮಾಡಬೇಡ, ಅವ್ವನ ಜೊತೆ ಬ್ಯಾರೆ ಇರು. ಆಗ ಅವಳೇ ಬತ್ತಳೆ" ಎಂದೆ. "ನನಿಗೂ ಉಸಾರಿಲ್ಲ" ಎಂದ. "ಏನಾಗ್ಯದೆ ನಿನಗೆ?" ಎಂದೆ. "ಪಗಾರು ಜಾಸ್ತಿಯಾಗಿ ಕಣ್ಣು ಮಂಜಾಯ್ತವೆ" ಎಂದ.

"ಹೆತ್ತ ತಾಯಿನೆ ಬೇಕಿಲ್ಲದವ್ನಿಗೆ ಕಣ್ಣು ಯಾಕೆ ಬೇಕು ಹೇಳು. ಅದ್ಕೆ ಹೊಯ್ತಾ ಅದೆ" ಎಂದೆ. ಆದರೆ ನಿಜಕ್ಕೂ ಗುಂಡು ಕಲ್ಲಿನಂತಿದ್ದ ಆತ ಅನಾರೋಗ್ಯದ ನೆಪ ಹೇಳಿ ತಾಯಿಯನ್ನ ತಿರಸ್ಕರಿಸುವವನಿದ್ದ. ಪೊಲೀಸರಿಗೆ ಹೇಳಿ ಸರಿಯಾಗಿ ನಾಲ್ಕು ಒದೆಸೋಣವೆಂದರೆ ಪೊಲೀಸರೇ ಸೋತು ಸುಮ್ಮನಾಗಿದ್ದರು. "ಹೋಗ್ಲಿ ನಿಮ್ಮ ತಾಯಿನ ಯಾವುದಾದ್ರು ವೃದ್ಧಾಶ್ರಮದಲ್ಲಿ ಇರಿಸಿದ್ರೆ ದುಡ್ಡು ಕೊಡ್ತಿರಾ" ಎಂದಾಗ ಇಬ್ಬರು ಮಕ್ಕಳೂ ನಿರಾಕರಿಸಿದರು.

"ಅಲ್ರಯ್ಯಾ, ನೀವು ಇಟ್ಗೊಳಕ್ಯಾಗದಿಲ್ಲ, ಎಲ್ಲಾದ್ರು ಸೇರುಸ್ತಿವಿ ಅಂದ್ರೆ ಅದ್ಕೂ ದುಡ್ಡು ಕೊಡಕ್ಕಾಗದಿಲ್ಲ ಅಂತಿರಿ. ಅಂಗಾದ್ರೆ ಆವಜ್ಜಿ ಎಲ್ಲಿಗೋಗಬೇಕು ಹೇಳಿ" ಎಂದೆ. ಅದಕ್ಕೂ ನಿರುತ್ತರ ಕುಮಾರರಂತೆ ಕುಳಿತಿದ್ದರು.

ನಿಜಕ್ಕೂ ಅವರೆಂತಹ ಅಮಾನುಷ ಪುತ್ರರೆಂದರೆ, ಆವಜ್ಜಿ ಆ ಕ್ಷಣ ಎದ್ದು ಹೊರಟುಹೋದರೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದೆ ತಮ್ಮ ಮನೆಗಳ ಕಡೆ ಹೋಗುವವರಾಗಿದ್ದರು. ಅದಷ್ಟೆ ಅಲ್ಲ, ಅಜ್ಜಿಗೆ ಏನಾದರೂ ಆನಾಹುತವಾಗಿ ಮರಣ ಹೊಂದಿದರೆ ಯಾವ ಕಾರಣಕ್ಕೂ ತಾವೆ ಅಜ್ಜಿಯ ವಾರಸುದಾರರೆಂದು ಹೇಳಿಕೊಳ್ಳದೆ, ತಿಥಿಯನ್ನೂ ಮಾಡದೆ, ನಿರುಮ್ಮಳವಾಗಿ ಬದುಕುವಂತಹ ಜೀವಿಗಳೆಂದು ಅವರ ಮಾತಿನಿಂದಲೇ ವ್ಯಕ್ತವಾಯ್ತು.

ನನಗೆ ಈ ಮಟ್ಟದ ಅಮಾನುಷತೆ ಈ ಬೆಂಗ ಜನಕ್ಕೆ ಬಂದದ್ದು ಹೇಗೆ? ಕಾಲವೇ ಇವರನ್ನ ಮಾಡಿದೆಯಾ? ಬೆಂಗಳೂರು ಹೀಗೆ ಮಾಡಿದೆಯಾ? ಅ ಇವರು ಹುಟ್ಟುಣಿಕೆಯೇ ಇಂತದ್ದೋ ಎ ಯೋಚಿಸುವಂತಾಯ್ತು.

ಪೊಲೀಸಪ್ಪ ಕೂಡ ಅಜ್ಜಿ ಮಕ್ಕಳ ನಡವಳಿಕೆಗೆ ಬೆ ಮಾತೇ ಹೊರಡದಂತೆ ಕುಳಿತು ಬಿಟ್ಟ. "ನೋ ನಿನ್ನ ಅವ್ವ ಎಲ್ಲೋ ಇದ್ದುಕಂಡು ನನಗೂ ಎರಡು ಮಕ್ಕಳವೆ ಅನ್ನದು ನಿನಗೆ ಅನುಮಾನಲ್ಲವೆ? ಅಂಗೆ ಕೂಡ ನಮ್ಮವ್ವ ಅವಳೆ ಆದ್ರೆ ಎಲ್ಲಿದ್ದಳೊ ಏನೋ ಅ ನಿನ್ನ ಅಸ್ತಿತ್ವಕ್ಕೆ ಅನುಮಾನ ಅಲವೇನಯ್ಯ?" ಅವರಿಬ್ಬರೂ ಅರ್ಥವಾಗದ ಭಾಷೆ ಕೇಳಿದಂತೆ ಸು ನೋಡಿದರು. ಅವರ ಸ್ವಾರ್ಥಪರ ಪ್ರಜ್ಞಾವಲಯ ಅವ್ವ ಚುಕ್ತವಾಗಿ ಹೋಗಿದ್ದಳು. ಅವರು ಕಟ್ಟಿಕೆ ಹೆಂಡತಿಯರ ಹೆಸರೇಳಿದರೆ ಸಾಕು ಅಜ್ಜಿಯ ದ ನಡುಗುತ್ತಿತ್ತು.

ಈ ಮುಟ್ಠಾಳರು ಅವ್ವನನ್ನ ಮನೆಗೆ ಕರೆದುಕೆ ಹೋಗುವುದು ನಿಜವೇ ಎಂದು ಯೋಚಿಸು ಶ್ರೀನಿವಾಸ್ ಎದ್ದು ನಿಂತು "ನಡಿಯಜ್ಜಿ, ನಮ ಜೊತೆ ನೀನು ಇರು" ಎಂದರು.

ಕೂಡಲೇ ಅಜ್ಜಿ ಮಕ್ಕಳ ಕಣ್ಣು ಸಮಾಧಾನ ಮಿನುಗಿದವು. ಅವರಲ್ಲಿ ಹಿರಿಮಗ "ನಾಳಿಕ್ಕೆ ನಾನೇ ಕ ಬಂದು ಬುಡ್ತಿನಿ. ಇಲ್ಲ ಅಂದ್ರೆ ನಮ್ಮನಿಯೊಳ ಮಾಡಿ ಕಳುಸ್ತಿನಿ" ಎಂದ.

"ಬೇಡ ನಾನೇ ಕಾರು ತಂದು ಕರಕೊಂಡೋ ಆದ್ರೆ ಪರಮನೆಂಟಾಗಲ್ಲ. ನೀವು ಏನಾದ್ರು ತೀರ್ಮಾನಕ್ಕೆ ಬರಬೇಕು" ಎಂದರು ಶ್ರೀನಿವಾಸ್. ಆಜ್ಜಿ ಮಕ್ಕಳಿಗೆ ಈಗ ಸದ್ಯಕ್ಕೆ ಅಜ್ಜಿ ಕಣ್ಮರೆಯಾದರೆ ಸಾ

ಮರುದಿನ ಶ್ರೀನಿವಾಸ್ ಅಜ್ಜಿ ಕರೆದುಕೆ ಹೋಗಲು ಕಾರಿನಲ್ಲಿ ಬಂದಾಗ ಅವಳು ಜನ್ಮ ಕೊ ಖುಷಿ ಹೇಳತೀರದ್ದಾಗಿತ್ತು!

ಆದರೆ,

ಆಗಾಗ್ಗೆ ಬಂದು ಊಟ ಮಾಡಿಹೋಗುತ್ತಿದ ಇನ್ನು ಬರಲ್ಲವಲ್ಲ ಎಂದು ಪೊಲೀಸಪ್ಪ ಮತ್ತವರ ಭಾರವಾದ ಹೃದಯದಿಂದ ದುಃಖತಪ್ತರಾಗಿದ್ದರು. ಹೆ ಮಕ್ಕಳ ನಡವಳಿಕೆ ಅವರನ್ನು ಬೆಚ್ಚಿ ಬೀಳಿಸಿದಂತಿ

● ಬಿ. ಚಂದ್ರೇಗ

ಓದುಗರ ಗಮನಕ್ಕೆ

ಕಾರಣಾಂತರಗಳಿಂದ ಈ ವಾರವೂ ವಾಸುರವರ 'ಅಂಚಿನಿಂದ' ಅಂಕಣವು ಪ್ರಕಟವಾಗಿರುವುದಿಲ್ಲ... ಮುಂದಿನ ವಾರದಿಂದ ಎಂದಿನಂತೆ ಪ್ರಕಟವಾಗುವುದು.

–ಸಂ.

ಸೂರ್ಯ ಕಣ್ಣುಬಿಟ್ಟಾಗ.....



ಮೂಡಲ ಕೆಂಪಾಗಿ
ಸೂರ್ಯ ಕಣ್ಣರಳಿಸಿದಾಗ
ಹುಂಜ ಕೂಗಿದ್ದು
ನಾಯಿ ಬೊಗಳಿದ್ದು
ಪಕ್ಷಿಗಳು ಕಿವಿಗಡಚಿಕ್ಕಿದ್ದು
ಕೂಸು ಅಡುತ್ತಿದ್ದುದು
ಯಾರೂ ಗಮನಿಸಲೇಯಿಲ್ಲ

ಹೂವು ಅರಳಿನಿಂತು
ಸುವಾಸನೆ ಬೀರಿದರು
ಪಡೆಯಲು ದೇವರಿಗೆ
ಕೈಕಾಲುಗಳೇ ಇಲ್ಲ
ಹೊಳಪಬೇಗ ಎದ್ದು
ಕೆಲಸ ಮಾಡಬೇಕೆಂದರೂ
ಆತನಿಗೆ ಸ್ವಾಧೀನವೇಯಿಲ್ಲ
ಕೂಸು ಹರಿದಾಡುತ್ತ
ಮನೆಸುತ್ತಿ ಅಂಗಳಕೆ
ಬಂದರೂ ಅದಕೆ ಹೇಳಲು
ಬಾಯಿಯೇ ಇಲ್ಲ
ಹರೆಯದಾಕೆಯ ಒನಪು
ಹರೆಹುಡುಗನ ಶೋಂಭೇರಿತನಕೆ
ಈ ಪಕ್ಕದ ಬೆಳಕು
ದಕ್ಕಲೇಯಿಲ್ಲ

ರೈತ ಮುಗಿಲು ನೋಡದೆ
ತನ್ನ ಕಾಯದಿ
ಅಡಿಯಿಡುತ್ತ ಹೊಲ ಸೇರಿದಾಗ
ಬೆಳಗಿನನುಭವ ಆಗಲೇಯಿಲ್ಲ

ಮೂಲೆ ಸೇರಿದ ಮುದುಕಿ
ಕಾಯಿಲೆಯ ನರಳಾಟದಿ
ಆಗುವ ಕ್ರಿಯೆ ನೋಡುತ್ತಿದ್ದರು
ಮೇಲೇಳಲಾಗಲಿಲ್ಲ

● ಅಕ್ಬರ್ ಸಿ. ಕಾಲಿಮಿರ್ಚಿ

ಲಂಕೇಶ್ ಪ್ರಕಾಶನದ ಪುಸ್ತಕಗಳ

ಕರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದ
ಹೆಚ್ಚಿನ ಮಾಹಿತಿಗಾಗಿ ಫೋನ್: 080–26676427

ಪಿ.ಲಂಕೇಶರ ಕೃತಿಗಳು

ಕತೆ-ಕಾದಂಬರಿ

ಮುಸ್ಸಂಜೆಯ ಕಥಾ ಪ್ರಸಂಗ	250.00
ಬಿರುಕು	60.00
ಅಕ್ಕ	80.00
ಮಂಜು ಕವಿದ ಸಂಜೆ	85.00
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00
ಕಲ್ಲು ಕರಗುವ ಸಮಯ	125.00
ನಾನಲ್ಲ	60.00
ಕೆರೆಯ ನೀರನು ಕೆರೆಗೆ ಚೆಲ್ಲಿ	50.00
ಉಲ್ಲಂಘನೆ	80.00

ಲೇಖನಗಳ ಸಂಗ್ರಹಗಳು

ಟೀಕೆ–ಟಿಪ್ಪಣಿ 1	200.00
ಟೀಕೆ–ಟಿಪ್ಪಣಿ 2	200.00
ಟೀಕೆ–ಟಿಪ್ಪಣಿ 3	200.00
ಮರೆಯುವ ಮುನ್ನ–ಸಂಗ್ರಹ 1	150.00
ಮರೆಯುವ ಮುನ್ನ–ಸಂಗ್ರಹ 2	150.00
ಮರೆಯುವ ಮುನ್ನ–ಸಂಗ್ರಹ 3	150.00
ಮನಕೆ ಕಾರಂಜಿಯ ಸ್ಪರ್ಶ	150.00
ಈ ನರಕ ಈ ಪುಲಕ	125.00

ಆಟ–ಜೂಜು–ಮೋಜು!	150
ಸಾಹಿತಿ ಸಾಹಿತ್ಯ ವಿಮರ್ಶೆ	300
ರೂಪಕ ಲೇಖಕರು	70
ಕಂಡದ್ದು ಕಂಡಹಾಗೆ	100
ಪ್ರಸ್ತುತ	80
ಪಾಂಚಾಲಿ	150

ಲಂಕೇಶ್‌ರ ಕವನ ಸಂಗ್ರಹಗ

ನೀಲು ಕಾವ್ಯ –ಸಂಗ್ರಹ 1	150
ನೀಲು ಕಾವ್ಯ –ಸಂಗ್ರಹ 2	150
ನೀಲು ಕಾವ್ಯ –ಸಂಗ್ರಹ 3	200
ಚಿತ್ರ ಸಮೂಹ	90
ಅಕ್ಷರ ಹೊಸ ಕಾವ್ಯ	250
ಪಾಪದ ಹೂಗಳು	60

ಆತ್ಮಕಥನ

ಹುಳಿಮಾವಿನ ಮರ	250

ಲಂಕೇಶ್‌ರ ನಾಟಕಗಳು

ಬಿರುಕು	4
ಸಂಕ್ರಾಂತಿ	4
ತೆರೆಗಳು	5
ಈಡಿಪಸ್ ಮತ್ತು ಅಂತಿಗೊನೆ	6
ಟಿ. ಪ್ರಸನ್ನನ ಗೃಹಸ್ಥಾಶ್ರಮ	5
ಗುಣಮುಖ	3

ಫುಟ್‌ಬಾಲ್ ಹುಚ್ಚು ಹೆಚ್ಚಿಸಿಕೊಂಡಿರುವಾಗ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಪತ್ರಿಕೆಯ ಓದುಗರಲ್ಲಿ ಅದೆಷ್ಟು ಜನ ಬ್ರೆಜಿಲ್‌ನಲ್ಲಿ ...ಯುತ್ತಿರುವ ಫುಟ್‌ಬಾಲ್ ಪಂದ್ಯಗಳನ್ನು ನೋಡುತ್ತಿ...ರೋ ಗೊತ್ತಿಲ್ಲ. ನಮ್ಮ ಆಫೀಸಿನಲ್ಲಿ ಯಾರೂ ಅದರತ್ತ ...ಷ್ಟು ಗಮನ ಕೊಟ್ಟಿಲ್ಲ. ಹೆಚ್ಚೆಂದರೆ ನಮ್ಮ ಮ್ಯಾನೇಜರ್ ...ಮು ಅವರು ಪ್ರತಿಸಂಜೆ ಬಿತ್ತರಿಸಲ್ಪಡುತ್ತಿರುವ ಹೈಲೈಟ್ ...ಗಳನ್ನು ನೋಡುತ್ತಿದ್ದಾರೆ. ಇನ್ನು ನಮ್ಮ ಬಳಗದ ...ಪುರಂದರ್, ವಾಸು ತರಹದವರು ಇದರ ಬಗ್ಗೆ ಹೆಚ್ಚು ...ಸಕ್ತಿ ಹೊಂದಿಲ್ಲ.

ನಾನು ಕೂಡ ಮಧ್ಯರಾತ್ರಿ ಮತ್ತು ಬೆಳಗ್ಗಿನ ಜಾವ ...ಯುತ್ತಿರುವ ಪಂದ್ಯಗಳನ್ನೇನು ಕಾದಿದ್ದು ನೋಡುತ್ತಿಲ್ಲ. ...ದರೆ ಪ್ರತಿ ರಾತ್ರಿ 9.30ಕ್ಕೆ ನಡೆಯುವ ಪಂದ್ಯಗಳನ್ನು ...ದೇ ನೋಡಲು ಪ್ರಯತ್ನಿಸುತ್ತಿದ್ದೇನೆ ಮತ್ತು ಆ ಪಂದ್ಯಗಳ ...ಕ್ಷಣಾವನ್ನು ಆನಂದಿಸುತ್ತಿದ್ದೇನೆ.

ನಮ್ಮ ದೇಶದಲ್ಲಿ ಕ್ರಿಕೆಟ್ ಬಗ್ಗೆ ಹೆಚ್ಚು ಜನರಲ್ಲಿ ...ಕ್ತಿ ಇದ್ದರೂ ಅದ್ಯಾಕೋ ಮೊದಲಿನಿಂದಲೂ ಆ ಕ್ರೀಡೆಯು ... ನನಗೆ ಒಂದು ತರಹ ತಾತ್ಸಾರ. ಅದಕ್ಕೆ ಒಂದು ...ರಣ ನಾನು ಓದುತ್ತಿದ್ದ ಹೋಮ್ ಸ್ಕೂಲಿನಲ್ಲಿ ಕ್ರಿಕೆಟ್ ...ವಲಾಗಿ ಹಾಕಿಗೆ ಹೆಚ್ಚು ಒತ್ತುಕೊಡುತ್ತಿದ್ದದ್ದು ಇರಬೇಕು. ...ಗ ನಮ್ಮ ದೇಶದ ಕ್ರೀಡೆ ಎಂದು ಹಾಕಿಯನ್ನು ...ರುತಿಸಲಾಗುತ್ತಿತ್ತಲ್ಲದೆ ಆ ಆಟದಲ್ಲೇ ಭಾರತ ಎತ್ತಿದ ... ಎನಿಸಿಕೊಂಡಿತ್ತು. ಹಾಕಿಗೆ ಹೋಲಿಸಿದರೆ ಆಗ ಕ್ರಿಕೆಟ್‌ನಲ್ಲಿ ...ರತದ ಸಾಧನೆ ಏನೇನೂ ಇರಲಿಲ್ಲ.

ಪ್ರಾಯಶಃ ಇನ್ನೊಂದು ಕಾರಣ ಕ್ರಿಕೆಟ್ ಆಡಲು ...ಕಿದ್ದ ದುಬಾರಿ ಸಲಕರಣೆಗಳು. ಅವೆಲ್ಲ ಆಗ ನಮ್ಮ ...ಗಳಿಗೆ ಎಟಕುವಂತಿರಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ...ಕೆಟ್ ನನಗೆ ಬೋರ್ ಹೊಡೆಸುತ್ತಿತ್ತು. ಆಗೆಲ್ಲ ಐದೈದು ...ನಗಳ ಕಾಲ ನಡೆಯುತ್ತಿದ್ದ ಆ ಆಟ ನನ್ನ ಅಭಿಪ್ರಾಯದಲ್ಲಿ ...ಪೂರ್ಣ ಟೈಮ್ ವೇಸ್ಟ್ ಕ್ರಿಯೆಯಾಗಿತ್ತು. ಇತ್ತೀಚೆಗೆ ...ಕೆಟ್ ಭ್ರಷ್ಟವೂ, ಹಣ ಮಾಡುವ ಉದ್ಯಮವಾಗಿಯೂ ...ರಿವರ್ತನೆಗೊಂಡ ನಂತರವಂತೂ ಅದರ ಬಗೆಗಿನ ಅಸಹನೆ ...ನ್ನೂ ಹೆಚ್ಚಾಗಿದೆ. ಐಪಿಎಲ್ ಎಂಬ ಪ್ರಹಸನ ಶುರುವಾಗಿ ...ಳು ವರ್ಷಗಳಾಗಿದ್ದರೂ ನಾನು ಇಲ್ಲಿಯತನಕ ಒಂದೇ ...ಂದು 20-ಟ್ವೆಂಟಿ ಮ್ಯಾಚ್ ನೋಡಿಲ್ಲ ಎಂದರೆ ಆ ...ಡೆಯ ಬಗೆಗಿನ ನನ್ನ ಧೋರಣೆ ಅರ್ಥವಾಗುತ್ತದೆ ...ನಿಸುತ್ತದೆ.

ಫುಟ್‌ಬಾಲ್ ಬಗ್ಗೆ ನನ್ನಲ್ಲಿ ಆಸಕ್ತಿ ಹುಟ್ಟಿದ್ದು 1986ರಲ್ಲಿ. ...ಗ ಕಲರ್ ಟಿವಿ ಸೆಟ್‌ಗಳು ಬಂದಿದ್ದವಾದರೂ ಕೇಬಲ್ ...ವಸ್ಥೆ ಇರಲಿಲ್ಲ. ಆದರೆ ಫುಟ್‌ಬಾಲ್ ಅಭಿಮಾನಿಗಳ ...ದೃಷ್ಟಕ್ಕೆ ಸರ್ಕಾರಿ ಚಾನೆಲ್ ದೂರದರ್ಶನ ಆ ವರ್ಷ ಮೆಕ್ಸಿಕೋದಲ್ಲಿ ನಡೆದ ವಿಶ್ವಕಪ್ ಪಂದ್ಯಗಳನ್ನು ನೇರ ಪ್ರಸಾರ ಮಾಡಲು ಶುರು ಮಾಡಿತು. ತನ್ನ ವೃತ್ತಿ ಬದುಕನ್ನು ಕ್ರೀಡಾ ವರದಿಗಾರನಾಗಿ ಪ್ರಾರಂಭಿಸಿದ ಚಿದುಗೆ ಫುಟ್‌ಬಾಲ್‌ನಲ್ಲಿ ಆಸಕ್ತಿ ಇದ್ದಿದ್ದರಿಂದ ನಾನೂ ಅವನೊಂದಿಗೆ ರಾತ್ರಿಯೆಲ್ಲ ಎದ್ದಿದ್ದು ಆ ಮ್ಯಾಚ್‌ಗಳನ್ನು ನೋಡಲಾರಂಭಿಸಿದೆ.

ಅಷ್ಟು ಹೊತ್ತಿಗೆ ಪಿಲೆಯ ಕಾಲ ಮುಗಿದು ಹೊಸ ತಲೆಮಾರಿನ ಆಟಗಾರರು ಫುಟ್‌ಬಾಲ್ ಜಗತ್ತಿನಲ್ಲಿ ಸಂಚಲನ ಮೂಡಿಸಲಾರಂಭಿಸಿದ್ದರು. ವೈದ್ಯನೂ, ಸಂಗೀತಗಾರನೂ ಆಗಿದ್ದ ಬ್ರೆಜಿಲ್‌ನ ಸಾಕ್ರೆಟಿಸ್, ಪಾಸ್ ಮಾಡುವುದರಲ್ಲಿ ಎಕ್ಸ್‌ಪರ್ಟ್ ಆಗಿದ್ದ ಜರ್ಮನಿಯ ಹೆರಾಲ್ಡ್ ಶೂಮಾಕರ್, ಶ್ರೇಷ್ಠ ಆಟಗಾರರಲ್ಲಿ ಒಬ್ಬ ಎನಿಸಿದ್ದ ಫ್ರಾನ್ಸ್ ತಂಡದ ನಾಯಕ ಮಿಶೆಲ್ ಪ್ಲಾಟಿನಿ, ತನ್ನ ಆಟದ ಶೈಲಿಯಿಂದಲೇ ಎಲ್ಲರ ಗಮನ ಸೆಳೆದಿದ್ದ ಆರ್ಜೆಂಟೀನಾದ ಮರಡೋನ... ಇಂತಹ ಘಟಾನುಘಟಿಗಳಾಡುತ್ತಿದ್ದ ಆಟ ಸಹಜವಾಗಿಯೇ ನನ್ನನ್ನು ಆಕರ್ಷಿಸಿತ್ತು.

ಆ ವರ್ಷ ಪ್ಲಾಟಿನಿ ಪೆನಾಲ್ಟಿ ಶೂಟ್ ಔಟ್‌ನಲ್ಲಿ ಗೋಲ್ ಸಾಧಿಸುವಲ್ಲಿ ವಿಫಲರಾಗಿದ್ದು, ಜರ್ಮನಿ ವಿರುದ್ಧದ ಪಂದ್ಯದಲ್ಲಿ ಮರಡೋನಾ 'ಹ್ಯಾಂಡ್ ಆಫ್ ಗಾಡ್' ಎಂದು ಬಣ್ಣಿಸಿದ ವಿವಾದಾಸ್ಪದ ಗೋಲ್ ಬಾರಿಸಿದ್ದು ಇನ್ನೂ ಕಣ್ಣಿಗೆ ಕಟ್ಟಿದಂತಿದೆ... ಅಂದಿನಿಂದ ನಾನು ಪಕ್ಕಾ ಫುಟ್‌ಬಾಲ್ ಅಭಿಮಾನಿ ಆಗಿಲ್ಲದಿದ್ದರೂ ನಾಲ್ಕು ವರ್ಷಕ್ಕೊಮ್ಮೆ ಜರುಗುವ ವಿಶ್ವಕಪ್ ಅಭಿಮಾನಿಯಂತೂ ಆಗಿದ್ದೇನೆ. ಇದಕ್ಕೆ ಮುಖ್ಯಕಾರಣ ಈ ಪಂದ್ಯಾವಳಿಗಳಲ್ಲಿ ಜಗತ್ತಿನ ಬೆಸ್ಟ್ ಆಟಗಾರರು ಜಗತ್ತಿನ ಬೆಸ್ಟ್ ಕ್ರೀಡೆಯನ್ನು ಆಡುವುದು!

ಕ್ರಿಕೆಟ್‌ನಂತೆ ಫುಟ್‌ಬಾಲ್ 'ಸೋಂಭೇರಿ'ಗಳ ಆಟವಲ್ಲ. (ಅಂದಹಾಗೆ, ಭಾರತದ ಶ್ರೇಷ್ಠ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್‌ನ ದೇಹವನ್ನು ಓರ್ವ ಸಾಮಾನ್ಯ ಫುಟ್‌ಬಾಲ್ ಆಟಗಾರ ದೇಹದೊಂದಿಗೆ ಹೋಲಿಸಿ ನೋಡಿದರೆ ಈ ಎರಡೂ ಆಟಗಳ ನಡುವೆ ಇರುವ ವಿಭಿನ್ನತೆಗಳು ಸ್ಪಷ್ಟವಾಗುತ್ತವೆ!)

ಎರಡು ತಂಡಗಳ 22 ಪುರುಷರು ಪರಸ್ಪರ ಪೈಪೋಟಿಗೆ ಬಿದ್ದು ಒಂದು ಬಾಲ್‌ಗಾಗಿ 90 ನಿಮಿಷಗಳ ಕಾಲ ನಡೆಸುವ 'ಯುದ್ಧ' ಇದು. ಒಂದು ಅಂದಾಜಿನ ಪ್ರಕಾರ ಹಲವು ಆಟಗಾರರು ಆ 90 ನಿಮಿಷಗಳಲ್ಲಿ ಹತ್ತಕ್ಕಿಂತ ಹೆಚ್ಚು ಕಿಲೋಮೀಟರ್ ಓಡಿರುತ್ತಾರೆ. ಅದು ಸುಮ್ಮನೆ ಓಡುವುದಲ್ಲ, ಬಾಲ್ ಮತ್ತು ಚಲಿಸುತ್ತಿರುವ ತನ್ನ ದೇಹದ ಮೇಲೆ ನಿಯಂತ್ರಣವನ್ನಿಟ್ಟುಕೊಂಡು, ತನ್ನ ವೈರಿ ತಂಡದ ಆಟಗಾರರಲ್ಲದೆ ತನ್ನ ತಂಡದ ಇತರೆ ಸದಸ್ಯರು ಎಲ್ಲೆಲ್ಲಿದ್ದಾರೆ ಎಂಬುದನ್ನು ಗಮನಿಸುತ್ತಾ, ಗೆಲುವಿಗಾಗಿ ಯಾರತ್ತ ಚೆಂಡನ್ನು ಕಳುಹಿಸಬೇಕು ಎಂಬ ತಂತ್ರವನ್ನು ಮತ್ತು ವ್ಯೂಹವನ್ನು ರೂಪಿಸುತ್ತಾ ಸಾಗುವ ಕ್ರೀಡೆ ಇದು. ನನ್ನ ಪ್ರಕಾರ ಫುಟ್‌ಬಾಲ್ ಆಟವು ನೋಡುವ ಕಣ್ಣುಗಳಿಗೆ ಒಂದು ಉತ್ತಮ ಹಾಡು ಇದ್ದಂತೆ. ಆಟಗಾರರು ವಾದ್ಯಗಳಾಗಿದ್ದು ಅವರ ಚಲನೆ ರಾಗವಿದ್ದಂತೆ.

ಅಂತಹ ಒಂದು ಉತ್ತಮ 'ಹಾಡ'ನ್ನು ನಿನ್ನೆ ರಾತ್ರಿ ನೋಡಿದೆ. ಈ ಅಂಕಣದಲ್ಲಿ ಬರೆಯಲು ತಯಾರಿ ಮಾಡಿಕೊಳ್ಳಬೇಕಿದ್ದ ನಾನು ಅದನ್ನು ಬದಿಗಿಟ್ಟು ಟಿವಿ ಆನ್ ಮಾಡಿದೆ. ಯಾಕೆಂದರೆ ಬುಧವಾರ ರಾತ್ರಿ ಆರ್ಜೆಂಟೀನಾ ಮತ್ತು ನೈಜೀರಿಯಾ ತಂಡಗಳ ನಡುವೆ ಮ್ಯಾಚ್ ನಡೆಯುವುದಿತ್ತು. ಎರಡೂ ಉತ್ತಮ ಆಟಗಾರರಿರುವ ಸಮಬಲದ ತಂಡಗಳೇ.

ಆದರೆ ಆಟ ಶುರುವಾಗಿ ಮೂರು ನಿಮಿಷಗಳಷ್ಟೇ ಆಗಿತ್ತು. ಆಗ ಅರ್ಜೆಂಟೀನಾ ತಂಡದ ನಾಯಕ ಲಿಯೊನೆಲ್ ಮೆಸ್ಸಿ ತಮ್ಮ ಕಾಲ್ಚಳಕವನ್ನು ಪ್ರದರ್ಶಿಸಿದರು. ತನ್ನತ್ತ ಸಾಗಿ ಬಂದ ಬಾಲ್‌ಅನ್ನು



ಮೆಸ್ಸಿ ಅದೆಷ್ಟು ಕರಾರುವಾಕ್ಕಾಗಿ ಒದ್ದರೆಂದರೆ ಅದು ಇಬ್ಬರು ನೈಜೀರಿಯಾದ ಆಟಗಾರರ ನಡುವೆ ನುಸುಳಿಕೊಂಡು ಗೋಲ್ ಸೇರಿತು. ಆದರೆ ನೈಜೀರಿಯಾ ತಂಡವೇನು ಸುಮ್ಮನಿರಲಿಲ್ಲ. ಮರು ನಿಮಿಷವೇ ಅಹಮದ್ ಮೂಸಾ ಕೂಡ ಒಂದು ಗೋಲ್ ಬಾರಿಸಿದರು. ಆನಂತರ ಅರ್ಜೆಂಟೀನಾ ತಂಡದವರೇ ಹೆಚ್ಚು ಕಾಲ ಬಾಲ್ ಮೇಲೆ ನಿಯಂತ್ರಣ ಹೊಂದಿದ್ದರೂ ಗೋಲ್ ಬಾರಿಸುವ ಅವರ ಎಲ್ಲ ಪ್ರಯತ್ನಗಳನ್ನು ನೈಜೀರಿಯಾ ತಂಡದ ಗೋಲ್‌ಕೀಪರ್ ವಿನ್ಸೆಂಟ್ ಎನಿಮಾ ವಿಫಲಗೊಳಿಸುತ್ತಿದ್ದರು. ಎರಡು ಬಾರಿ ಮೆಸ್ಸಿಗೆ ಫ್ರೀ ಕಿಕ್ ಹೊಡೆಯುವ ಅವಕಾಶ ಸಿಕ್ಕಿತು. ಮೊದಲ ಬಾರಿ ನೇರವಾಗಿ ಬಾಲ್ ಅನ್ನು ಗೋಲ್ ಕಡೆ ಮೆಸ್ಸಿ ಬಾರಿಸಿದರಾದರೂ ಅದನ್ನು ಎನಿಮಾ ಯಶಸ್ವಿಯಾಗಿ ತಡೆದರು. ಆದರೆ ಎರಡನೆ ಫ್ರೀ ಕಿಕ್ ನೈಜೀರಿಯಾದ ಸದಸ್ಯರ ತಲೆಗಳ ಮೇಲೆ ಹಾರಿ, ಗಾಳಿಯಲ್ಲಿ ಕಮಾನಾಗಿ ತಿರುಗಿ ಗೋಲ್ ಪ್ರವೇಶಿಸಿತು. ಅದೂ ಎಷ್ಟು ವೇಗವಾಗಿ ಎಂದರೆ ಗೋಲ್‌ಕೀಪರ್ ಎನಿಮಾ ಅದನ್ನು ತಡೆಯುವ ಗೋಜಿಗೂ ಹೋಗಲಿಲ್ಲ.

ಕೊನೆಗೆ ಈ ಪಂದ್ಯವನ್ನು ಅರ್ಜೆಂಟೀನಾ 3-2 ಗೋಲ್‌ಗಳ ಅಂತರದಲ್ಲಿ ಗೆದ್ದಿತು. ಅದಕ್ಕಿಂತ ಮುಖ್ಯವಾಗಿ ಇದು ನನ್ನ ಕಣ್ಣುಗಳಿಗೆ ರಸದೌತಣ ನೀಡಿತ್ತು!

ವಿಶ್ವಕಪ್ ಫುಟ್‌ಬಾಲ್ ಅನ್ನು ಇಷ್ಟಪಡುವ ನಾನು ಅದನ್ನು ನಡೆಸುವ ಫಿಫಾ ಸಂಘಟನೆಯನ್ನೇನು ಮೆಚ್ಚಿಕೊಂಡಿಲ್ಲ. ಈ ಸಂಘಟನೆಯೂ ಈಗ ಭ್ರಷ್ಟಗೊಂಡಿದ್ದು ಹಲವಾರು ಹಗರಣಗಳಲ್ಲಿ ಭಾಗಿ ಆಗಿದೆ. ಅದಕ್ಕೊಂದು ಉದಾಹರಣೆ 2022ರ ವಿಶ್ವಕಪ್ ಅನ್ನು ಕಾತರ್ ದೇಶದಲ್ಲಿ ನಡೆಸಲು ನಿರ್ಧರಿಸಿರುವುದು. ಹೇಳಿಕೇಳಿ ಕಾತರ್ ಮರುಭೂಮಿ. ಅಲ್ಲಿನ ಬೇಸಿಗೆಯಲ್ಲಿ ಸೆಖೆ ಅದೆಷ್ಟು ಇರುತ್ತದೆ ಎಂದರೆ ಅಲ್ಲಿ ಫುಟ್‌ಬಾಲ್ ಆಟವಾಡುವುದೇ ಅಸಾಧ್ಯ. ಹಾಗಿದ್ದರೂ ಫಿಫಾ ಸಂಸ್ಥೆಯು ಕಾತರ್ ಅನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ಕಾರಣ ಲಂಚ ಎಂಬ ಆರೋಪಗಳು ಕೇಳಿಬರುತ್ತಿವೆ.

ಫಿಫಾ ಸಂಸ್ಥೆ ಈಗ ಅದೆಷ್ಟು ಬಲಿಷ್ಠವಾಗಿದೆ ಎಂದರೆ ಅದು ಒತ್ತಡ ತಂದು ದೇಶಗಳ ಕಾನೂನುಗಳನ್ನೇ ಬದಲಾಯಿಸುತ್ತದೆ. ಬ್ರೆಜಿಲ್ ದೇಶದಲ್ಲಿ ಆದದ್ದೂ ಅದೆ. ಈ ಹಿಂದೆ ಫುಟ್‌ಬಾಲ್ ಪಂದ್ಯಗಳು ಜರುಗಿದಾಗ ವೈರಿ ತಂಡಗಳ ಬೆಂಬಲಿಗರು ಆಟ ಮತ್ತು ಕುಡಿತದ ಅಮಲೇರಿಸಿಕೊಂಡು ಪರಸ್ಪರ ಕಿತ್ತಾಡಿಕೊಂಡು ಸತ್ತ ಉದಾಹರಣೆಗಳು ಆ ದೇಶದಲ್ಲಿ ಇವೆ. ಈ ಕಾರಣಕ್ಕೇ ಬ್ರೆಜಿಲ್ ದೇಶದಲ್ಲಿ ಫುಟ್‌ಬಾಲ್ ಸ್ಟೇಡಿಯಂಗಳಲ್ಲಿ ಮದ್ಯವನ್ನು ಮಾರಬಾರದು ಎಂಬ ಕಾನೂನನ್ನು ಜಾರಿಗೆ ತರಲಾಗಿತ್ತು. ಆದರೆ ಫಿಫಾಗೆ ದೊಡ್ಡ ಪ್ರಮಾಣದಲ್ಲಿ ಜಾಹೀರಾತುಗಳನ್ನು ನೀಡುವ ಕಂಪನಿ ಬಿಯರ್ ತಯಾರಿಸುವ ಬಡ್ವೈಸರ್. ಈ ಕಾರಣಕ್ಕೆ, ವಿಶ್ವಕಪ್ ಫುಟ್‌ಬಾಲ್ ನಡೆಯುವಾಗ ಸ್ಟೇಡಿಯಂಗಳಲ್ಲಿ ಬಡ್ವೈಸರ್ ಬಿಯರ್ ಅನ್ನು ಮಾರಾಟ ಮಾಡಲು ಅನುಕೂಲವಾಗುವಂತೆ ಬ್ರೆಜಿಲ್ ದೇಶ ತನ್ನ ಕಾನೂನನ್ನೇ ಬದಲಾಯಿಸುವ ಮಟ್ಟಕ್ಕೆ ಫಿಫಾ ಒತ್ತಡ ಹೇರಿತು. ಅದರಲ್ಲಿ ಯಶಸ್ವಿಯೂ ಆಯಿತು. ಈಗ ಅದನ್ನು ಬ್ರೆಜಿಲ್ ಜನ 'ಬಡ್ವೈಸರ್ ಬಿಲ್' ಎಂದೇ ಲೇವಡಿ ಮಾಡುತ್ತಿದ್ದಾರೆ. ಇದರರ್ಥ: ಜನ ಸತ್ತರೆಷ್ಟು ಬಿಟ್ಟರೆಷ್ಟು ಫಿಫಾಗೆ ಹಣ ಬಂದರೆ ಸಾಕು!

ಇಂತಹ ವಿಮರ್ಶೆಗಳ ನಡುವೆಯೂ ನಾನು ಫುಟ್‌ಬಾಲ್ ಪಂದ್ಯಗಳನ್ನು ಆನಂದಿಸುತ್ತಿದ್ದೇನೆ. ಜುಲೈ 14 ರಂದು ನಡೆಯಲಿರುವ ಫೈನಲ್ ಪಂದ್ಯದಲ್ಲಿ ಆರ್ಜೆಂಟೀನಾ ಅಥವಾ ಬ್ರೆಜಿಲ್ ಗೆಲ್ಲಲಿ ಎಂಬ ಹಂಬಲ ನನ್ನದು. ಆದರೆ ಯಾರು ಗೆದ್ದರೂ, ಯಾರು ಸೋತರು ಫುಟ್‌ಬಾಲ್ ಆಟವಂತೂ ಮತ್ತೊಮ್ಮೆ ಯಶಸ್ವಿಯಾಗುತ್ತದೆ ಎಂಬ ನೆಮ್ಮದಿಯಂತೂ ಇದೆ. ●



ಅಪ್ಪನ ಒಂದು ಹಳೆಯ ಫೋಟೋ

ಮೊನ್ನೆ ಅಭಿರುಚಿ ಗಣೇಶ್ ಅವರು ಫೇಸ್‌ಬುಕ್ ಮೂಲಕ ನನಗೊಂದು ಫೋಟೊ ಕಳುಹಿಸಿ "ಇವರು ಯಾರೆಂದು ಬಲ್ಲಿರಾ?" ಎಂದು ಪ್ರಶ್ನಿಸಿದರು. ಅದನ್ನು ನೋಡುತ್ತಿದ್ದಂತೆ ಅದು ನನ್ನ ಅಪ್ಪನ ಫೋಟೊ ಎಂದು ಗೊತ್ತಾಯಿತು. ಅದನ್ನು ನಾನು ಇಲ್ಲಿಯತನಕ ನೋಡೇ ಇರಲಿಲ್ಲ.

"ಇದು ನನ್ನಪ್ಪ! ನಿಮಗೆ ಇದು ಎಲ್ಲಿ ಸಿಕ್ಕಿತು?" ಎಂದು ಗಣೇಶರನ್ನು ಕೇಳಿದೆ. ಅದಕ್ಕವರು "ಶಿವಮೊಗ್ಗೆಯಲ್ಲಿ ಯಾರೋ ಕೊಟ್ಟಂತೆ ನೆನಪು. ಪ್ರಾಯಶಃ ಲಂಕೇಶರ ಸಹಪಾಠಿಯೊಬ್ಬರು ಕೊಟ್ಟರು ಎನಿಸುತ್ತದೆ. ಆದರೆ ಯಾರು ಅನ್ನೋದು ಮರೆತುಹೋಗಿದೆ" ಎಂದರು.

ಈ ಚಿತ್ರದಲ್ಲಿರುವ ಲಂಕೇಶರನ್ನು ನೋಡಿದರೆ ಇದನ್ನು ತೆಗೆದಾಗ ಅವರಿಗೆ ಹದಿನೇಳು ಅಥವಾ ಹದಿನೆಂಟು ವರ್ಷ ವಯಸ್ಸಾಗಿರಬೇಕು ಎನಿಸುತ್ತದೆ. ಅಂದರೆ ಅವರು 'ಶಿವಮೊಗ್ಗೆಯ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಓದುತ್ತಿದ್ದಾಗ (1953-55) ಅವರ ಸಹಪಾಠಿಗಳೊಂದಿಗೆ ತೆಗೆಸಿಕೊಂಡಿದ್ದಿರಬಹುದು.

ಈ ಚಿತ್ರದಲ್ಲಿ ಇರುವ ಇತರರು ಯಾರೆಂಬುದು ಗೊತ್ತಿಲ್ಲ. ಯಾರಿಗಾದರೂ ಇವರಲ್ಲಿ ಇರುವವರ ಗುರುತು ಸಿಕ್ಕರೆ, ಅಥವಾ ಈ ಫೋಟೋ ಬಗ್ಗೆ ಹೆಚ್ಚಿನ ಮಾಹಿತಿ ಇದ್ದರೆ ದಯವಿಟ್ಟು ನಮಗೆ ತಿಳಿಸಿ.

ಅಪ್ಪನ ಇಂತಹ ಚೆನ್ನಾದ ಫೋಟೋ ಕಳುಹಿಸಿದ ಅಭಿರುಚಿ ಗಣೇಶ್ ಅವರಿಗೆ ಧನ್ಯವಾದಗಳು. ಈ ಟಿಪ್ಪಣಿಯೊಂದಿಗೆ ಆ ಫೋಟೋವನ್ನು ನಿಮ್ಮೆಲ್ಲರೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

-ಗೌರು (ನನ್ನಪ್ಪ ನನ್ನನ್ನು ಕರೆಯುತ್ತಿದ್ದದ್ದೇ ಹೀಗೆ!)

ನೈತಿಕ ಪೊಲೀಸುಗಿರಿಯ ಹೊಸ ವರಸೆ

ವಿವಾದಾಸ್ಪದ ಅನಂತಮೂರ್ತಿ ಹೇಳಿಕೆ

ಹಿರಿಯ ಲೇಖಕ ಮತ್ತು ಚಿಂತಕ ಯು.ಆರ್. ಅನಂತಮೂರ್ತಿಯವರು ದೇವರ ಮೂರ್ತಿಯ ಮೇಲೆ ಮೂತ್ರ ವಿಸರ್ಜಿಸಿ ಎಂದೂ ಎಲ್ಲೂ ಹೇಳಿಲ್ಲ, ಬರೆದಿಲ್ಲ. ಆದರೆ ಅವರು ಹಾಗೆ ಹೇಳಿದ್ದಾರೆಂದು ಅವರ ವಿರುದ್ಧ ದೂರನ್ನು ದಾಖಲಿಸಲಾಗಿದೆಯಲ್ಲದೆ ಕೆಲವು ಪತ್ರಿಕೆಗಳು ಅವರ ವಿರುದ್ಧ ಅಪಪ್ರಚಾರದ ಆಂದೋಲನವನ್ನೇ ನಡೆಸಿವೆ. ಈ ಹಿನ್ನೆಲೆಯಲ್ಲಿ ಈ ಎರಡು ಲೇಖನಗಳನ್ನು ಪ್ರಕಟಿಸುತ್ತಿದ್ದೇವೆ.

ಇದು ಒಂದು ಪತ್ರಿಕಾ ವರದಿ; ಇದೇ ವಿಷಯದ ಬಗ್ಗೆ ಹಲವು ಪತ್ರಿಕೆಗಳಲ್ಲಿ ಬರುತ್ತಿರುವ ಇಂತಹದ್ದೇ ವರದಿಗಳ ಒಂದು ಮಾದರಿ ಎಂದೂ ಇದನ್ನು ಓದಬಹುದು.


ಮಂಗಳೂರು, ಜೂನ್ 20: ಸಾಹಿತಿ ಯು.ಆರ್. ಅನಂತಮೂರ್ತಿ ಅವರು ತಮ್ಮ 'ಬೆತ್ತಲೆ ಪೂಜೆ ಯಾಕೆ ಮಾಡಬಾರದು' ಎಂಬ ಪುಸ್ತಕದಲ್ಲಿ ಹಿಂದೂಗಳು ಅಪಾರ ನಂಬಿಕೆ ಇಟ್ಟಿರುವ ಪಂಜುರ್ಲಿ ದೈವದ ಕೋಲವನ್ನು ನಟನೆ ಎಂದು ಹೇಳಿದ್ದಲ್ಲದೆ ಅದೇ ದೈವದ ಕಲ್ಲಿನ ಮೇಲೆ ಉಚ್ಚೆ ಹೊಯ್ದಿದ್ದೇನೆ ಎಂದೂ ಹೇಳಿ ಹಿಂದೂಗಳ ನಂಬಿಕೆಗೆ ಘಾಸಿ ಉಂಟುಮಾಡಿದ್ದಾರೆ ಎಂದು ಆರೋಪಿಸಿ, ಭಜರಂಗ ದಳದ ಜಿಲ್ಲಾ ಪ್ರಮುಖ್, ಯು.ಆರ್. ಅನಂತಮೂರ್ತಿ ಮತ್ತು ಬೆಂಗಳೂರಿನ ವಸಂತ ಪ್ರಕಾಶನದ ವಿರುದ್ಧ ಮಂಗಳೂರಿನ ಬಂದರು ಪೊಲೀಸು ಠಾಣೆಗೆ ದೂರು ಸಲ್ಲಿಸಿ ಆರೋಪಿಗಳ ಮೇಲೆ ಕಾನೂನಿನ ಕ್ರಮ ಜರುಗಿಸಬೇಕು ಹಾಗೂ ಪುಸ್ತಕವನ್ನು ನಿಷೇಧಿಸಬೇಕು ಎಂದು ಒತ್ತಾಯಿಸಿದ್ದಾರೆ. ದೂರು ಸ್ವೀಕರಿಸಿರುವ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದಾರೆ. (ಉದಯವಾಣಿ ತಾ: 21.6.2014, ಪುಟ 10)

ಮೇಲಿನ ವರದಿಯಲ್ಲಿ ಹೇಳಲಾಗಿರುವ ಅನಂತಮೂರ್ತಿಯವರ ಪುಸ್ತಕದ ಸರಿಯಾದ ಹೆಸರು 'ಬೆತ್ತಲೆ ಪೂಜೆ ಯಾಕೆ ಕೂಡದು?'. ಪಂಜುರ್ಲಿ ದೈವದ ಕೋಲವನ್ನು ತನ್ನ ಬರಹದಲ್ಲಿ ಎಲ್ಲಿಯೂ ಅವರು ಪ್ರಸ್ತಾಪಿಸಿಯೇ ಇಲ್ಲ. ಈ ಪುಸ್ತಕದ ಬಗ್ಗೆ ಪೊಲೀಸು ಠಾಣೆಗೆ ದೂರು ಕೊಟ್ಟಿರುವ ಭಜರಂಗಿ ಪುಸ್ತಕವನ್ನು ಓದುವುದು ಒತ್ತಟ್ಟಿಗಿರಲಿ ನೋಡಿಯೂ ಇಲ್ಲ. ಈ ಅನಕ್ಷರಸ್ಥ ಕನ್ನಡದ ಹಿರಿಯ ಲೇಖಕರೊಬ್ಬರ ಕೃತಿಯ ಬಗ್ಗೆ ಪೊಲೀಸರಿಗೆ ದೂರು ಕೊಡುತ್ತಾರೆ! ಪೊಲೀಸರು ಅದನ್ನು ದಾಖಲಿಸಿ ಕೊಳ್ಳುತ್ತಾರೆ; ದೂರು ಮುಂದೆ ನ್ಯಾಯಾಲಯದಲ್ಲಿ ಮೊಕದ್ದಮೆಯೂ ಆಗಬಹುದು. ಅನಂತಮೂರ್ತಿಯವರಿಗೆ ವಿನಾಕಾರಣ ಆಗುತ್ತಿರುವ ಉಪದ್ರವವನ್ನು ಮರೆತರೆ, ಈ ಭಜರಂಗಿಗಳು, ಪೊಲೀಸು ಠಾಣೆಗಳು, ನ್ಯಾಯಾಲಯಗಳು ಎಷ್ಟು ಹಾಸ್ಯಾಸ್ಪದ! ಅನಂತಮೂರ್ತಿ ಹೇಳಿದ್ದಾರೆ ಎನ್ನಲಾಗಿರುವ ಒಂದು ಮಾತು, ಒಂದೆರಡು ವಾರಗಳಿಂದ ಕೆಲವು ಟೀವಿ ಚಾನೆಲ್ಲು ಮತ್ತು ಪತ್ರಿಕೆಗಳಿಗೆ ಯಥೇಚ್ಛ ಮೇವು ಒದಗಿಸಿದೆ. ವಾಸ್ತವವಾಗಿ ಅನಂತಮೂರ್ತಿ ಹೇಳಿದ್ದಾದರೂ ಏನು?

1986 ರಲ್ಲಿ ಬರೆದ 'ಬೆತ್ತಲೆ ಪೂಜೆ ಯಾಕೆ ಕೂಡದು- ತನ್ನ ಕಾಲವನ್ನು ಕುರಿತ ಲೇಖಕನೊಬ್ಬ ಚಿಂತನೆ' ಎಂಬ ಪ್ರಬಂಧದಲ್ಲಿ ಅನಂತಮೂರ್ತಿ ತನ್ನ ಬಾಲ್ಯದ ಒಂದು ಘಟನೆಯನ್ನು ನೆನಪಿಸಿಕೊಂಡು ಈ ಮಾತುಗಳನ್ನು ಬರೆದಿದ್ದಾರೆ. ಭಕ್ತಿಯ ಪರವಶತೆ ಮತ್ತು ಆಧುನಿಕತೆಯ ಸ್ವಪ್ರಜ್ಞೆಗಳ ವಿರುದ್ಧ ಸೆಳೆತಗಳಿಗೆ ಸಿಕ್ಕ ತನ್ನ ಸ್ಥಿತಿಯನ್ನು ವಿವರಿಸುತ್ತ ಅನಂತಮೂರ್ತಿ ಹೀಗೆ ಹೇಳುತ್ತಾರೆ, "........... ನನ್ನ ಬಾಲ್ಯದ ಪೌರಾಣಿಕ ಪ್ರಪಂಚವನ್ನು ಸೀಳಿಕೊಂಡು ಬೆಳೆದವನು ನಾನು. ನನ್ನನ್ನು ಮೀರಿದ ಅಜ್ಞಾತಶಕ್ತಿಗಳು ಇಲ್ಲ ಎಂದು ನನಗೆ ನಾನು ದೃಢಪಡಿಸಿಕೊಳ್ಳುವುದಕ್ಕಾಗಿ ನಮ್ಮ ಹಳ್ಳಿಯ ಮರಗಳ ಕೆಳಗಿದ್ದ ದೆವ್ವದ ಕಲ್ಲುಗಳ ಮೇಲೆ ನಾನು ಮೂತ್ರ ವಿಸರ್ಜನೆ ಮಾಡಿದ್ದಿದೆ. ಭಯದಿಂದ ನಿದ್ದೆಗೆಟ್ಟ ಆ ದಿನದ ರಾತ್ರಿಗಳು ನೆನಪಾಗುತ್ತವೆ. ಆಗ ನನ್ನನ್ನು ಕವಿದಿದ್ದ ಸಕಲವೂ ಪವಿತ್ರವೆಂಬ ದೃಷ್ಟಿಯಿಂದ ಬಿಡುಗಡೆಯಾಗುವ ಸಂಕಟವೇ ನನ್ನ ಯೌವ್ವನದ ಕಥೆಗಳಲ್ಲಿ ಕಾಣುವುದು ನಿಜ. ಕವಿಯ ಉತ್ಕಟತೆ ಮತ್ತು ಪರವಶತೆ ನನ್ನದಲ್ಲ, ಎಲ್ಲ ಒಡಕುಗಳನ್ನೂ ಗಮನಿಸುವ ಕಥೆಗಾರ ನಾನು. ಮಾರ್ಕ್ಸ್‌ವಾದವನ್ನೂ ಅನುಭಾವವನ್ನೂ ಸತತವಾದ ಚಲನಶೀಲ ಕ್ರಿಯೆಯಲ್ಲಿ ಒಟ್ಟಿಗೆ ಹಿಡಿದಿರುವ ನನ್ನ ಬಯಕೆ ನಿಜವಾಗಲಾರದು.." (ಬೆತ್ತಲೆ ಪೂಜೆ ಯಾಕೆ ಕೂಡದು, ಅಕ್ಷರ ಪ್ರಕಾಶನ, ಸಾಗರ, 1996, ಪುಟ 39).

ಅನಂತಮೂರ್ತಿಯವರಿಗೆ ಈಗ 82 ರ ಹರೆಯ; ಅಂದರೆ 1940 ರ ಸುಮಾರಿಗೆ ನಡೆದ ತಮ್ಮ ಬಾಲ್ಯದ ಒಂದು ಪ್ರಸಂಗವನ್ನು ನೆನಪು ಮಾಡಿಕೊಂಡು ಅವರು ಇಲ್ಲಿ ಹೇಳುತ್ತಿದ್ದಾರೆ. ಪೊಲೀಸರಿಗೆ ಈಗ ದೂರು ಕೊಡುವಂತಹ ಅಥವಾ ನ್ಯಾಯಾಲಯ ಕೇಸು ದಾಖಲಿಸುವಂತಹ ತಕ್ಸೀರು ಈ ಪ್ರಕರಣದಲ್ಲಿ ಎಲ್ಲಿದೆ? ದೂರುದಾರ, ಸಾಕ್ಷಿ ಮತ್ತು ನ್ಯಾಯಾಧೀಶ ಎಲ್ಲ ಪಾತ್ರಗಳನ್ನು ತಾವೇ ನಿರ್ವಹಿಸುತ್ತಿರುವ ಭಜರಂಗಿಗಳು ಮತ್ತು ಭಜರಂಗಿ ಪತ್ರಕರ್ತರು ಅನಂತಮೂರ್ತಿ ಮಾಡಿದ ಅಪರಾಧವಾದರೂ ಏನು ಎಂದು ತಿಳಿಸಬೇಕು. 'ಬೆತ್ತಲೆ ಸೇವೆ ಯಾಕೆ ಕೂಡದು?'- ಪ್ರಬಂಧ 35 ಪುಟಗಳಷ್ಟು ದೀರ್ಘವಾಗಿದ್ದು ಆಧುನಿಕ ಕನ್ನಡದ ಮಹತ್ವದ ಲೇಖಕರಾದ ಎಂ.ಎಸ್. ಪುಟ್ಟಣ್ಣ, ಮಾಸ್ತಿ, ಕುವೆಂಪು, ಕಾರಂತ, ಬೇಂದ್ರೆ, ಅಡಿಗ, ಚದುರಂಗ, ಲಂಕೇಶ್, ತೇಜಸ್ವಿ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಎ.ಕೆ. ರಾಮಾನುಜನ್, ದೇವನೂರ ಮಹದೇವ ಮುಂತಾದ ಲೇಖಕರು ಪರಂಪರೆ ಮತ್ತು ಆಧುನಿಕತೆಗಳ ನಡುವಿನ ಬಿಕ್ಕಟ್ಟನ್ನು ತಮ್ಮ ಕೃತಿಗಳಲ್ಲಿ ಹೇಗೆ ನಿರ್ವಹಿಸುತ್ತಾರೆ ಎಂಬುದನ್ನು ನಿರೂಪಿಸುತ್ತದೆ. ಆ ಸಂದರ್ಭದಲ್ಲಿ ಅನಂತಮೂರ್ತಿ, ಲೇಖಕನಾಗಿ ತನ್ನ ಅನುಭವಗಳ ಬಗ್ಗೆಯೂ ಹೇಳುತ್ತ ಮೇಲಿನ ಘಟನೆಯನ್ನು ಪ್ರಸ್ತಾಪಿಸುತ್ತಾರೆ. ಯಾರ ನಂಬಿಕೆಯನ್ನೂ ಘಾಸಿಗೊಳಿಸುವುದು ಅವರ ಉದ್ದೇಶವಾಗಿರಲಿಲ್ಲ; ನಾಸ್ತಿಕವಾದವನ್ನು ಎತ್ತಿ ಹಿಡಿಯಲು ಅವರು ಇದನ್ನು ಹೇಳಿದ್ದೂ ಅಲ್ಲ.

'ಬೆತ್ತಲೆ ಪೂಜೆ ಯಾಕೆ ಕೂಡದು?' ಪ್ರಬಂಧದ ಒಂದು ಮಾತಿನ ಬಗ್ಗೆ ಇಷ್ಟೆಲ್ಲ ರಾದ್ಧಾಂತ ನಡೆದಿದ್ದರೂ, ಆ ಪ್ರಬಂಧವನ್ನು ಅನಂತಮೂರ್ತಿ ಬರೆದ ಸಂದರ್ಭವನ್ನೂ ಯಾರೂ ನೆನಪಿಸಿಕೊಳ್ಳದಿರುವುದಕ್ಕೆ ಏನು ಕಾರಣ? ಅದು ಸಾಂಸ್ಕೃತಿಕ ವಿಸ್ಮೃತಿಯೆ? ಅಥವಾ ಈ ಕಾಲವೇ ಮನಸ್ಸಿಗೆ ಮಂಕು ಹಿಡಿಸುವಂತಹದ್ದೆ? ಕೇವಲ 28 ವರ್ಷಗಳ ಹಿಂದೆ ಕರ್ನಾಟಕದಲ್ಲಿ ನಡೆದ ಮೌಲಿಕ ಹೋರಾಟವೊಂದು ಅನಂತಮೂರ್ತಿಯವರ ಈ ಪ್ರಬಂಧಕ್ಕೆ ಕಾರಣವಾಯಿತು. ಆದರೆ ಆ ಹೋರಾಟದ ನೆನಪು ಸಹ ಈಗ ಅಳಿಸಿಹೋಗಿದೆ. ಇದರ ಅರ್ಥವೇನು ಎಂದು ನಾವು ಯೋಚಿಸಬೇಕು.



ಕರ್ನಾಟಕದ ಸೊರಬ ತಾಲೂಕಿನ ಚಂದ್ರಗುತ್ತಿ, ಬೆಳಗಾವಿ ಸಮೀಪದ ಸವದತ್ತಿ ಮುಂತಾದ ಊರುಗಳಲ್ಲಿ ಹರಕೆ ಹೊತ್ತು ಊರಿನ ದೈವ ರೇಣುಕಾಂಬ/ಎಲ್ಲಮ್ಮನ ಎದುರು ಬೆತ್ತಲೆ ಸೇವೆ ಸಲ್ಲಿಸುವ ಸಂಪ್ರದಾಯವಿದೆ; ಇದನ್ನು ನಡೆಸುವವರಲ್ಲಿ ಬಹುತೇಕ ಜನ ಕೆಳಜಾತಿಯವರು, ಬಡವರು, ಅನಕ್ಷರಸ್ಥರು ಮತ್ತು ಹೆಂಗಸರು. ಈ ಹರಕೆ, ವೇಶ್ಯಾವೃತ್ತಿಗೆ ಧಾರ್ಮಿಕ ಸಮ್ಮತಿಯನ್ನು ನೀಡುವಂತಹದ್ದೂ ಆಗಿದೆ. 70 ರ ದಶಕದಲ್ಲಿ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ, ಬಂಡಾಯ ಸಾಹಿತ್ಯ ಸಂಘಟನೆ ಮುಂತಾದ ಸಂಘಟನೆಗಳು ಬೆತ್ತಲೆ ಸೇವೆ ಆಚರಣೆಯನ್ನು ಸರ್ಕಾರ ನಿಷೇಧಿಸಬೇಕು ಎಂದು ಒತ್ತಾಯಿಸಲು ಪ್ರಾರಂಭಿಸಿದವು. 1986 ರಲ್ಲಿ ಚಂದ್ರಗುತ್ತಿಯಲ್ಲಿ ಸಾಮೂಹಿಕ ಬೆತ್ತಲೆ ಸೇವೆ ನಡೆಯುತ್ತಿದ್ದ ಸಂದರ್ಭದಲ್ಲಿ ಆ ಆಚರಣೆ ವಿರುದ್ಧ ಸ್ಥಳದಲ್ಲೇ ಪ್ರತಿಭಟನೆ ನಡೆಯಿತು.



ಈ ಪ್ರತಿಭಟನೆ ಹಿಂಸಾತ್ಮಕವಾಗಿರಲಿಲ್ಲ, ಆದಾಗ್ಯೂ ಅದು ಬೆತ್ತಲೆಸೇವೆ ಮಾಡುತ್ತಿದ್ದವರನ್ನು ಕೆರಳಿಸಿತು. ಅವರು ಈ ಪ್ರತಿಭಟನಾಕಾರರನ್ನು ಅಟ್ಟಿಸಿಕೊಂಡು ಹೋಗಿ ಚೆನ್ನಾಗಿ ಬಾರಿಸಿದರು; ಪತ್ರಕರ್ತರ ಕ್ಯಾಮೆರಾಗಳನ್ನು ಚಚ್ಚಿ ಪುಡಿ ಮಾಡಿದರು; ಒಬ್ಬ ಮಹಿಳಾ ಪೊಲೀಸನ್ನೇ ವಿವಸ್ತ್ರಗೊಳಿಸಿದರು. ರೊಚ್ಚಿಗೆದ್ದ ಈ ಸೇವಾವ್ರತಿಗಳನ್ನು ನಿಯಂತ್ರಿಸಲು ಅವಶ್ಯವಿರುವಷ್ಟು ಪೊಲೀಸರನ್ನು ಸ್ಥಳದಲ್ಲಿ ಸರ್ಕಾರ ನಿಯೋಜಿಸಿರಲಿಲ್ಲ. ಹಾಗಾಗಿ ಆ ಕ್ಷಣದಲ್ಲಿ ಬೆತ್ತಲೆಸೇವೆ ಹರಕೆ ಹೊತ್ತವರು, ಪ್ರತಿಭಟನಕಾರರ ಮೇಲೆ ತಮ್ಮ ಸಿಟ್ಟನ್ನೆಲ್ಲ ತೀರಿಸಿಕೊಂಡರು. ಆದರೆ ಈ ಘಟನೆಯಿಂದ ಎಚ್ಚೆತ್ತುಕೊಂಡ ಸರ್ಕಾರ ಮುಂದಿನ ವರ್ಷಗಳಲ್ಲಿ ಚಂದ್ರಗುತ್ತಿಯಲ್ಲಿ ಭಾರೀ ಪೊಲೀಸು ಬಂದೋಬಸ್ತ್ ಮುಖಾಂತರ ಬೆತ್ತಲೆ ಸೇವೆ ನಡೆಯದಂತೆ ನೋಡಿಕೊಂಡಿತು.


ಸರ್ಕಾರದ ಈ ದೃಢ ನಿರ್ಧಾರದ ನಡೆಯನ್ನು ರಾಜ್ಯದ ಜನ ಕೂಡ ಅನುಮೋದಿಸಿದರು. ಚಂದ್ರಗುತ್ತಿಯ ಬೆತ್ತಲೆ ಸೇವೆ ಮತ್ತು ಅದಕ್ಕೆ ಎದುರಾದ ಪ್ರತಿರೋಧಗಳನ್ನು ಕೇಂದ್ರವಾಗಿಟ್ಟುಕೊಂಡು ಅನಂತಮೂರ್ತಿ ತಮ್ಮ ಈ ಪ್ರಬಂಧದಲ್ಲಿ ಈ ನಾಡಿನ ಧಾರ್ಮಿಕ ನಂಬಿಕೆಗಳ ಬಹುರೂಪ, ನಮ್ಮ ಬಹುವಚನ ಪರಂಪರೆ, ಕನ್ನಡದ ಲೇಖಕರು ಪರಂಪರೆ ಮತ್ತು ಆಧುನಿಕತೆಗಳನ್ನು ಚಿತ್ರಿಸಿದ ವಿಧಾನ, ಮುಂತಾದರ ಬಗ್ಗೆ ವಿವರವಾಗಿ ಬರೆದಿದ್ದಾರೆ. ಈ ಪ್ರಬಂಧ ಮೊದಲು ಪ್ರಕಟವಾದಾಗ ಅದರ ಬಗ್ಗೆ ದೊಡ್ಡ ವಾಗ್ವಾದವೇ ನಡೆಯಿತು. ಆದರೆ ಆಗ ಯಾರಿಗೂ ಅನಂತಮೂರ್ತಿ ವಿರುದ್ಧ ಪೊಲೀಸು ಠಾಣೆಗೆ ದೂರು ಕೊಡಬೇಕು ಎಂದು ಅನ್ನಿಸಲಿಲ್ಲ; ಕನ್ನಡದ ಯಾವ ಪತ್ರಿಕೆಯೂ ಅವರ ವಿರುದ್ಧ ಅಪಪ್ರಚಾರದ ಆಂದೋಲನವನ್ನು ಪ್ರಾಯೋಜಿಸಲಿಲ್ಲ. ಆದರೆ ಈಗ ಕರ್ನಾಟಕ ಯಾಕೆ ಹೀಗೆ ಅಸಹನೆಯಲ್ಲಿ ಬೇಯುತ್ತಿದೆ?

'ಬೆತ್ತಲೆ ಪೂಜೆ ಯಾಕೆ ಕೂಡದು?' ಪ್ರಬಂಧ ಪ್ರಕಟವಾದ ನಂತರದ 28 ವರ್ಷಗಳ ಅವಧಿಯಲ್ಲಿ ಕರ್ನಾಟಕ ಬದಲಾಗಿದೆ. ಈ ಸಾಂಸ್ಕೃತಿಕ ಪಲ್ಲಟಕ್ಕೂ ದೇಶದ ರಾಜಕೀಯ ಬೆಳವಣಿಗೆಗಳಿಗೂ ಸಂಬಂಧವಿದೆ. ಭಜರಂಗಿಗಳು ಜನರನ್ನು ಒಗ್ಗೂಡಿಸಲು ಧರ್ಮವನ್ನು ಬಳಸಿಕೊಂಡು, ಸಾಮಾಜಿಕ ಬದುಕಿನ ಎಲ್ಲ ಆಯಕಟ್ಟಿನ ಸ್ಥಾನಗಳಲ್ಲೂ ಈಗ ಪಟ್ಟಭದ್ರರಾಗಿದ್ದಾರೆ. ಆಜ್ಞಾಪಾಲನೆ, ಒಗ್ಗಟ್ಟಿನ ಹೆಸರಿನಲ್ಲಿ ಸಮವಸ್ತ್ರದ ಏಕರೂಪ ಮತ್ತು ಹಿಂಸೆಗೆ ಸದಾ ರೆಡಿಯಾಗಿರುವ ಮನಃಸ್ಥಿತಿ ಭಜರಂಗಿಗಳ ಧರ್ಮಪರಿಪಾಲನೆಯ ವಿಧಾನಗಳು. ಅನಂತಮೂರ್ತಿ ತಮ್ಮ ಪ್ರಬಂಧದಲ್ಲಿ ಪ್ರಸ್ತಾಪಿಸುವ ಧರ್ಮಕ್ಕೂ ಭಜರಂಗಿಗಳ ಧರ್ಮಕ್ಕೂ ಅರ್ಥಾರ್ಥ ಸಂಬಂಧವೇ ಇಲ್ಲ. ಅನಂತಮೂರ್ತಿಯವರಿಗೆ ಅವರ ಇತರ ಬರಹಗಳ ಹಾಗೆ ಈ ಪ್ರಬಂಧ ಕೂಡ ಸತ್ಯಶೋಧನೆಯ ಒಂದು ಪ್ರಯತ್ನ; ಅದರ ಗದ್ಯ ಶೈಲಿಯಲ್ಲೇ ಅದು ಸ್ಪಷ್ಟವಾಗಿದೆ.

ಪ್ರಬಂಧದಲ್ಲಿ ಅವರದ್ದು ಧರ್ಮ, ದೇವರು ಮತ್ತು ಪರಂಪರೆಗಳ ಬಗ್ಗೆ ಎಲ್ಲ ಸತ್ಯಗಳನ್ನೂ ಬಲ್ಲವನ ನಿಲುವಲ್ಲ, ಅವರು ಅದನ್ನು ಅರಸುತ್ತಿರುವವರು. ಆದರೆ ಅನಂತಮೂರ್ತಿ ಬಗ್ಗೆ ಚೀರಾಡುತ್ತಿರುವ ಭಜರಂಗಿಗಳಿಗೆ ದೇವರು ಮತ್ತು ಧರ್ಮ ಮಾತ್ರವಲ್ಲ, ಜಗತ್ತಿನ ಯಾವ ವಿಷಯದ ಬಗೆಗೂ ಸಂದೇಹವಿಲ್ಲ, ಅವರಿಗೆ ಎಲ್ಲ ಸತ್ಯಗಳೂ ಗೊತ್ತಿವೆ. ಅವರ ಈ ಆತ್ಮವಿಶ್ವಾಸವೇ ಅವರ ಅಸಹನೆಗೂ ಕಾರಣವಾಗಿದೆ.

ಅನಂತಮೂರ್ತಿಯವರ ಧಾರ್ಮಿಕತೆಯನ್ನು "ಸತ್ಯವೇ ದೇವರು" ಎಂಬ ಗಾಂಧೀಜಿಯವರ ನಂಬಿಕೆಯ ಮೂಲಕ ವಿವರಿಸಬಹುದು. ಭಜರಂಗಿಗಳಿಗಾದರೋ ಅವರ ದೈವ ದೇವರುಗಳೇ ಸತ್ಯ. ಸತ್ಯವೇ ದೇವರು ಎನ್ನುವವನು ಸದಾ ದೇವರ ಹುಡುಕಾಟದಲ್ಲಿರುವವ. ಅದಕ್ಕೆ ಪ್ರತಿಯಾಗಿ ದೇವರೇ ಸತ್ಯ ಎಂದು ಹೇಳುವವನು, ತನ್ನ ದೇವರು ಮಾತ್ರ ಸತ್ಯ ಎಂಬ ಮೂಲಭೂತವಾದಿ ಕನ್ನಡದ ಪರಂಪರೆ, ಈ ರೀತಿ ದೇವರ ಬಗ್ಗೆ ಹಠ ಹಿಡಿಯುವ ಮೂಲಭೂತವಾದಿ ಸ್ವರೂಪದ್ದಲ್ಲ.

ನಮ್ಮ ವಚನಕಾರರು ಮತ್ತು ದಾಸರು, ಗಾಂಧೀಜಿಗಿಂತ ಮೊದಲೇ ಸತ್ಯವನ್ನೇ ದೇವರು ಎಂದು ಭಾವಿಸಿದವರು. ಉದಾಹರಣೆಗೆ ಬಸವ ತನ್ನ ಒಂದು ವಚನದಲ್ಲಿ "ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ, ತನುವಿನಲ್ಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ ಮನೆಯೊಳಗೆ ಮನೆಯೊಡೆಯ ನಿದ್ದಾನೋ ಇಲ್ಲವೋ" ಎಂದು ಕೇಳುವಾಗ ಅವನು ಸತ್ಯವನ್ನೇ ಮನೆಯೊಡೆಯ ಅಥವಾ ದೇವರು ಎಂದು ಪ್ರತಿಪಾದಿಸಿದ್ದ. ಕನಕ ತನ್ನ ಒಂದು ಪದದಲ್ಲಿ "ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ?" ಎಂದು ಕೇಳುತ್ತಾನೆ. ಅನಂತಮೂರ್ತಿ ಮತ್ತು ಅವರ ಓರಗೆಯ ಕನ್ನಡದ ಎಲ್ಲ ಲೇಖಕರೂ ಆಧುನಿಕತೆಯ ಆಕರ್ಷಣೆಗೆ ಒಳಗಾಗಿಯೂ, ನಮ್ಮ ಪರಂಪರೆಯ ಈ ಸತ್ಯಶೋಧನೆಯ ಗುಣವನ್ನು ಮರೆತವರಲ್ಲ. ಬೆತ್ತಲೆ ಪೂಜೆ ಯಾಕೆ ಕೂಡದು ಎಂಬ ಅನಂತಮೂರ್ತಿಯವರ ಪ್ರಬಂಧ ಪರಂಪರೆ ಮತ್ತು ಆಧುನಿಕ ವೈಚಾರಿಕತೆಗಳಿಗೆ ಆಧುನಿಕ ಕನ್ನಡ ಸಂಸ್ಕೃತಿ ಸ್ಪಂದಿಸಿದ ಬಗೆಗಳನ್ನು ನಿರೂಪಿಸುತ್ತದೆ. ಸಹಜವಾಗಿಯೇ ಈಗ ನಾಡಿನಲ್ಲಿ ಕಂಡುಬರುತ್ತಿರುವ ಮನೋವಿಕಾರಗಳನ್ನು ಅವರು ತಮ್ಮ ಪ್ರಬಂಧದಲ್ಲಿ ಪ್ರಸ್ತಾಪಿಸಿರಲಿಲ್ಲ.



● ಜಿ. ರಾಜಶೇಖರ



ಮೂರ್ತ ಮತ್ತು ಅಮೂರ್ತ



ವಿವಿಧ ಧರ್ಮೀಯರ ಪ್ರಾರ್ಥನಾ ಮತ್ತು ಪೂಜಾ ...ಗಳನ್ನು ಹಾಳು ಮಾಡಿ ತಮ್ಮ ಧಾರ್ಮಿಕ ಆಧಿಪತ್ಯ ...ಸುತ್ತ ಬಂದಿರುವುದಕ್ಕೆ ದೇಶ ಮತ್ತು ವಿದೇಶಗಳಲ್ಲಿ ...ಷ್ಟು ಉದಾಹರಣೆಗಳಿವೆ. ಧರ್ಮಗಳು ಅತ್ಯುತ್ಸಾಹ, ...ಹನೆ ಮತ್ತು ದುರಹಂಕಾರದ ಅನುಯಾಯಿಗಳನ್ನೂ ...ಂದಿರುವ ಕಾರಣ, ಅವರು ಆ ಧರ್ಮಗಳ ಸಂಸ್ಥಾಪಕರು ...ಳಿರುವ ಮಾತಿನ ಧ್ವನ್ಯರ್ಥವನ್ನು ಅರಗಿಸಿಕೊಳ್ಳದೆ ...ಪಾವರ್ತನೆ ಮಾಡುವುದರಿಂದ ಅನಾಹುತಗಳು ...ಭವಿಸುತ್ತಲೇ ಬಂದಿವೆ. ಯಾವುದೇ ಧರ್ಮದವರು ...ರೆ ಧರ್ಮದವರ ಆಚರಣೆಗಳ ವಿಚಾರದಲ್ಲಿ ಮೂಗು ...ರಿಸಬಾರದು ಎಂಬುದೇ ನಾಗರಿಕಪ್ರಜ್ಞೆ.

ಈ ಹಿನ್ನೆಲೆಯಲ್ಲಿ ಪ್ರಜಾವಾಣಿಯ ಜೂನ್ 20ರ ...ತಿಸ್ಪಂದನ' ಅಂಕಣದಲ್ಲಿ ಎಚ್.ಎಸ್.ಶಿವಪ್ರಕಾಶ ಅವರು ...ದ 'ಮೂರ್ತಿ ಮತ್ತು ಅಮೂರ್ತತೆಗಳ ನಡುವೆ' ...ಖನ ಮೌಲಿಕವಾಗಿದೆ. ಆದರೆ ಅವರು "ಇನ್ನಾದರೂ ...ರ್ತಿಗಳ ಮೇಲೆ ಉಚ್ಚೆ ಹೊಯ್ದು ಹುಡುಗಾಟದ ...ಕ್ರಮಗಳನ್ನು ವಿಜೃಂಭಿಸುವ ಬೇಜವಾಬ್ದಾರಿ ...ಕೆಗಳನ್ನು ನಮ್ಮ ಬುದ್ಧಿಜೀವಿಗಳು ಕೈ ಬಿಡಲಿ" ...ದು ಪರೋಕ್ಷವಾಗಿ ಡಾ.ಯು.ಆರ್.ಅನಂತಮೂರ್ತಿ ...ವರಿಗೆ ಸಲಹೆ ನೀಡಿದ್ದಾರೆ. ಡಾ.ಎಂ.ಎಂ.ಕಲಬುರ್ಗಿ ...ವರು ಇತ್ತೀಚೆಗೆ ಬೆಂಗಳೂರಿನಲ್ಲಿ ಮಾಡಿದ ಭಾಷಣದಲ್ಲಿ ...ನಂತಮೂರ್ತಿ ಅವರ ಲೇಖನದ ಸಾಲೊಂದನ್ನು ತಪ್ಪಾಗಿ ...ದ್ಧರಿಸಿದ ಕಾರಣ ಇಂಥ ಗೊಂದಲಗಳು ...ಷ್ಟಿಯಾಗುತ್ತಲೇ ಇವೆ.

'ಬೆತ್ತಲೆ ಪೂಜೆ ಯಾಕೆ ಕೂಡದು?' ಎಂಬ ದೀರ್ಘ ...ಖನ ಅನಂತಮೂರ್ತಿ ಅವರ ಸ್ವೋಪಜ್ಞ ಮನಸ್ಸಿನ ...ನವೀಯ ಸೂಕ್ಷ್ಮತೆಗಳನ್ನು ಒಳಗೊಂಡಿದೆ. ಸುಮಾರು ...ರು ದಶಕಗಳ ಹಿಂದೆ ಚಂದ್ರಗುತ್ತಿಯಲ್ಲಿ ಬೆತ್ತಲೆಸೇವೆ ...ರೋಧಿಸಿ ನಡೆದ ಸಂಘರ್ಷದ ಘಟನೆಯ ಹಿನ್ನೆಲೆಯಲ್ಲಿ ...ದ ಲೇಖನವಿದು. 'ಬೆತ್ತಲೆಪೂಜೆ' ಎಂಬುದು ನಿಷ್ಕಾಮ ...ಷ್ಟಿಕೋನದ ವಾತಾವರಣದಲ್ಲಿ ಜನಿಸಿದ ಉತ್ಕಟ ...ಬಿಕೆಯಾಗಿದೆ. (ನನ್ನ ದೃಷ್ಟಿಯಲ್ಲಿ ಅದು ಮೂಢನಂಬಿಕೆ) ...ವನ್ನು ಆಚರಿಸುವವರಲ್ಲಿ ಇಂದಿಗೂ ಅದೇ ಉತ್ಕಟ ...ಬಿಕೆ ಇದ್ದರೂ ಪ್ರಸ್ತುತ ವಾತಾವರಣ ಅದಕ್ಕೆ ...ರಕವಾಗಿರುವಂಥದ್ದಾಗಿಲ್ಲ. ವಸ್ತುಮೋಹದ ನಗರೀಕರಣ, ...ದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿನ ...ಪ್ರಚಾರದಿಂದ ಉಂಟಾದ ಐಹಿಕ ದೃಷ್ಟಿಕೋನದಿಂದಾಗಿ ...'ಬೆತ್ತಲೆ ಪೂಜೆ' ಎಂಬುದು ತನಗೆ ಬೇಕಾದ ದೈವೀಕ ...ತ್ತು ಮಾನಸಿಕ ವಾತಾವರಣದಿಂದ ವಂಚಿತವಾಗಿದೆ ...ಬುದನ್ನು ತಿಳಿಸುವುದರ ಮೂಲಕ 'ಅದು ಸಲ್ಲದು' ...ಬ ಭಾವನೆಯನ್ನೇ ಅನಂತಮೂರ್ತಿ ಅವರು ತಾಳಿದ್ದಾರೆ.


ಇಂಥ ಸಮ್ಮಿಶ್ರ ಚಿಂತನೆಗಳ ಜೊತೆಗೆ ಬೆಳೆಯುವ ... ಲೇಖನದಲ್ಲಿ ಅನಂತಮೂರ್ತಿ ಅವರು ಅನುಷಂಗಿಕವಾಗಿ "ನನ್ನ ಬಾಲ್ಯದ ಪೌರಾಣಿಕ ಪ್ರಪಂಚವನ್ನು ಸೀಳಿಕೊಂಡು ಬೆಳೆದವನು ನಾನು. ನನ್ನನ್ನೂ ಮೀರಿದ ಅಜ್ಞಾತಶಕ್ತಿಗಳು ಇಲ್ಲ ಎಂದು ನನಗೆ ನಾನು ದೃಢಪಡಿಸಿಕೊಳ್ಳುವುದಕ್ಕಾಗಿ ನಮ್ಮ ಹಳ್ಳಿಯ ಮರಗಳ ಕೆಳಗಿದ್ದ ದೆವ್ವದ ಕಲ್ಲುಗಳ ಮೇಲೆ ನಾನು ಮೂತ್ರವಿಸರ್ಜನೆ ಮಾಡಿದ್ದಿದೆ. ಭಯದಿಂದ ನಿದ್ದೆಗೆಟ್ಟ ಆ ದಿನದ ರಾತ್ರಿಗಳು ನೆನಪಾಗುತ್ತವೆ" ಎಂದು ಬರೆದಿದ್ದಾರೆ. ಅವರು ದೇವತಾ ಆರಾಧನೆ ಮತ್ತು ಭೂತಾರಾಧನೆಯನ್ನು ಮೀರಿದ ಚಿಂತನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ.


"ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲು ಕಿಚ್ಚೆದ್ದು ಸುಡುವಾಗ..." ಎಂಬ ವಚನದಲ್ಲಿ ಬಸವಣ್ಣನವರು ವೈದಿಕರ ಅಗ್ನಿದೇವನನ್ನು ಕಿಚ್ಚಿಗೆ ಇಳಿಸುವುದರ ಮೂಲಕ ಅದರ ನಿಜಸ್ವರೂಪವನ್ನು ತೋರಿಸಿಕೊಟ್ಟಿದ್ದಾರೆ. ಬಸವಣ್ಣನವರು ಎಲ್ಲ ಮಿಥ್‌ಗಳನ್ನು ಒಡೆಯುತ್ತ ನಿಜದ ನಿಲವನ್ನು ತಾಳುತ್ತ ಬಂದಿದ್ದಾರೆ. ಅವರು ಜಲದೇವತೆ ಎಂಬ ಮಿಥ್ ಅನ್ನು ತಿರಸ್ಕರಿಸುತ್ತಾರೆ. ಜಲವೊಂದೇ ಶೌಚಾಚಮನಕ್ಕೆ ಎಂದು ಸಾರುತ್ತ ನೀರಿನ ಮಹತ್ವವನ್ನು ಎತ್ತಿ ಹಿಡಿಯುತ್ತಾರೆ. ಅವರು ಭೂದೇವಿಯ ಮಿಥ್ ಅನ್ನು ಒಡೆಯುತ್ತಾರೆ. ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ ಎಂದು ಸಾರುತ್ತ ಭೂಮಿಯ ಮಹತ್ವವನ್ನು ಎತ್ತಿ ಹಿಡಿಯುತ್ತಾರೆ. ಹಾಗೆಯೆ ಅನಂತಮೂರ್ತಿಯವರು ದೆವ್ವದ ಕಲ್ಲುಗಳ ಮಿಥ್ ಅನ್ನು ಒಡೆದು ಅವುಗಳ ಹಿಂದಿರುವ ದೆವ್ವದ ಭಯದ ಟೊಳ್ಳುತನವನ್ನು ಕುರಿತು ತಿಳಿಸಿದ್ದಾರೆ.

ಇಂಥ ಭಯವನ್ನು ಮೀರದೆ ಬಸವಣ್ಣನವರು ತಿಳಿಸುವ ಭಕ್ತಿ ಮತ್ತು ಅನಂತಮೂರ್ತಿ ಅವರು ಪ್ರತಿಪಾದಿಸುವ ಚಲನಶೀಲತೆ ಸಾಧಿಸಲು ಸಾಧ್ಯವಿಲ್ಲ. ಹೀಗೆ ಅವರು ಬಾಲಕರಿದ್ದಾಗ ತಮ್ಮನ್ನು ತಾವು ಭಯದ ಸಂಕಟದಿಂದ ಬಿಡುಗಡೆಗೊಳ್ಳುವುದಕ್ಕಾಗಿ ಮಾಡಿದ ಕ್ರಿಯೆ ಇದು. ಇದು ಬಾಲಕನೊಬ್ಬ ದೆವ್ವದ ಕಲ್ಲುಗಳ ಮೇಲೆ ಹೊಯ್ದ ಉಚ್ಚೆಯೆ? ಅಥವಾ ಅಜ್ಞಾನದ ಮೇಲೆ ಹೊಯ್ದ ಉಚ್ಚೆಯೆ? ಬಾಲಕ ಅನಂತಮೂರ್ತಿ ಮತ್ತು ಪ್ರಬುದ್ಧ ಅನಂತಮೂರ್ತಿ ಅವರ ಮಧ್ಯೆ ವ್ಯತ್ಯಾಸ ಇಲ್ಲವೆ?

"ಕಲ್ಯಾಣದಲ್ಲಿ ಬಸವಣ್ಣ ಇರುವಾಗ ಕಲ್ಲಿಗ್ಯಾಕ ಕೈಯ ಮುಗಿಯೂತಿ" ಎಂದು ಜನಪದ ಕವಿಯೊಬ್ಬ ಹಾಡಿದ್ದಾನೆ. ಬಸವಾದಿ ಶರಣರು ಮೂರ್ತಿಗಳನ್ನು ಕಲ್ಲಾಗಿಸಿದರು. ಆದರೆ "ಮೂರ್ತಿಗಳ ಮೇಲೆ ಉಚ್ಚೆ ಹೊಯ್ದು...." ಎಂದು ಬರೆಯುತ್ತ ಶಿವಪ್ರಕಾಶರೇಕೆ ಕಲ್ಲನ್ನು ಮೂರ್ತಿಯಾಗಿಸುತ್ತಿದ್ದಾರೆ? ಇದನ್ನೆಲ್ಲ ಬರೆಯುವ ಮೊದಲು ಶಿವಪ್ರಕಾಶ ಅವರು ಕಲಬುರ್ಗಿ ಅವರ ಹೇಳಿಕೆಗೆ ಅಂಟಿಕೊಳ್ಳದೆ ಅನಂತಮೂರ್ತಿ ಅವರ ಲೇಖನ ಓದಬೇಕಾಗಿತ್ತು.

ಎಚ್.ಎಸ್.ಶಿವಪ್ರಕಾಶ ಅವರು ಪವಾಡಗಳಲ್ಲಿ ಕೂಡ ನಂಬಿಕೆಯುಳ್ಳವರಾಗಿದ್ದಾರೆ. ಅವರಿಗೆ ನಾಗಲಿಂಗ ಅಜ್ಜನ ಪವಾಡಗಳೆಂದರೆ ಬಲು ಇಷ್ಟ. ನಾಗಲಿಂಗ ಅಜ್ಜನವರು ಮಾಡಿದ ಪವಾಡವೊಂದು ಹೀಗಿದೆ: ನಾಗಲಿಂಗ ಅಜ್ಜನವರು





ಶರೀಫ ಶಿವಯೋಗಿಗಳ ಜೊತೆ ಮಳೆಯಲ್ಲಿ ನೆನೆದುಕೊಂಡು ಕುರ್ತಕೋಟಿಗೆ ಹೋಗುತ್ತಾರೆ. ಅಲ್ಲಿನ ದ್ಯಾಮವ್ವ ದೇವಿಯ ಮಂದಿರವನ್ನು ಪ್ರವೇಶಿಸಿದಾಗ, ಹಸಿವಾಗಿದ್ದ ಅವರು ಪ್ರಸಾದಕ್ಕಾಗಿ ದೇವಿಯನ್ನು ಪ್ರಾರ್ಥಿಸುತ್ತಾರೆ. ಆಗ ದ್ಯಾಮವ್ವ ದೇವಿಯು ಪ್ರತ್ಯಕ್ಷಳಾಗಿ ಇಬ್ಬರಿಗೂ ಪ್ರಸಾದ ನೀಡುವಳು. ಪ್ರಸಾದವಾದ ಮೇಲೆ ಚಳಿ ಕಾಯಿಸಲು ನಾಗಲಿಂಗ ಅಜ್ಜನವರು ದೇವಿಯ ಕಟ್ಟಿಗೆಯ ಮೂರ್ತಿಯನ್ನೇ ಒಡೆದು ತುಂಡು ತುಂಡು ಮಾಡಿ ಬೆಂಕಿ ಹಚ್ಚುವರು. ದೇವಿ ಮೂರ್ತಿಯನ್ನು ಸುಟ್ಟಿದ್ದು ಮರುದಿನ ಬೆಳಿಗ್ಗೆ ಗೊತ್ತಾದ ತಕ್ಷಣ ಪಂಚರು ಸಿಟ್ಟಿಗೆದ್ದು ನಾಗಲಿಂಗ ಅಜ್ಜನವರಿಗೆ ಬಾರಕೋಲಿನಿಂದ ಹೊಡೆಯುವರು. ಆ ಹೊಡೆತ ಪೂಜಾರಿಗೆ ಬೀಳುವುದು!

ಹೀಗೆ ಅವಧೂತರಿಗೆ ಸಂಬಂಧಿಸಿದ ಅನೇಕ ಪವಾಡಗಳು ನಮ್ಮ ಸಮಾಜದಲ್ಲಿ ಪ್ರಚಲಿತ ಇವೆ. ಅಗಮ್ಯ ಅಗೋಚರ, ಅಪ್ರತಿಮ ಮತ್ತು ಅಪ್ರಮಾಣ ದೇವರ ಅಸ್ತಿತ್ವವನ್ನು ಪ್ರತಿಪಾದಿಸುವ ಶರಣರಾಗಲಿ, ಸಂತರಾಗಲಿ, ಅವಧೂತರಾಗಲಿ ಮೂರ್ತಿಪೂಜೆಯನ್ನು ತಿರಸ್ಕರಿಸುತ್ತಲೇ ಬಂದಿದ್ದಾರೆ. ಅವಧೂತ ಪರಂಪರೆಯನ್ನು ನಂಬುವ ಶಿವಪ್ರಕಾಶ ಅವರು ಭಾರತೀಯ ದಾರ್ಶನಿಕ ತುಮುಲಗಳನ್ನು ಗಣನೆಗೆ ತೆಗೆದುಕೊಳ್ಳದೆ ಅನುಕೂಲಸಿಂಧುವಾಗಿ ಯಾರನ್ನು ಸಂಪ್ರೀತಗೊಳಿಸಲು ಬಯಸುತ್ತಿದ್ದಾರೆ?


ಜಪಾನಿನಲ್ಲಿ ಖ್ಯಾತ ಬೌದ್ಧಭಿಕುವೊಬ್ಬ ರಾತ್ರಿ ಚಳಿಯಿಂದ ನಡುಗುತ್ತ ಬುದ್ಧವಿಹಾರವೊಂದನ್ನು ಪ್ರವೇಶಿಸಿದ. ವಿಹಾರದ ಉಸ್ತುವಾರಿ ವಹಿಸಿಕೊಂಡಿದ್ದ ವ್ಯಕ್ತಿ ಅವನಿಗೆ ಗೌರವ ಸೂಚಿಸಿ ಅಲ್ಲಿ ತಂಗಲು ವ್ಯವಸ್ಥೆ ಮಾಡಿಕೊಟ್ಟ. ನಂತರ ಚಳಿಯಿಂದ ನಡುಗುತ್ತಿದ್ದ ಆ ಬೌದ್ಧಭಿಕು ಅಲ್ಲಿದ್ದ ಬುದ್ಧನ ಕಟ್ಟಿಗೆ ಮೂರ್ತಿಯನ್ನು ಅಂಗಳಕ್ಕೆ ತಂದು ಬೆಂಕಿಹಚ್ಚಿ ಕಾಸಿಕೊಳ್ಳತೊಡಗಿದ. ಆಶ್ರಯ ಕೊಟ್ಟ ವ್ಯಕ್ತಿ ಸಿಟ್ಟಿಗೆದ್ದು ಆ ಭಿಕುವನ್ನು ಹೊರಗೆ ಹಾಕಿದ. ಬೆಳಿಗ್ಗೆ ಎದ್ದು ನೋಡಿದಾಗ ಆ ಭಿಕು ರಸ್ತೆ ಬದಿಯ ಮೈಲಿಗಲ್ಲೊಂದರ ಮೇಲೆ ಹೂ ಇಟ್ಟು, ಧ್ಯಾನಮಗ್ನನಾಗಿದ್ದ!

ಮನೆ ಬಿಟ್ಟು ಬಂದ ಅವಧೂತ ಮಾಣಿಕಪ್ರಭು ಅವರು ಹನುಮಂತ ದೇವರ ಗುಡಿಯಲ್ಲಿ ರಾತ್ರಿ ಮಲಗುವ ಮುಂಚೆ ತಮ್ಮ ಚಪ್ಪಲಿಗಳು ಕಳುವಾಗಬಾರದೆಂಬ ಕಾರಣಕ್ಕೆ ಬಟ್ಟೆಯಲ್ಲಿ ಸುತ್ತಿ ಮೂರ್ತಿಯ ಮೇಲೆ ಇಟ್ಟಿದ್ದರು. ಬೆಳಿಗ್ಗೆ ಬಂದ ಪೂಜಾರಿ ಇದ ಕಂಡು ಕೋಪಾವೇಶದಿಂದ ಮಾಣಿಕಪ್ರಭುಗಳಿಗೆ ಹೊಡೆಯುವ ವೇಳೆ ಮೂರ್ತಿಗೆ ಪೆಟ್ಟಾಗುತ್ತಿತ್ತು!

ರಾಮಕೃಷ್ಣರು ಕಾಳಿಯನ್ನು ಧ್ಯಾನಿಸುತ್ತಿದ್ದರು. ಅವರು ಕಣ್ಣು ಮುಚ್ಚಿದೊಡನೆ ಕಾಳಿಯ ಸಾಕ್ಷಾತ್ಕಾರವಾಗುತ್ತಿತ್ತು. ಆಗ ಅವರು ಆನಂದಪರವಶರಾಗುತ್ತಿದ್ದರು. ಇದು ಎಲ್ಲೆಡೆ ಪ್ರಚಾರವಾಯಿತು. ಆಗ ಒಬ್ಬ ಸನ್ಯಾಸಿ ಅವರ ಬಳಿ ಬಂದು "ಇದು ಸತ್ಯವಲ್ಲ, ನಿಮ್ಮ ಕಲ್ಪನೆ" ಎಂದು ರಾಮಕೃಷ್ಣರಿಗೆ ತಿಳಿಸಿದರು. "ಪರಮಾತ್ಮನಿಗೆ ಯಾವುದೇ ರೂಪವಿಲ್ಲ. ಯಾವ ಕ್ಷಣದಲ್ಲಿ ಚೇತನವು ನಿರಾಕಾರ ಸ್ಥಿತಿಯನ್ನು ತಲಪುತ್ತದೆಯೊ ಆ ಕ್ಷಣವೇ ಪರಮಾತ್ಮನಲ್ಲಿ ಮಿಲನವಾಗುವ ಅನುಭೂತಿಯ ಕ್ಷಣ. ಈ ಸತ್ಯವನ್ನು ಮರೆತು, ಸಾಕ್ಷಾತ್ಕಾರ ಮತ್ತು ದರ್ಶನ ಎಂಬುದು ಭ್ರಮಾತ್ಮಕವಾದುದು" ಎಂದರು.

"ನೀವು ನಿಮ್ಮ ಮನಸ್ಸಿನಲ್ಲಿ ಮೂರ್ತಿಯನ್ನು ಕಲ್ಪಿಸಿಕೊಂಡಿರುವಿರಿ. ಅದೇ ರೀತಿ ಖಡ್ಗವೊಂದನ್ನು ಕಲ್ಪಿಸಿಕೊಂಡು ಆ ಮೂರ್ತಿಯನ್ನು ತುಂಡರಿಸಿರಿ" ಎಂದು ಆ ಸನ್ಯಾಸಿ ರಾಮಕೃಷ್ಣರಿಗೆ ಹೇಳಿದಾಗ ರಾಮಕೃಷ್ಣ ಪರಮಹಂಸರು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಜೀವಮಾನವಿಡೀ ಆಸಕ್ತಿಯಿಂದ ಸಾಧಿಸಿ ಮನದೊಳಗೆ ನಿಲ್ಲಿಸಿದ ಆ ಕಲ್ಪನೆಯ ಮೂರ್ತಿಯನ್ನು ತುಂಡರಿಸುವುದು ಅವರಿಗೆ ಅಸಾಧ್ಯವಾಗಿತ್ತು. ಆಗ ಆ ಸನ್ಯಾಸಿ "ಪರಮಾತ್ಮನಿಗಾಗಿ ನೀವು ಒಂದು ಮೂರ್ತಿಯನ್ನು ತೆಗೆದುಹಾಕಲು ಸಿದ್ಧರಿಲ್ಲ" ಎಂದರು. ಆದರೂ ಛಲ ಬಿಡದ ಆ ಸನ್ಯಾಸಿ "ನೀವು ಧ್ಯಾನದಲ್ಲಿ ಕುಳಿತುಕೊಳ್ಳಿರಿ. ಆಗ ನಾನು ಗಾಜಿನ ಚೂರಿನಿಂದ ನಿಮ್ಮ ಹಣೆಯನ್ನು ಸೀಳುವೆ. ನಾನು ಹಾಗೆ ಮಾಡುವಾಗ ನೀವು ನಿಮ್ಮೊಳಗೆ ಧೈರ್ಯ ತೆಗೆದುಕೊಂಡು ಆ ಕಾಳಿಯ ಕಲ್ಪನಾಮೂರ್ತಿಯನ್ನು ಎರಡು ತುಂಡುಗಳಾಗಿ ಕತ್ತರಿಸಿ ಬಿಡಿ" ಎಂದು ಪರಮಹಂಸರಿಗೆ ತಿಳಿಸಿದರು. ಪರಮಹಂಸರು ಈ ಸಾಹಸ ಮಾಡಿದರು. "ಮೊದಲ ಸಲ ಸಮಾಧಿಯ ಪ್ರಾಪ್ತಿಯಾಯಿತು. ಇಂದು ಸತ್ಯ ಯಾವುದು ಎಂಬುದರ ಅರಿವಾಯಿತು" ಎಂದು ರಾಮಕೃಷ್ಣ ಪರಮಹಂಸರು ಎಂದು ಸಂತಸ ವ್ಯಕ್ತಪಡಿಸಿದರು.

ಇಂಥ ದಾರ್ಶನಿಕ ತುಮುಲಗಳ ಮಧ್ಯೆ ಬಾಲಕ ಅನಂತಮೂರ್ತಿಯವರ ಪ್ರಯೋಗ ಮತ್ತು ಪ್ರಬುದ್ಧ ಅನಂತಮೂರ್ತಿಯವರ ವಿಜನ್ (ಕಾಣ್ಕೆ) ಅನ್ನು ಅರ್ಥೈಸಿಕೊಳ್ಳಲಿಕ್ಕಾಗದವರು ಗೊಂದಲಗಳನ್ನು ಸೃಷ್ಟಿಸುತ್ತಲೇ ಇರುತ್ತಾರೆ.



● ರಂಜಾನ್ ದರ್ಗಾ

ಲಂಕೇಶ್

...ನಿಮ್ಮ ಈ ಪ್ರೀತಿಯ
...ಪತ್ರಿಕೆಯನ್ನು ನಿಮ್ಮ
...ಮನೆ ಬಾಗಿಲಿಗೇ
...ತರಿಸಿಕೊಳ್ಳಿ...

ವಾರ್ಷಿಕ ಚಂದಾ ವಿವರ

ಚಂದಾ ವಿವರಗಳು ಹೀಗಿವೆ:


ಒಂದು ವರ್ಷಕ್ಕೆ	: 700 ರೂ.
ಎರಡು ವರ್ಷಕ್ಕೆ	: 1400 ರೂ.
ಮೂರು ವರ್ಷಕ್ಕೆ	: 2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು–560 004.

ಹೆಚ್ಚಿನ ಮಾಹಿತಿಗಾಗಿ: 9880302817 / 080-26676427



ಇಳಕಲ್: ಬಲಾಢ್ಯರ ನೆರಳಲ್ಲಿ 'ಗ್ರಾನೈಟ್ ಮಾಫಿಯಾ'



ಒಂದು ಕಾಲಕ್ಕೆ ಸಾಂಪ್ರದಾಯಿಕ ಸೀರೆಗೆ ಹೆಸರುವಾಸಿಯಾಗಿದ್ದ ಇಳಕಲ್‌ನಲ್ಲಿ ಈಗ ಧೂಳೋ, ಧೂಳು. ಅದು ಗ್ರಾನೈಟ್ ರಿಪಬ್ಲಿಕ್‌ನ ಧೂಳು. ಗ್ರಾನೈಟ್ ಕಲ್ಲು ಕತ್ತರಿಸುವ ದಂಧೆ ಇಲ್ಲಿ ಎಗ್ಗಿಲ್ಲದಂತೆ ನಡೆಯುತ್ತಿದೆ. ದೂರದ ಕನಕಪುರ, ರಾಯಚೂರಿನ ಮುದಗಲ್, ಕುಷ್ಟಗಿ, ಯಲಬುರ್ಗಾ, ಯಾದಗಿರಿಯ ಸೊರಪೂರ ಹಾಗೂ ಸ್ವತಃ ಇಳಕಲ್‌ನಲ್ಲಿ ಗೆಬರುವ ಅಕ್ರಮ ಗಣಿಗಾರಿಕೆಯ ಕಲ್ಲುಗಳು 'ನೈಸ್' ಆಗುವುದೇ ಈ ಇಳಕಲ್‌ನಲ್ಲಿ. ಇಳಕಲ್ ನಗರ ಒಂದರಲ್ಲೇ 316 ಕಟಿಂಗ್ ಕಂಪನಿಗಳಿವೆ. ಒಂದೊಂದು ಫ್ಯಾಕ್ಟರಿಯಲ್ಲಿ ಏನಿಲ್ಲವೆಂದರು ನಾಲ್ಕರಿಂದ ಹತ್ತು ಮೆಷಿನ್‌ಗಳು ಹಗಲುರಾತ್ರಿಯೆನ್ನದೆ ಸದ್ದು ಮಾಡುತ್ತಿರುತ್ತವೆ. ಅಂದರೆ ಇಳಕಲ್ ನಗರದಲ್ಲೇ ಸಾವಿರಾರು, ಮೆಷಿನ್‌ಗಳು ದಿನ ಒಂದಕ್ಕೆ ಲಕ್ಷಾಂತರ ಮೀಟರ್ ಕಲ್ಲನ್ನು ಕೊರೆದು ಪಾಲಿಶ್ ಮಾಡುತ್ತವೆ. ಮೂರೂವರೆಯಿಂದ ನಾಲ್ಕು ಟನ್ ಭಾರವಿರುವ ಕಲ್ಲನ್ನು ಒಂದು ಮೀಟರ್ ಕೊರೆದರೆ ಹೊರಬೀಳುವ ತ್ಯಾಜ್ಯ ಬರೋಬ್ಬರಿ ಒಂದು ಕ್ವಿಂಟಾಲ್! ರೊಕ್ಕಸ್ಥ ಮಾಲೀಕರು ಆ ತ್ಯಾಜ್ಯವನ್ನೆಲ್ಲ ಮುಲಾಜಿಲ್ಲದೆ ಹಳ್ಳ-ಕೆರೆ, ಸರ್ಕಾರಿ ಜಮೀನು, ಅರಣ್ಯ ಇಲಾಖೆ ಜಾಗೆಯಲ್ಲಿ ಸುರಿದು ಬಿಡುತ್ತಾರೆ. ಇದು ಕೇವಲ ಕಲ್ಲಿನ ಧೂಳು ಮಾತ್ರ ಅಲ್ಲ, ವಿಷಕಾರಿ ರಾಸಾಯನಿಕವೂ ಹೌದು. ಯಾಕೆಂದರೆ ಕಲ್ಲನ್ನು ಕಟ್ ಮಾಡುವಾಗ ನಿಷೇಧಿತ ಕಟ್GR ಮತ್ತು ಏರೋಲೇಟ್ ಎಂಬ ವಿಷಕಾರಿ ರಾಸಾಯನಿಕವನ್ನು ಬಳಸಿರುತ್ತಾರೆ. ಇವುಗಳಿಂದಾಗಿ ಜಾನುವಾರುಗಳಲ್ಲಿ ಕಾಲಬಾವು ಮತ್ತು ಜನರಲ್ಲಿ ಚರ್ಮರೋಗದಂಥ ಕಾಯಿಲೆ ಕಾಣಿಸಿಕೊಂಡಿರುವ ಸಾಕಷ್ಟು ನಿದರ್ಶನಗಳೂ ಇವೆ.

ಭೂವಿಜ್ಞಾನ ಇಲಾಖೆಗಾಗಲಿ ಅಥವಾ ಪರಿಸರ ಮಾಲಿನ್ಯ ಮಂಡಳಿಗಾಗಲಿ ಇದರ ಕಾಳಜಿಯೇ ಇಲ್ಲ. ತಮ್ಮ ಪಾಲಿನ ಅಮೇಧ್ಯ ತಿಂದು ತೆಪ್ಪಗಿದ್ದು ಬಿಡುತ್ತಾರೆ. ಅದರಲ್ಲೂ ಸದ್ಯ ಪರಿಸರ ಮಾಲಿನ್ಯ ಅಧಿಕಾರಿಯಾಗಿ ವಕ್ಕರಿಸಿರುವ ಮನಿಯಾರ್ ಭಯಂಕರ ಭ್ರಷ್ಟ ಆಸಾಮಿ. ತನ್ನ ಹೆಸರಿನಲ್ಲೇ 'ಮನಿ' ನೇತುಹಾಕಿಕೊಂಡಿರುವ ಈತ ಗ್ರಾನೈಟ್ ಮಾಲಿನ್ಯದ ಕುರಿತು ಪ್ರಶ್ನಿಸಿದವರನ್ನೇ ದಬಾಯಿಸಿ ಸುಮ್ಮನಾಗಿಸುವ ಚಾಳಿಯವನು. ಸಾಮಾನ್ಯ ನಾಗರಿಕರು ಫೋನಾಯಿಸಿದರೆ ರಿಸೀವ್ ಮಾಡದ ಮನಿಯಾರ್ ಗ್ರಾನೈಟ್ ಧಣಿಗಳು, ರಾಜಕೀಯ ಪುಢಾರಿಗಳು ಒಂದು ಮಿಸ್‌ಕಾಲ್ ಕೊಟ್ಟರೂ ಅವರ ಮುಂದೆ ಹಾಜರಾಗಿಬಿಡುತ್ತಾನೆ. ಮೂಲತಃ ಬಿಜಾಪೂರದವನಾದ ಮನಿಯಾರ್‌ನ ಪ್ರತಿ ತಿಂಗಳ ಆದಾಯವೇ 25 ರಿಂದ 30 ಲಕ್ಷ! ಇದರಲ್ಲಿ ಶಾಸಕ-ಮಂತ್ರಿಗಳಿಗೂ ಪಾಲು ಕೊಡಬೇಕು ಅಂತ ಹೇಳಿಯೇ ಆತ ವಸೂಲಿಗಿಳಿಯುತ್ತಾನೆ.

ಈತನ ಭಂಡತನದ ಹಿಂದಿರುವ ಮುಖ್ಯ ಬೆನ್ನೆಲುಬುಗಳೆಂದರೆ ಹುನಗುಂದ ಶಾಸಕ ವಿಜಯನಂದ ಕಾಶಪ್ಪ ಹಾಗು ಬಾಗಲಕೋಟೆ ಶಾಸಕ ಹುಲ್ಲಪ್ಪ ಮೇಟಿ. ಮನಿಯಾರ್ ಬಾಗಲಕೋಟೆಗೆ ತಗುಲಿಕೊಂಡಿದ್ದೇ ಈ ಇಬ್ಬರ ಕೃಪಾಕಟಾಕ್ಷದಿಂದ. ವಿಜಯನಂದ ಕಾಶಪ್ಪ ಪ್ರಭಾವಿ ಲಿಂಗಾಯತ ಪಂಚಮಸಾಲಿಗೆ ಸೇರಿದವ. ಇನ್ನು ಹುಲ್ಲಪ್ಪ ಮೇಟಿ ಸಿಎಂ ಸಿದ್ದರಾಮಯ್ಯನವರ ಆಪ್ತಕುಲ ಬಾಂಧವ. ಹೀಗಾಗಿ ಸಮಸ್ತ ಜಿಲ್ಲೆಯನ್ನಲ್ಲದೆ ಅಕ್ಕಪಕ್ಕದ ಜಿಲ್ಲೆಯಲ್ಲೂ ತಮ್ಮ ಪ್ರಭುತ್ವ ಸಾಧಿಸಿಕೊಂಡಿರುವ ಇವರು ಗ್ರಾನೈಟ್ ರಿಪಬ್ಲಿಕ್‌ನ ಮೇನ್ ಪಿಲ್ಲರ್‌ಗಳು. ಅದರಲ್ಲೂ ವಿಜಯಾನಂದ ಕಾಶಪ್ಪನಂತೂ ತನ್ನ ತಮ್ಮ ದೇವಾನಂದ ಕಾಶಪ್ಪನನ್ನು ನಗರಸಭೆ ಅಧ್ಯಕ್ಷನನ್ನಾಗಿಸಿ ಅವನ ಮೂಲಕವೇ ಭರ್ಜರಿ ಗ್ರಾನೈಟ್ ದರೋಡೆ ನಡೆಸುತ್ತಿದ್ದಾನೆ. ಕೇವಲ ಗ್ರಾನೈಟ್ ದಂಧೆಯಲ್ಲದೆ ರಿಯಲ್ ಎಸ್ಟೇಟ್, ಶಿಕ್ಷಣ ಕ್ಷೇತ್ರ ಹೀಗೆ ಸಮಸ್ತ ವ್ಯಾಪ್ತಿಗಳಲ್ಲೂ ವಿಸ್ತರಿಸಿಕೊಂಡಿರುವ ಬಲಾಢ್ಯ ರಾಜಕಾರಣಿಗಳಿಂದಾಗಿ ಸಾಮಾನ್ಯ ಜನರು ಇಲ್ಲಿ ಜೀತದಾಳುಗಳಂತೆ ಮಾತ್ರ ಬದುಕಬೇಕಾಗಿದೆ.

ಮನಿಯಾರ್ ಅಲ್ಲದೆ ಅಸಿಸ್ಟೆಂಟ್ ಕಮೀಷನರ್ ಶಂಕರ ವನಕಿಹಾಳನ ಸಾಥ್ ಕೂಡಾ ಈ ಅಕ್ರಮ ಗ್ರಾನೈಟ್

⏭ 11

ಪ್ರಾದೇಶಿಕ ಕಛೇರಿ
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಸೆಕ್ಟರ ನಂ: 7, ಬೈ ಪಾಸ್ ನವನಗರ ಬಾಗಲಕೋಟೆ
ಫೋ ನಂ: 08354-201131

ಕ್ರಮ ಸಂಖ್ಯೆಕರಾಮಾನಿಮಂ/ಪ್ರಾಕ(ಬಾ)/ಗ್ರಾನೈಟ್/2013-14/ 4423 ದಿನಾಂಕ : 24/3/14

ಗೆ,
ಅನ್ನಾಜಿ ಹೇಟ್ ಕೊರೆನ್ನವರ,
ವಾರ್ಡ ನಂ 7 ಆಲಂ ಪುರ ಪೇಟ
ಇಲಕಲ್-587125.

ಮಾನ್ಯರೇ

ವಿಷಯ: ಹುನಗುಂದ ತಾಲ್ಲೂಕಿನ ಗ್ರಾನೈಟ ಕಟಿಂಗ್ ಮತ್ತು ಪಾಲಿಶಿಂಗ ಫ್ಯಾಕ್ಟರಿಗಳ ಮಾಹಿತಿ ವಿದುವ ಕುರಿತು.
ಉಲ್ಲೇಖ: ತಮ್ಮ ಪತ್ರ ದಿನಾಂಕ : 04/03/2014.

****

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂದಿಸಿದಂತೆ ತಾವು ಕೇಳಿರುವ ಹುನಗುಂದ ತಾಲ್ಲೂಕಿನ ಗ್ರಾನೈಟ ಕಟಿಂಗ್ ಮತ್ತು ಪಾಲಿಶಿಂಗ ಫ್ಯಾಕ್ಟರಿಗಳ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಇದನ್ನು ತಮ್ಮ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಲಗತ್ತು : ಮೇಲಿನಂತೆ

ತಮ್ಮ ವಿಶ್ವಾಸಿ
ಪರಿಸರ ಅಧಿಕಾರಿಗಳು
ಕ.ರಾ.ಮಾ.ನಿ.ಮಂಡಳಿ ಬಾಗಲಕೋಟೆ

List of Hungund Taluk Granite Industries

SI.No.	NAME	[illegible]	Place	Taluk	District	Size L/M/S
1	Manjunath Granites, Balkundi Road, Ilkal, Tq Hungund.	Manjunath Granites, Balkundi Road Ilkal, Tq Hungund.	balakundi	Hungund	Bagalkot	S
2	VijayLaxmi Granites, Post Ameengad, Ilkal, Tq Hungund.	VijayLaxmi Granites, Post Ameengad, Ilkal, Tq Hungund	Ameenagad	Hungund	Bagalkot	S
3	Taj Stone Industries, Sy-No-162/2, Hanumasagar Road, Ilkal, Tq Hungund.	Taj Stone Industries, Sy-No-162/2, Hanumasagar Road, Ilkal, Tq Hungund	Ilkal	Hungund	Bagalkot	S
4	Ankit Granites, Sy-No-4441, Almpur Peth, Ilkal, Tq Hungund.	Ankit Granites, Sy-No-4441, Almpur Peth, Ilkal, Tq Hungund	Ilakl	Hungund	Bagalkot	S
5	M M Granites, Sy-No-575/B, Heraupanal Village Ilkal, Tq Hungund	M M Granites, Sy-No-575/B Heraupanal Village, Ilkal, Tq Hungund	Hireupnal	Hungund	Bagalkot	S
6	Balaji Enterprises, Sy-No-19/1+2+3+4/A1 Heraupnal Village, Ilkal tq Hungund	Balaji Enterprises, Sy-No-19/1+2+3+4/A1 Heraupnal Village, Ilkal tq Hungund	Hireupnal	Hungund	Bagalkot	S
7	Pavan Granites, Ssy-No-43/77/B, Hanumasagar Road, Ilkal, tq Hungund	Pavan Granites, Ssy-No-43/77/B, Hanumasagar Road, Ilkal, tq Hungund	Ilkal	Hungund	Bagalkot	S
8	Deepak Enterprises, Heraupanal Village, Ilkal tq Hungund.	Deepak Enterprises, Heraupanal Village, Ilkal tq Hungund.	Hireupnal	Hungund	Bagalkot	S
9	Kamadehnu Granites Sy-No-45/2, NH-13 Road Ilkal Tq Hungund	Kamadehnu Granites Sy-No-45/2, NH-13 Road Ilkal Tq Hungund	Ilakl	Hungund	Bagalkot	S
10	Ujjwala Enterprises, C/O Shivshakti Granites N H-13, Ilkal Road, Tq Hungund.	Ujjwala Enterprises, C/O Shivshakti Granites N H-13, Ilkal Road, Tq Hungund.	Hungund	Hungund	Bagalkot	S
11	Ambika Granites Sy-No-77/B, Hanumsagar Road, Ilkal, Tq Hungund	Ambika Granites Sy-No-77/B, Hanumsagar Road, Ilkal, Tq Hungund	Ilkal	Hungund	Bagalkot	S
12	Kalaka Granite Industries, Sy No-577/F Hireupanal Village Balkundi Road, Ilkal Tq Hungund	Kalaka Granite Industries, Sy No-577/F Hireupanal Village Balkundi Road, Ilkal Tq Hungund	Hireupnal	Hungund	Bagalkot	S
13	Vijalxmi Granites, Sy No-31 Tondihal Village, Ilkal Tq: Hungund Tq: Hungund	Vijalxmi Granites, Sy No-31 Tondihal Village, Ilkal Tq: Hungund Tq: Hungund	Tondihal	Hungund	Bagalkot	S
14	Radhakrishna Granites and Tiles, Sy No-48/2, Plot No-19,20,21, Raichur Road, Ilkal Tq: Hungund	Radhakrishna Granites and Tiles, Sy No-48/2, Plot No-19,20,21, Raichur Road, Ilkal Tq: Hungund	Ilkal	Hungund	Bagalkot	S
15	Mahaveer Granites Industries C/O Paroshwanath Granites, Sy-No-77/3B, Ilkal Tq Hungund	Mahaveer Granites Industries C/O Paroshwanath Granites, Sy-No-77/3B Ilkal Tq Hungund	Ilkal	Hungund	Bagalkot	S
16	Netravati Stones, Sy No-28/1+2+3D, Hireupanal Village, Ilkal Tq: Hungund	Netravati Stones, Sy No-28/1+2+3D, Hireupanal Village, Ilkal Tq: Hungund	Hireupnal	Hungund	Bagalkot	S
17	Govardhan Granites, Hanumsagar Road, Ilkal Tq: Hungund	Govardhan Granites, Hanumsagar Road, Ilkal Tq: Hungund	Ilkal	Hungund	Bagalkot	S
18	Saka Tiles, Almpur Peth, Ward No-1, Ilkal Tq: Hungund	Saka Tiles, Almpur Peth, Ward No-1, Ilkal Tq: Hungund	Ilkal	Hungund	Bagalkot	S
19	Aswad Granite Tiles, Sy No-578/C/1, Hireupanal Village Ilkal Tq: Hungund	Aswad Granite Tiles, Sy No-578/C/1, Hireupanal Village Ilkal Tq: Hungund	Hireupnal	Hungund	Bagalkot	S
20	Basveshwar Granites, Bannikatti Road, Hireupanal Village, Ilkal Tq: Hungund	Basveshwar Granites, Bannikatti Road, Hireupanal Village, Ilkal Tq: Hungund	Hireupnal	Hungund	Bagalkot	S
21	Netravati Enterprises, Sy-No-28/1+2+3D, Balkundi Road, Ilkal Tq: Hungund	Netravati Enterprises, Sy-No-28/1+2+3D, Balkundi Road, Ilkal Tq: Hungund	Ilkal	Hungund	Bagalkot	S
22	Gokul Granites, Sy No-45/2,NH-13 Road, Ilkal Tq: Hungund	Gokul Granites, Sy No-45/2,NH-13 Road, Ilkal Tq: Hungund	Ilkal	Hungund	Bagalkot	S
23	Balaji Udyog, Sy No-11/1+2+3A, GP No-64, Hireupanal Village, Ilkal Tq: Hungund	Balaji Udyog, Sy No-11/1+2+3A, GP No-64, Hireupanal Village, Ilkal Tq: Hungund.	Hireupnal	Hungund	Bagalkot	S
24	Sapthagiri Granite Industries, Sy-No-29/1, Hireupnal Village, Ilkal, Tq: Hungund	Sapthagiri Granite Industries, Sy-No-29/1, Hireupnal Village, Ilkal, Tq: Hungund	Hireupnal	Hungund	Bagalkot	S
25	Saka Granites Udyog, Sy No-4441, Almpur Peth, Ward No-7 Ilkal Tq: Hungund	Saka Granites Udyog, Sy No-4441, Almpur Peth, Ward No-7 Ilkal Tq: Hungund	Ilkal	Hungund	Bagalkot	S
299	Shri Mallikarjun Granite Udyog, Sy. No 130/6, Hanumasagar Road, Balakundi Village, Ilkal	Shri Mallikarjun Granite Udyog, Sy. No 130/6, Hanumasagar Road, Balakundi Village, Ilkal	Balakundi	Hungund	Bagalkot	S
300	Sri Durga Enterprises, Sy. No 245/2, Balakundi Village, Ilkal	Sri Durga Enterprises, Sy. No 245/2, Balakundi Village, Ilkal	Balakundi	Hungund	Bagalkot	S
301	R N Granite Udyog, 38/H28/2, 129 A, hireupnal Village, Ilkal	R N Granite Udyog, 38/H28/2, 129 A, hireupnal Village, Ilkal	Hireupnal	Hungund	Bagalkot	S
302	D.M. Granites, Sy. No CTS No 131/A, Plot No 879, Balakundi, Ilkal	D.M. Granites, Sy. No CTS No 131/A, Plot No 879, Balakundi, Ilkal	Balakundi	Hungund	Bagalkot	S
303	Kamala Industries, Sy. No 129A, plot No 2, balakundi Village, Ilkal	Kamala Industries, Sy. No 129A, plot No 2, balakundi Village, Ilkal	Balakundi	Hungund	Bagalkot	S
304	Sri laxmi Narasima Enterprises, plot No 37,38,43 & 44, KSSIDC, Amaravati, Hungund	Sri laxmi Narasima Enterprises, plot No 37,38,43 & 44, KSSIDC, Amaravati, Hungund	Amaravati	Hungund	Bagalkot	S
305	Venkateshwar Granites, R. S. No 161/1, Plot No 6, KSSIDC Indl. Area, Amaravati, hungund	Venkateshwar Granites, R. S. No 161/1, Plot No 6, KSSIDC Indl. Area, Amaravati, hungund	Amaravati	Hungund	Bagalkot	S
306	Mahesh Slabs, Sy No 46A, Plot No4, Tondihal Village, Ilkal	Mahesh Slabs, Sy No 46A, Plot No4, Tondihal Village, Ilkal	Tondihal	Hungund	Bagalkot	S
307	Shri Shrishail Granite Slabs, Sy. No 78/4, Plot No3, part No I, Hoolageri road, Ilkal	Shri Shrishail Granite Slabs, Sy. No 78/4, Plot No3, part No I, Hoolageri road, Ilkal	Ilkal	Hungund	Bagalkot	S
308	Basavshri Slabs, R.S.No 67E, Plot No 2, Tondihal, Ilkal	Basavshri Slabs, R.S No 67E, Plot No 2, Tondihal, Ilkal	Tondihal	Hungund	Bagalkot	S
309	Mannapur Granite Industries, SY.No 67/E, Plot NO2, Block No 2 & 3, Tondihal, Ilkal	Mannapur Granite Industries, SY.No 67/E, Plot NO2, Block No 2 & 3, Tondihal, Ilkal	Tondihal	Hungund	Bagalkot	S
310	Ravikiran Polishers, Sy. NO 132/8, Balakundi Village, Ilkal	Ravikiran Polishers, Sy. NO 132/8, Balakundi Village, Ilkal	Balakundi	Hungund	Bagalkot	S
311	Gangotri Udyog, Sy. NO 16, Plot No-1, Balakundi Village, Ilkal	Gangotri Udyog, Sy. NO 16, Plot No-1, Balakundi Village, Ilkal	Balakundi	Hungund	Bagalkot	S
312	P.D. Muddebihal, M/s. Srinivas Granites, Sy.No. 46/4, Tondihal, Ilkal	P.M. Muddebihal, M/s. Srinivas Granites, Sy.No. 46/4, Tondihal, Ilkal	Tondihal	Hungund	Bagalkot	S
313	Swastic Granites, Sy. NO 131/A, Plot NO-2, Balakundi Village, Ilkal	Swastic Granites, Sy. NO 131/A, Plot NO-2, Balakundi Village, Ilkal	Balakundi	Hungund	Bagalkot	S
314	Siddarth Udyog, Sy. NO 132/7, Balakundi Village, Ilkal	Siddarth Udyog, Sy. NO 132/7, Balakundi Village, Ilkal	Balakundi	Hungund	Bagalkot	S
315	Dhananajay Sardesai, Veda Granites India Pvt Ltd, Sy. NO 143/A, 143/B, Amaravti Village, hungund	Dhananajay Sardesai, Veda Granites India Pvt Ltd, Sy. NO 143/A, 143/B, Amaravti Village, hungund	Amaravati	Hungund	Bagalkot	S
316	R.R. Karadi, Swastic Granites, Sy. No. 131/A, Plot NI2, Balakundi village, Ilkal	R.R. Karadi, Swastic Granites, Sy. No. 131/A, Plot NI2, Balakundi village, Ilkal	Balakundi	Hungund	Bagalkot	S

Environmental Officer
KSPCB, Bagalkot



ಪೊಲೀಸರೇ ಹುಷಾರಾಗಿ!

ಲೋಕಾಯುಕ್ತ ತಂಡ ಅಕ್ರಮ ಕಲ್ಲು ಗಣಿಗಾರಿಕೆಗಳ ಮೇಲೆ ದಾಳಿ ಮಾಡಿದ್ದೇನೊ ಸರಿ, ಕಲ್ಲು ಪೂರೈಕೆಯಿಲ್ಲದೆ ನಗರದೊಳಗಿನ ಗ್ರಾನೈಟ್ ಕಟಿಂಗ್ ಫ್ಯಾಕ್ಟರಿಗಳು ಒಂದೊಂದಾಗಿ ಮುಚ್ಚಿಕೊಳ್ಳಲಿವೆ ಎಂಬುದೂ ಸರಿ. ಆದರೆ ಈ ಎಲ್ಲದರ ಮತ್ತೊಂದು ಅಡ್ಡ ಪರಿಣಾಮವನ್ನು ಪೊಲೀಸರು ಅಲ್ಲಗಳೆಯುವಂತಿಲ್ಲ. ಕಲ್ಲು ಕ್ವಾರಿಗಳಲ್ಲಿ ಮುಖ್ಯವಾಗಿ ಗ್ರಾನೈಟ್ ಕೊರೆಯುವ ಕಟಿಂಗ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಲ್ಲಿ ಬಹುತೇಕರು ರಾಜಸ್ತಾನ ಮತ್ತು ಬಿಹಾರ ಮೂಲದವರು. ಈಗ ಅವರೆಲ್ಲಾ ಉದ್ಯೋಗ ಕಳೆದುಕೊಳ್ಳಲಿದ್ದಾರೆ. ಹಾಗಾಗಿ ಅವರು ದುಡಿಮೆಗೆ ಬೇರೆ ದಾರಿ ಆಯ್ದುಕೊಳ್ಳಲೇಬೇಕಾಗುತ್ತದೆ. ಈಗಾಗಲೇ ಈ ಭಾಗದ ಹೆದ್ದಾರಿ ದರೋಡೆ, ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದ್ದು ಹೀಗೆ ನಿರುದ್ಯೋಗಿಗಳಾದ ಕಾರ್ಮಿಕರು ಅಡ್ಡ ದಾರಿ ಹಿಡಿಯುವ ಅಪಾಯವನ್ನು ತಳ್ಳಿ ಹಾಕುವಂತಿಲ್ಲ. ಯಾವುದಕ್ಕೂ ಪೊಲೀಸರು ಜಾಗೃತವಾಗಿದ್ದರೆ ಕ್ಷೇಮ.

ಅಂಬಲಪಾಡಿ: 'ಮಹಾಕಾಳಿ'ಗೆ ಬಲ್ಲಾಳರಿಂದ ಮುಕ್ತಿ!

ಉಡುಪಿಯಿಂದ ಮೂರೇ ಮೂರು ಕಿಲೋ ...ಟರ್ ಅಂತರದಲ್ಲಿ ಮುಖ್ಯರಸ್ತೆಯ ಮಗ್ಗುಲಲ್ಲೇ ...ಲ್ಲಿಕೊಂಡಿರುವ ಅಂಬಲಪಾಡಿ, ಕರಾವಳಿ ಭಾಗದ ...ಪ್ಪು ಪುಣ್ಯಕ್ಷೇತ್ರಗಳಲ್ಲಿ ಒಂದು. ವಾರ್ಷಿಕ ಕೋಟ್ಯಂತರ ...ಯುವಿರುವ ದಿವ್ಯ(?)ಕ್ಷೇತ್ರ. ಇತ್ತೀಚಿನ ದಿನಗಳಲ್ಲಿ ಇಲ್ಲಿನ ...ರ್ದನ ಸ್ವಾಮಿ ಮತ್ತು ಮಹಾಕಾಳಿ ದೇವಸ್ಥಾನದ ...ತ್ವಗಿಂತ ಬಲ್ಲಾಳ ಅಲಿಯಾಸ್ ಉಡುಪ ಫ್ಯಾಮಿಲಿ ...ಸ್ ಮುಜರಾಯಿ ಇಲಾಖೆಯ ಜಟಾಪಟಿಯಿಂದಲೇ ... ಭಾರೀ ಸದ್ದು ಮಾಡುತ್ತಿದೆ. ತಲತಲಾಂತರದಿಂದ ...ವಸ್ಥಾನದ ಆಡಳಿತ ಮಂಡಳಿಗೆ ವಂಶಪಾರಂಪರ್ಯ ...ತಮ್ಮ ಕುಟುಂಬದವರೇ ಟ್ರಸ್ಟಿಗಳಾಗುತ್ತಿದ್ದು ತಮ್ಮ ...ದುಡ್ಡಿನಿಂದ ದೇವಸ್ಥಾನ ನಡೆಯುತ್ತಿದೆಯೇ ಹೊರತು ... ಕಾಣಿಕೆಯಿಂದಲ್ಲ, ಹಾಗಾಗಿ ಇದು ತಮ್ಮ ಖಾಸಗಿ ... ಸರ್ಕಾರಕ್ಕೆ ಇದರ ಮೇಲೆ ಯಾವ ಹಕ್ಕೂ ಇಲ್ಲ ...ಅಣ್ಣಾಜಿ ಬಲ್ಲಾಳ ಮತ್ತವರ ಮಗ ಎನ್. ವಿಜಯ ... ಕೋರ್ಟ್ ಮೆಟ್ಟಿಲೇರಿದ್ದರು. ಇದೆಲ್ಲಾ ಬಿಜೆಪಿ ... ಅಧಿಕಾರಕ್ಕೇರಿದ ಹೊಸತರಲ್ಲಿ ನಡೆದ ಹಕೀಕತ್ತಾಗಿತ್ತು. ... ಆಗಲೇ ವಿಸ್ತೃತ ವರದಿ ಪ್ರಕಟಿಸಿ ದೇವರ ಹೆಸರಲ್ಲಿ ... ಆದಾಯವನ್ನೂ, ಕೋಟಿಗಟ್ಟಲೆ ಬೆಲೆಬಾಳುವ ...ನನ್ನೂ ವಶಪಡಿಸಿಕೊಳ್ಳುವ ಹೊಂಚನ್ನು ಜನರ ...ರಿಸಿತ್ತು. 2014, 15 ಏಪ್ರಿಲ್‌ರಂದು ತನ್ನ ತೀರ್ಪು ...ರುವ ಉಡುಪಿ ಸಿವಿಲ್ ಕೋರ್ಟ್ ಬಲ್ಲಾಳರಿಗೆ ...ಕರ ಶಾಕ್ ಕೊಟ್ಟಿದೆ. 'ದೇವಸ್ಥಾನ ತಮ್ಮ ಖಾಸಗಿ ...ಂಬುದನ್ನು ಸಾಬೀತುಪಡಿಸುವ ಯಾವ ದಾಖಲೆ ...ಬಲ್ಲಾಳ ಕುಟುಂಬದ ಬಳಿ ಇಲ್ಲ, ಹಾಗಾಗಿ ಅವರು ...ಂತೆ ಇಂಜೆಕ್ಷನ್ ಆರ್ಡರ್ ನೀಡಲು ಸಾಧ್ಯವಿಲ್ಲ' ... ಕೋರ್ಟ್ ಕೇಸನ್ನು ತಳ್ಳಿ ಹಾಕಿದೆ. ಅಣ್ಣಾಜಿ ...ರಂತು ಈಗ ದಿವಂಗತ; ಅವರ ಮಗ ವಿಜಯ್ ... ದಿಗಂತ ನೋಡುತ್ತಾ ಕೂರುವಂತಾಗಿದೆ...

...ಂದು ಇಂಟರೆಸ್ಟಿಂಗ್ ಇತಿಹಾಸ

...ಡೀ ಪ್ರಕರಣದ ಜಾಡು ಶುರುವಾಗುವುದೇ 800 ...ಳ ಹಿಂದಿನ ಜೈನ ರಾಜನ ಇತಿಹಾಸದಿಂದ. ಎಂಟು ... ವರ್ಷಗಳ ಹಿಂದೆ ಈಗಿನ ಅಂಬಲಪಾಡಿ ಇರುವ ...ತ್ತಲಿನ ಪ್ರದೇಶಗಳನ್ನು ಜೈನ ರಾಜನೊಬ್ಬ ಆಳುತ್ತಿದ್ದ. ...ವಮನೆತನಕ್ಕೆ 'ನಿದಂಬರು' ಎಂಬ ಹೆಸರಿತ್ತಾದ್ದರಿಂದ ... ಆಳುತ್ತಿದ್ದ ಸಂಸ್ಥಾನವನ್ನು 'ನಿದಂಬೂರು' ...ಗುತ್ತಿತ್ತು. ಸಂಸ್ಥಾನವೆಂದರೆ ದೊಡ್ಡ ರಾಜ್ಯವೇನಲ್ಲ, ...ದ ಏಳೆಂಟು ಹಳ್ಳಿಗಳಷ್ಟೆ. ಹೀಗೆ ರಾಜ್ಯವಾಳುತ್ತಿದ್ದ ...ನಕ್ಕೆ 'ಬಲ್ಲಾಳ' ಎನ್ನುವ ಉಪನಾಮವೂ ಇತ್ತು. ...ು ವಾಸವಿದ್ದ ಅರಮನೆಯನ್ನು ಬೀಡು ಮನೆ ...ಂದ ಕರೆಯಲಾಗುತ್ತಿತ್ತು. ಒಟ್ಟಿನಲ್ಲಿ ಜೈನವಂಶಸ್ಥರಾದ ...ರು ಬಲ್ಲಾಳರು ಅಲ್ಲಿ ಆಳ್ವಿಕೆ ನಡೆಸಿಕೊಂಡಿದ್ದರು. ... ವಂಶದ ರಾಜನೊಬ್ಬನ ಮಗ ಅದೊಮ್ಮೆ ...ದ್ದಂತೆ ನಾಪತ್ತೆಯಾಗಿ ಹೋಗಿದ್ದ. ಚಿಂತೆಗೀಡಾದ ...ಅರಸ ತನ್ನ ಮಗನನ್ನು ಹುಡುಕಿಕೊಟ್ಟವರಿಗೆ ...ಮಾನವಾಗಿ ಇಷ್ಟು ಹಣ ನೀಡುವುದಾಗಿ ಡಂಗೂರ ...ಿದ. ಯಾತ್ರೆ ಹೊರಟಿದ್ದ ಕುಂದಾಪುರ ಮೂಲದ ...ಬ್ರಾಹ್ಮಣ ಕುಟುಂಬವೊಂದಕ್ಕೆ ಈ ಸುದ್ದಿ ಮುಟ್ಟಿತು. ...ಕುಮಾರನನ್ನು ಹುಡುಕಿ ತಂದ ಬ್ರಾಹ್ಮಣ ಕುಟುಂಬ ...ಗೆ ಒಪ್ಪಿಸಿತು. ಖುಷಿಗೊಂಡ ರಾಜ ಬಹುಮಾನ ...ಲ್ಲದೆ ಅದೇ ಊರಿನಲ್ಲಿ ತಂಗಲೂ ಅವಕಾಶವನ್ನೂ ...ಕೊಟ್ಟಿದ್ದ. ಮಗನಿಗೆ ಪಟ್ಟ ಕಟ್ಟಿದ ಕೆಲಕಾಲದಲ್ಲೇ ...ರಾಜ ದೈವಾಧೀನನಾದ. ಸನ್ಯಾಸತ್ವದ ಬಗ್ಗೆ ವಿಪರೀತ ...ಹೊಂದಿದ್ದ ಆ ಯುವರಾಜ ತನ್ನನ್ನು ಹುಡುಕಿ ತಂದ ...ಪುರದ ಉಡುಪಿ ಬ್ರಾಹ್ಮಣ ಕುಟುಂಬಕ್ಕೇ ರಾಜ್ಯಭಾರ ...ದೀಕ್ಷೆ ತೆಗೆದುಕೊಂಡು ಹೊರಟುಹೋಗಿದ್ದ.

...ಗೆ ಜೈನ ರಾಜ್ಯ ಅನಾಯಾಸವಾಗಿ ಉಡುಪ ... ಕುಟುಂಬಕ್ಕೆ ಒಲಿದುಬಂದಿತ್ತು. ತಮ್ಮ 'ಉಡುಪ' ...ದುಕೊಂಡ ಕುಂದಾಪುರದ ಬ್ರಾಹ್ಮಣ ಕುಟುಂಬ ... 'ಬಲ್ಲಾಳ'ರಾಗಿ ಬದಲಾಗಿದ್ದರು. ಉಡುಪರು ...ರಾಗಿ ಬದಲಾಗುವುದಕ್ಕೂ ಮುನ್ನವೇ ಅಂದರೆ ...ದ ಜೈನ ಬಲ್ಲಾಳ ರಾಜರ ಆಳ್ವಿಕೆಯಲ್ಲಿದ್ದಾಗಲೆ ...ಊರಿನಲ್ಲಿ ಮಹಾಕಾಳಿ ದೇವಾಲಯವಿತ್ತು, ಅದಕ್ಕೆ ...ರಾಜರು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರಲ್ಲದೆ ಆ ...ಡೆ ರಾಜರಾಗಿದ್ದರಿಂದ ಅದರ ಪೋಷಕರೂ ಆಗಿದ್ದರು. ... ಬಲ್ಲಾಳರು ಅಧಿಕಾರಕ್ಕೇರಿದ ನಂತರವೂ ಸಹಾ ...ಪ್ರಕಾರ ಅವರೇ ಆ ದೇವಾಲಯದ ಪೋಷಕರಾಗಿ ...ಮುಂದುವರೆದರು.

...ಗ ಟ್ವಿಸ್ಟ್ ಬರುವುದೇ ಅಲ್ಲಿಂದಾಚೆಗೆ. ಜೈನ ... ಮಹಾಕಾಳಿಯ ಆರಾಧಕರಾಗಿದ್ದರು. ಆದರೆ ಹೊಸ ... ಬಲ್ಲಾಳರು ಮೂಲತಃ ಜನಾರ್ದನ (ಕೃಷ್ಣ)ನ ...ರಾಗಿದ್ದರು. ಅವರ ಮೂಲಸ್ಥಾನ ಕುಂದಾಪುರ ... ಕಡೇಕರ್‌ನಲ್ಲಿ ಅವರು ಜನಾರ್ದನನನ್ನೆ ತಮ್ಮ ...ವರಾಗಿ ಪೂಜಿಸುತ್ತಿದ್ದರು. ಹಾಗಾಗಿ ಕಡೇಕರ್‌ನ ...ಮೂಲಸ್ಥಾನದಿಂದ ಜನಾರ್ದನ ವಿಗ್ರಹವನ್ನು ತಂದು ...ಮಹಾಕಾಳಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿ ಪೂಜೆ ...ದರು. ಹೀಗೆ ಮಹಾಕಾಳಿ ದೇವಾಲಯವಿದ್ದದ್ದು ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನವಾಗಿ ರೂಪಾಂತರಗೊಂಡಿತ್ತು. 1571ರಲ್ಲಿ ಬ್ರಾಹ್ಮಣ ಬಲ್ಲಾಳ ಕುಟುಂಬದ ಮುಖ್ಯಸ್ಥನಾಗಿದ್ದ ಶ್ರೀಧರ್ ನಿದಂಬುರ ಬಲ್ಲಾಳ ಎಂಬಾತ ಹಳೇ ದೇವಸ್ಥಾನವನ್ನು ನವೀಕರಣಗೊಳಿಸಿ ಜನಾರ್ದನ ದೇಗುಲವೇ ಪ್ರಧಾನವಾಗುವಂತೆ ಮಾಡಿದ್ದ. ಅಲ್ಲಿಂದಾಚೆಗೆ ಮೂಲದೇವಿ ಮಹಾಕಾಳಿ ಈ ದೇವಸ್ಥಾನದಲ್ಲಿ ಎರಡನೇ ದರ್ಜೆಯ ದೇವಿಯಾಗುತ್ತ, ವಲಸಿಗ ದೇವ ಜನಾರ್ದನನೆ ಪ್ರಧಾನವಾಗುತ್ತಾ ಬಂದ.

ಬೀಡುಮನೆ (ಜೈನ ರಾಜರ ಅರಮನೆ) ಸೇರಿದಂತೆ ಇಡೀ ರಾಜ್ಯವೇ ಉಡುಪರಿಗೆ ಒಲಿದು ಬಂದಿದ್ದರೂ ಅರ್ಚಕ ಬುದ್ಧಿಯ ಬ್ರಾಹ್ಮಣರು ಕ್ಷತ್ರಿಯರಾಗುವ ಬದಲು ತಮ್ಮ ಸಾಮ್ರಾಜ್ಯವನ್ನು ಆದಾಯದ ಮೂಲವಾಗಿದ್ದ ದೇವಸ್ಥಾನಕ್ಕೆ ಮಾತ್ರವೇ ಸೀಮಿತವಾಗಿಸಿಕೊಂಡು ಭರ್ಜರಿ ಕಮಾಯಿ ಕಾಣುತ್ತಾ ಬಂದಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಮುಜರಾಯಿ ಇಲಾಖೆಯ ಧಾರ್ಮಿಕ ದತ್ತಿ ಕಾನೂನು, 2003ರ ಪ್ರಕಾರ ದೇವಸ್ಥಾನಗಳನ್ನು ಇಲಾಖೆಯ ವಶಕ್ಕೆ ತೆಗೆದುಕೊಳ್ಳುತ್ತಿರುವುದನ್ನು ಕಂಡು ಕಳವಳಕ್ಕೀಡಾದ ಬಲ್ಲಾಳ ಫ್ಯಾಮಿಲಿಯ ಈಗಿನ ತಲೆಮಾರು ಹೇಗಾದರು ಮಾಡಿ ದೇವಸ್ಥಾನವನ್ನು ತಮ್ಮ ಸುಪರ್ದಿನಲ್ಲೇ ಉಳಿಸಿಕೊಳ್ಳಲು ಹವಣಿಸುತ್ತಿತ್ತು. ಸದರಿ ದತ್ತಿ ಕಾಯ್ದೆಯಲ್ಲಿ ಒಂದು ವಿನಾಯ್ತಿ ಇದೆ. ಅದೇನೆಂದರೆ ಯಾವುದೇ ದೇವಸ್ಥಾನ ಸಾರ್ವಜನಿಕ ಪಾಲ್ಗೊಳ್ಳುವಿಕೆ ಇಲ್ಲದೆ ಒಂದೇ ಬಗೆಯ ನಂಬಿಕೆಯನ್ನೊಳಗೊಂಡ ಜನರ ಸಮೂಹದಿಂದ ಅಥವಾ ಒಂದೇ ಉಪನಾಮ ಹೊಂದಿರುವ ಸಂಘಟಿತ ಒಕ್ಕೂಟದಿಂದ ಸ್ಥಾಪಿಸಲ್ಪಟ್ಟು, ನಡೆಸಲ್ಪಡುತ್ತಿದ್ದರೆ ಅವುಗಳನ್ನು ಸರ್ಕಾರ ವಶಕ್ಕೆ ತೆಗೆದುಕೊಳ್ಳಲು ಬರುವುದಿಲ್ಲ. ಈ ವಿನಾಯ್ತಿಗೂ ಒಂದಷ್ಟು ಉಪನಿಬಂಧನೆಗಳಿವೆಯಾದರು ಒಟ್ಟಾರೆಯಾಗಿ ಮಠಗಳು ಸ್ವತಂತ್ರವಾಗುಳಿಯಲು ನೆರವಾಗಿರುವುದೇ ಈ ವಿನಾಯ್ತಿ. ಇದನ್ನೇ ಬಂಡವಾಳ ಮಾಡಿಕೊಳ್ಳಲು ಶಿವಳ್ಳಿ ಉಡುಪ ಬ್ರಾಹ್ಮಣ ಅರ್ಥಾತ್ ಬಲ್ಲಾಳರ ನವ ಪೀಳಿಗೆ ಯೋಜನೆ ರೂಪಿಸಿತ್ತು. 2008ರಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೇರಿ ಗೋಕರ್ಣ ಮಠವನ್ನು ರಾಘವ ಸ್ವಾಮೀಜಿಗೆ ಬಿಟ್ಟು ಕೊಡುವ ನಿರ್ಧಾರ ಪ್ರಕಟಿಸುತ್ತಿದ್ದಂತೆಯೇ ಅಣ್ಣಾಜಿ ಬಲ್ಲಾಳ ಮತ್ತು ವಿಜಯ್ ಬಲ್ಲಾಳ ಕಾರ್ಯಪ್ರವೃತ್ತರಾಗಿ ಕೋರ್ಟ್ ಮೆಟ್ಟಿಲೇರಿದ್ದರು. ಕೋರ್ಟ್‌ನಿಂದ ಇಂಜೆಕ್ಷನ್ ತೀರ್ಪೊಂದು ಲಭಿಸಿಬಿಟ್ಟರೆ ತಮ್ಮ ಪ್ರಭಾವ ಬಳಸಿಕೊಂಡು ಆಗಿನ ಗೃಹ ಸಚಿವ ವಿ.ಎಸ್.ಆಚಾರ್ಯರ ಸಖ್ಯವನ್ನೇ ನೆಪ ಮಾಡಿಕೊಂಡು ದತ್ತಿ ಕಾನೂನಿಂದ ತಮ್ಮ ದೇವಸ್ಥಾನ ಹೊರಗುಳಿಯುವಂತೆ ಮಾಡಿಕೊಳ್ಳುವುದು ಅವರ ಉದ್ದೇಶವಾಗಿತ್ತು.


ಹೊರಬಿತ್ತು ಖಡಕ್ ತೀರ್ಪು

ಸುಮಾರು ಐದಾರು ನೂರು ವರ್ಷಗಳಿಂದ ತಮ್ಮ ಕುಟುಂಬವೇ ದೇವಸ್ಥಾನದ ಮೇಲ್ವಿಚಾರಣೆ ನಡೆಸುತ್ತಿರುವುದರಿಂದ ಕೋರ್ಟ್ ಸುಲಭವಾಗಿ ತಮ್ಮ ಪರವಾಗಿ ತೀರ್ಪು ನೀಡುತ್ತದೆಂದೇ ಅವರು ನಂಬಿದ್ದರು. ಆದರೆ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ನಾಗಜ್ಯೋತಿಯವರು ಒಂದೊಂದು ಸಾಕ್ಷಿಯನ್ನೂ ಕೂಲಂಕಷವಾಗಿ ಅಧ್ಯಯನ ನಡೆಸಿ ಇತಿಹಾಸದಿಂದಲೇ ಬಲ್ಲಾಳರಿಗೆ ಪಾಠ ಕಲಿಸಿದ್ದಾರೆ. ತಮಾಷೆಯ ಸಂಗತಿಯೆಂದರೆ ತಮ್ಮ ಒಡೆತನವನ್ನು ಸಾಬೀತುಪಡಿಸಿಕೊಳ್ಳಲು ಅಣ್ಣಾಜಿ ಮತ್ತು ವಿಜಯ್ ಬಲ್ಲಾಳ ನೀಡಿದ ದಾಖಲೆಗಳೆ ಅವರಿಗೆ ಉಲ್ಟಾ ಹೊಡೆದಿರೋದು.

ಮೊದಲನೆಯದಾಗಿ ಕೋರ್ಟ್ ಇಲ್ಲಿ ಎತ್ತಿರೋದು ದತ್ತಿ ಕಾಯ್ದೆಯಿಂದ ವಿನಾಯ್ತಿ ಬಯಸುತ್ತಿರುವ ದೇವಸ್ಥಾನದ ಅರ್ಹತೆಯನ್ನು. ಮೀಸಲಾತಿಗೆ ಅರ್ಹತೆ ಬೇಕೆಂದರೆ ಮೂರು ಮಾನದಂಡಗಳನ್ನು ಪೂರೈಸಬೇಕೆಂದು ಕೋರ್ಟ್ ಅಪೇಕ್ಷಿಸಿದೆ. ಮೊದಲನೆಯದು ಒಂದೇ ನಂಬಿಕೆಯ ಜನರ ಸಮೂಹ ಅದನ್ನು ಸಂಸ್ಥಾಪಿಸಿರಬೇಕು. ಎರಡನೆಯದು ಒಂದು ಸಾಮಾನ್ಯ ಸಂಘಟನೆ ಅದರ ಉಸ್ತುವಾರಿ ನಿರ್ವಹಿಸುತ್ತಿರಬೇಕು. ಮೂರನೆಯದು ಆ ಸಮೂಹದವರಿಗೆ ಒಂದು ವಿಶಿಷ್ಟ ಉಪನಾಮವಿರಬೇಕು. ಆದರೆ ಬಲ್ಲಾಳ ಎಂಬುದು ಜನರ ಸಮೂಹವಲ್ಲ, ರಾಜ್ಯವನ್ನು ಆಳುತ್ತಿದ್ದ ಅರಸರಿಗೆ ಗೌರವ ಸೂಚಕವಾಗಿ ಕರೆಯುತ್ತಿದ್ದ ಉಪನಾಮ. ಬಲ್ಲಾಳ ಎನ್ನುವುದು ಸಂಘಟನೆಯೂ ಅಲ್ಲ, ಅದೊಂದು ಕುಟುಂಬ. ಬಲ್ಲಾಳ ಎನ್ನುವುದು ಫಿರ್ಯಾದುದಾರರ (ಮೂಲತಃ ಶಿವಳ್ಳಿ ಉಡುಪ ಬ್ರಾಹ್ಮಣ) ವಿಶಿಷ್ಟ ಉಪನಾಮವೂ ಅಲ್ಲ, ರಾಜ್ಯವನ್ನು ಆಳುತ್ತಿದ್ದವರಿಗೆ ಕರೆಯುವ ಗೌರವ ಸೂಚಕ ಹೆಸರಷ್ಟೆ. ಮೊದಲು ಜೈನ ಅರಸರಿಗೆ ಕರೆಯುತ್ತಿದ್ದರು ನಂತರ ಆಳ್ವಿಕೆಗೆ ಬಂದ ಶಿವಳ್ಳಿ ಬ್ರಾಹ್ಮಣರಿಗೆ ಅದು ವರ್ಗವಾಯಿತು. ಹಾಗಾಗಿ ವಿನಾಯ್ತಿ ನೀಡಲು ಸಾಧ್ಯವೇ ಇಲ್ಲ ಎನ್ನುವುದು ಕೋರ್ಟ್‌ನ ತೀರ್ಪು.







ವಿಜಯ್ ಬಲ್ಲಾಳ

ಅಷ್ಟಕ್ಕೇ ಸುಮ್ಮನಾಗದ ನ್ಯಾಯಾಲಯ ಸಂಸ್ಥಾಪನೆಯ ಮೂಲಕ್ಕೇ ಕೈಹಾಕಿದೆ. ನ್ಯಾಯಾಲಯದ ಪ್ರಕಾರ ಬಲ್ಲಾಳರು ಹೇಳಿಕೊಳ್ಳುವಂತೆ ಅದು ಅವರ ಕುಟುಂಬದ ದೇವಸ್ಥಾನವಾಗಲಿಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ಅದನ್ನು ಸ್ಥಾಪಿಸಿದ್ದು ಈಗಿನ ಬಲ್ಲಾಳರಲ್ಲ, ಜೈನ ಬಲ್ಲಾಳರ ಆಳ್ವಿಕೆಯಲ್ಲೇ ಮಹಾಕಾಳಿ ದೇವಸ್ಥಾನವಿತ್ತು ಎಂಬುದನ್ನು ಇತಿಹಾಸವೇ ಖಾತ್ರಿಪಡಿಸುತ್ತದೆ. ಹಾಗೆ ಹೇಳುತ್ತಿದ್ದಂತೆ ಮಹಾಕಾಳಿ ದೇವಸ್ಥಾನದ ಉಸಾಬರಿ ಬಿಟ್ಟು ತಾವೇ ಮೂಲಸ್ಥಾನದಿಂದ ವಿಗ್ರಹ ತಂದು ಸ್ಥಾಪಿಸಿದ ಜನಾರ್ದನ ದೇವಸ್ಥಾನವನ್ನು ಕೇಸಿಗೆ ಎಳೆದು ತರಬಹುದೆಂಬ ಮುನ್ನೆಚ್ಚರಿಕೆ ವಹಿಸಿರುವ ನ್ಯಾಯಾಲಯ ಬಲ್ಲಾಳರ ಆ ಹಾದಿಗೂ ಬ್ರೇಕ್ ಹಾಕಿದೆ. ಜನಾರ್ದನ ವಿಗ್ರಹ ಬಲ್ಲಾಳರ ಸ್ವಂತ ಪ್ರತಿಷ್ಠಾಪನೆಯಾದರು ಅದನ್ನು ತಮ್ಮ ಖಾಸಗಿ ಸ್ಥಳದಲ್ಲಿ ಪ್ರತಿಷ್ಠಾಪಿಸಿಕೊಂಡಿದ್ದರೆ ಅದಕ್ಕೆ ವಿನಾಯ್ತಿ ಅನ್ವಯವಾಗುತ್ತಿತ್ತು. ಆದರೆ ಅಷ್ಟರಲ್ಲಾಗಲೆ ಸಾರ್ವಜನಿಕರಿಗೆ ಮುಕ್ತವಾಗಿದ್ದ ಮಹಾಕಾಳಿ ದೇವಾಲಯದಲ್ಲಿ ಅದನ್ನು ಪ್ರತಿಷ್ಠಾಪಿಸಿದ್ದರಿಂದ ಅದರ ಖಾಸಗಿತನ ಮಾಯವಾಗಿ ಸಾರ್ವಜನಿಕ ಮೂರ್ತಿಯಾಗುತ್ತದೆ. ಹಾಗಾಗಿ ಅದಕ್ಕೂ ವಿನಾಯ್ತಿ ನೀಡಲಿಕ್ಕೆ ಬರುವುದಿಲ್ಲ.

ನ್ಯಾಯಾಲಯ ಇಲ್ಲಿ ಮತ್ತೊಂದು ಮುಖ್ಯವಾದ ವಿಚಾರವನ್ನು ಪ್ರಸ್ತಾಪಿಸಿದೆ. ಅದೇನೆಂದರೆ ಬಲ್ಲಾಳ ಕುಟುಂಬ ದೇವಸ್ಥಾನಕ್ಕೆ ಏನೇ ಸೇವೆ, ಸಮರ್ಪಣೆ ಗೈದಿದ್ದರೂ ಅದು ತಮಗೆ ಒಲಿದು ಬಂದು 'ಬಲ್ಲಾಳ' ರೂಪದಲ್ಲಿಯೇ ಆಗಿರುತ್ತದೆ. ಬಲ್ಲಾಳ ಎಂದರೆ ಆಳುವ ಅರಸ. ತನ್ನ ಸಂಸ್ಥಾನದ ದೇವಾಲಯಗಳನ್ನು ಪೋಷಿಸುವ ರಾಜನ ಕರ್ತವ್ಯ ರೂಪದಲ್ಲಿ ಬಲ್ಲಾಳರು ಉಸ್ತುವಾರಿ ನಿರ್ವಹಿಸಿದ್ದಾರೆಯೇ ಹೊರತು ಒಂದು ಕುಟುಂಬವಾಗಿ ಅಲ್ಲ. 'ರಾಜ' ಎಂದರೆ ಅದು ಸಾರ್ವಜನಿಕವಾಗಿ ಇರುತ್ತದೆಯೇ ವಿನಾಃ ಖಾಸಗಿ ಆಗುವುದಿಲ್ಲ ಎನ್ನುವುದು ನ್ಯಾಯಾಲಯದ ಅಭಿಪ್ರಾಯ.

ಇತ್ತ ದೇವಾಲಯ ತನ್ನ ಖಾಸಗಿ ಸ್ವತ್ತು ಎಂದು ಪ್ರತಿಪಾದಿಸುವ ಅಣ್ಣಾಜಿ ಬಲ್ಲಾಳರೆ ಒಮ್ಮೆ ಅಂದಿನ ಜಿಲ್ಲಾಧಿಕಾರಿಗೆ ಪತ್ರ ಬರೆದು ಜನರಿಂದ ಸಂಗ್ರಹಿಸಿದ ದೇವಸ್ಥಾನದ ದೇಣಿಗೆಯನ್ನು ಜನರಿಗೋಸ್ಕರವೇ ಖರ್ಚು ಮಾಡಲು ಅನುವು ಮಾಡಿಕೊಡುವಂತೆ ಬೇಡಿಕೊಂಡಿದ್ದರು. ಇದಕ್ಕೆ ಪ್ರತಿಯಾಗಿ 14.10.2004ರಂದು ಡಿಸಿಯಿಂದ ಅನುಮತಿಯ ಪತ್ರವೂ ರವಾನೆಯಾಗಿತ್ತು. ಅದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಾಲಯ ದೇವಸ್ಥಾನ ಜನರ ಕಾಣಿಕೆಯನ್ನು ಸಂಗ್ರಹಿಸಿದೆ ಮತ್ತು ಸರ್ಕಾರದ ಅನುಮತಿ ಪಡೆಯುವಷ್ಟರಮಟ್ಟಿಗೆ ಅದು ಸರ್ಕಾರದ ಅಧೀನದಲ್ಲಿ ಇರುವುದರಿಂದ ಖಾಸಗಿ ಆಗಲು ಸಾಧ್ಯವೇ ಇಲ್ಲ ಎನ್ನುವ ನಿರ್ಣಯಕ್ಕೆ ಬಂದಿದೆ. ಇದಕ್ಕೆ ಪುಷ್ಟಿ ನೀಡುವಂತೆ ವಿಚಾರಣೆಯ ಸಂದರ್ಭದಲ್ಲಿ ಫಿರ್ಯಾದು ಕುಟುಂಬದವರೇ ಜನರಿಂದ ಕಾಣಿಕೆ ಸ್ವೀಕರಿಸಿದ್ದಾಗಿ, ಹೀಗೆ ಸ್ವೀಕರಿಸಿದ ಸೇವಾ ಮೌಲ್ಯಗಳಿಗೆ ರಸೀದಿ ನೀಡಿರುವುದಾಗಿ ಹೇಳಿಕೊಂಡಿದ್ದಲ್ಲದೆ ರಸೀದಿಗಳನ್ನೂ ಹಾಜರುಪಡಿಸಿದ್ದರು. ಅವರ ಉದ್ದೇಶ ತಮ್ಮ ದೇಗುಲ ವ್ಯವಸ್ಥಿತ ಸಂಘಟನೆಯಡಿಯಲ್ಲಿ ನಡೆಯುತ್ತಿದೆ ಎಂಬುದನ್ನು ಸಾಬೀತುಪಡಿಸಲು ಆಗಿತ್ತು. ಆದರೆ ಜನರಿಂದ ಕಾಣಿಕೆ ಸ್ವೀಕರಿಸಿರುವುದಕ್ಕೆ ಪುರಾವೆಯಾಗಿ ನ್ಯಾಯಾಲಯ ಅದನ್ನು ಪರಿಗಣಿಸಿದ್ದು ಬಲ್ಲಾಳ ಕುಟುಂಬಕ್ಕೆ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಂಡಂತಾಗಿದೆ.

ದೇವಸ್ಥಾನದಿಂದಲೇ ಪ್ರಕಟಿತವಾದ ತಮಗೆ ಬೇಕಾದಂತೆ ಬರೆದುಕೊಂಡ ಕೃತಿಗಳ ಸಾಕ್ಷಿ ನೀಡಿರುವ ಉಡುಪ ಬಲ್ಲಾಳರಿಗೆ ಪ್ರತಿಯಾಗಿ ಸರ್ಕಾರಿ ಪ್ರತಿವಾದಿಗಳು ನೀಡಿದ ಮುರಳೀಧರ ಉಡುಪ ಮತ್ತು ಪಿ.ಎನ್.ನರಸಿಂಹ ಮೂರ್ತಿ ಬರೆದಿರುವ ಪುಸ್ತಕದ ಉಲ್ಲೇಖವನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿದೆ. ಆ ಪುಸ್ತಕದಲ್ಲಿ 'ನಿಡಂಬೂರು ಮಾಗಣೆಯ ಎಂಟು ಗ್ರಾಮಗಳ ಜನರ ಆರಾಧ್ಯ ದೇವತೆ ಈ ಮಹಾಕಾಳಿ, ಜನಸಾಮಾನ್ಯರಿಗೊಲಿದಿರುವ ಈ ದೇವಿ ಅತ್ಯಂತ ಪ್ರಾಚೀನ ಕಾಲದಲ್ಲಿ ಪ್ರಾಯಶಃ ಜನಸಾಮಾನ್ಯರಿಂದಲೇ ಪೂಜೆಗೊಂಡಿರಬೇಕು. ಕಾಲಕ್ರಮೇಣ ವೈದಿಕ ವಿಧಿವಿಧಾನಗಳ ಚೌಕಟ್ಟಿಗೆ ಸೇರಿ ಬ್ರಾಹ್ಮಣ ಅರ್ಚಕರಿಂದ ನಿತ್ಯಪೂಜೆ ಸ್ವೀಕರಿಸಿರಬೇಕು' ಎಂದು ಹೇಳಲಾಗಿದೆ.


ಬಲ್ಲಾಳ ಕುಟುಂಬ ಕೋರ್ಟ್‌ನಲ್ಲಿ ಮತ್ತೊಂದು ಮೊರೆ ಮಾಡಿಕೊಂಡಿತ್ತು. ಅದರಂತೆ ಜೈನ ಅರಸರಿಂದ ಅವರು ಆಳುತ್ತಿದ್ದ ನಿದಂಬೂರು ಸಂಸ್ಥಾನದ ಆಳ್ವಿಕೆ ತಮಗೆ ವರ್ಗಾವಣೆಯಾದ್ದರಿಂದ ತಮ್ಮನ್ನು 'ನಿದಂಬೂರು ಮಾಗಣೆ ಬಲ್ಲಾಳ' ಎಂದು ಪರಿಗಣಿಸಬೇಕೆಂಬುದು ಅವರ ಅಹವಾಲಾಗಿತ್ತು. ಹಾಗೊಮ್ಮೆ ಪರಿಗಣಿಸಿದ್ದೇ ಆದರೆ ಜೈನ ಮಾಗಣೆ ಬಲ್ಲಾಳರು ಇವರ ಪೂರ್ವಿಕರು ಎಂಬುದನ್ನು ಒಪ್ಪಿಕೊಂಡಂತಾಗುತ್ತದೆ. ಆಗ ಮಹಾಕಾಳಿ ದೇವಾಲಯವನ್ನು ಸ್ಥಾಪಿಸಿದ್ದೆ ನಮ್ಮ ಪೂರ್ವಿಕರು ಎಂಬ ವಾದ ಶುರು ಮಾಡಬಹುದೆನ್ನುವುದು ಅವರ ಉದ್ದೇಶ. ಆದರೆ ನ್ಯಾಯಾಲಯ ಬಹಳ ಜಾಣ್ಮೆಯಿಂದ ಅದನ್ನೂ ತಳ್ಳಿ ಹಾಕಿದೆ. ಜೈನ ನಿದಂಬರು, ಶಿವಳ್ಳಿ ಉಡುಪ ಬ್ರಾಹ್ಮಣರಿಗೆ ತಮ್ಮ ಆಡಳಿತ ರಾಜ್ಯಭಾರದ ಜವಾಬ್ದಾರಿಗಳನ್ನು ವಹಿಸಿಕೊಟ್ಟಿರುವುದೇನೊ ನಿಜ. ಸ್ಥಳೀಯ ನಂಬಿಕೆಯ ಪ್ರಕಾರ ಆಳುವವರನ್ನು ಗೌರವ ಸೂಚಕವಾಗಿ 'ಬಲ್ಲಾಳ' ಎಂದು ಕರೆಯುತ್ತಿದ್ದರಿಂದ ಶಿವಳ್ಳಿ ಬ್ರಾಹ್ಮಣರು ಬಲ್ಲಾಳರಾದದ್ದೂ ನಿಜ. ಆದರೆ ನಿದಂಬುರ ವಂಶ ಅಥವಾ ಸಾಮ್ರಾಜ್ಯ ವರ್ಗಾವಣೆಯಾಗಿಲ್ಲ. ಅಧಿಕಾರ ಹಸ್ತಾಂತರಿಸುತ್ತಿದ್ದಂತೆ ನಿದಂಬುರ ಆಡಳಿತ ಕೊನೆಯಾಗಿ ಶಿವಳ್ಳಿ ಬ್ರಾಹ್ಮಣ 'ಬಲ್ಲಾಳ'ರ ಹೊಸ ಆಡಳಿತ, ಸಾಮ್ರಾಜ್ಯ ಶುರುವಾಗಿದೆ. ಹಾಗಾಗಿ ಇವರನ್ನು ನಿದಂಬೂರು ಮಾಗಣೆ ಬಲ್ಲಾಳರು ಅಂತ ಪರಿಗಣಿಸಲಿಕ್ಕೆ ಆಗದು ಎಂಬುದಾಗಿ ಕೋರ್ಟ್ ತನ್ನ ತೀರ್ಪಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದೆ.

ಒಟ್ಟಿನಲ್ಲಿ ದೇವರ ಹೆಸರಲ್ಲಿ ಆದಾಯದ ಮೂಲಕ್ಕೇ ಕೈ ಹಾಕಿದ್ದ ಬಲ್ಲಾಳ ಕುಟುಂಬಕ್ಕೆ ಸೆಷನ್ಸ್ ಕೋರ್ಟ್ ಆರಂಭಿಕ ಪೆಟ್ಟು ನೀಡಿದೆ. ಮುಂದೇನಾಗುತ್ತದೋ ಕಾದು ನೋಡಬೇಕು.

● ಗಿರೀಶ್ ತಾಳಿಕಟ್ಟೆ

ಮಹಾಕಾಳಿಯೇ ನೇಪಥ್ಯಕ್ಕೆ!

ಅಸಲಿಗೆ ಅಂಬಲಪಾಡಿಯಲ್ಲಿ ಮೂಲದಿಂದ ಇದ್ದದ್ದು ಮಹಾಕಾಳಿ ದೇವಾಲಯ. ಆದರೆ ಇವತ್ತು ಅಲ್ಲಿ ಮಹಾಕಾಳಿ ಮೂಲೆಗುಂಪಾಗಿ ಜನಾರ್ದನ ಸ್ವಾಮಿಯೇ ಮುಖ್ಯವಾಗಿದ್ದಾನೆ. ಅದಕ್ಕೂ ಕಾರಣವಿದೆ. ಮಹಾಕಾಳಿ ಮೂಲತಃ ಬ್ರಾಹ್ಮಣ ಪೂಜಿತ ದೇವತೆಯಲ್ಲ, ಉಗ್ರರೂಪಿಣಿ ಮಹಾಕಾಳಿಗೂ ಬ್ರಾಹ್ಮಣ ಪೂಜಾವಿಧಿಗಳಿಗೂ ಆಗಿ ಬರುವುದಿಲ್ಲ, ಹಾಗಾಗಿಯೇ ಮಹಾಕಾಳಿ ದೇವಾಲಯದೊಳಕ್ಕೆ ತಮ್ಮ ಮನೆದೇವರು ಕೃಷ್ಣನನ್ನು ತಂದು ಕೂರಿಸಿದ ಶಿವಳ್ಳಿ ಬ್ರಾಹ್ಮಣರು ಆತನಿಗೇ ಪ್ರಾತಿನಿಧ್ಯ ನೀಡಿದ್ದಾರೆ. ದೇವಸ್ಥಾನದ ಹೆಸರೇ ಹೇಳುವಂತೆ 'ಜನಾರ್ದನ ಮತ್ತು ಮಹಾಕಾಳಿ ದೇವಾಲಯ'ದಲ್ಲಿ ಜನಾರ್ದನನದ್ದೇ ಕಾರುಬಾರು. ನೀವು ಇಂಟರ್ನೆಟ್ ವಿಕಿಪೀಡಿಯಾದ ಅಂಬಲಪಾಡಿ ಪುಟಕ್ಕೆ ಭೇಟಿ ನೀಡಿದರೂ ಅದರಲ್ಲಿ ಇದು ಶ್ರೀಕೃಷ್ಣನ ಪವಿತ್ರ ಸ್ಥಾನ. ಇದರ ಪಕ್ಕದಲ್ಲಿ ಮಹಾಕಾಳಿಯ ಗುಡಿಯಿದೆ ಎಂಬ ಮಾಹಿತಿ ಗೋಚರಿಸುತ್ತದೆ. ತಮಗೆ ಸರಿಬರುವುದಿಲ್ಲ ಎಂಬ ಕಾರಣಕ್ಕೆ ಮೂಲ ದೇವತೆಯನ್ನೇ ನೇಪಥ್ಯಕ್ಕೆ ಸರಿಸಿ ವಲಸಿಗ ಜನಾರ್ದನನಿಗೆ ಮಣೆ ಹಾಕಿದಾರೆ ಶಿವಳ್ಳಿ ಬ್ರಾಹ್ಮಣರು.



ಕವಳನ ಅಂತ್ಯ



ಕುಟ್ಟಿ ರಾಜಾ ಕಿರಾತಕ ಬ್ರದರ್ಸ್ ಸ್ಕೆಚ್

ಒನ್‌ವೇ ಅರ್ಥಾತ್ ಏಕ ಮುಖರಸ್ತೆ ಅಂದರೆ ಹೋಗಬಹುದು ಬರಂಗಿಲ್ಲ. ಬೆಂಗಳೂರಿನ ಭೂಗತ ಕೂಪವೇ ಅಂಥಾದ್ದು. ಅದು ಒನ್‌ವೇ ಟಿಕೆಟ್. ಹೋಗಬಹುದು. ಮಿಂಚಿ ಮೆರೆದಾಡಬಹುದು. ದುಡ್ಡು, ದರ್ಪ, ಹೆಸರು, ಹೆಣ್ಣು, ಆಸ್ತಿ ಅಂತಸ್ತು ಎಲ್ಲವೂ ಇದೆ ನಿಜ. ಆದರೆ ವಾಪಸ್ಸು ಬರುವ ದಾರಿ ಮಾತ್ರ ಇರುವುದಿಲ್ಲ.

ಬಹುಶಃ ರೌಡಿ ಕವಳನಿಗೆ ತಾನು ಹೋಗುತ್ತಿರುವುದು 'ಒನ್ ವೇ' ಎಂಬ ಕನ್ನಡ ಸಿನಿಮಾದ ಆಡಿಯೋ ಬಿಡುಗಡೆ ಕಾರ್ಯಕ್ರಮಕ್ಕೇ ಹೊರತು ಹೋದ ದಾರಿಯೇ 'ಏಕಮುಖ' ಎಂಬ ಕಟುಸತ್ಯ ತಾನೇ ಹೇಗೆ ಅರಿವಾಗಲು ಸಾಧ್ಯವಿತ್ತು?

ಮಹಿಳಾ ರಕ್ಷಣಾ ವೇದಿಕೆಯ ಸೋಕಾಲ್ಡ್ ಅಧ್ಯಕ್ಷೆ ಮಡಿವಾಳದ ಭಾರ್ಗವಿಯ ಆಹ್ವಾನದ ಮೇರೆಗೆ 'ಒನ್ ವೇ' ಚಿತ್ರದ ಆಡಿಯೋ ಬಿಡುಗಡೆಗೆಂದು ಬಂದಿದ್ದ ಕವಳನ ಜೊತೆ ವೇದಿಕೆಯಲ್ಲಿದ್ದವರೇನು ಕಮ್ಮಿಯೆ, ಬಸವನಗುಡಿ ಶಾಸಕ ರವಿ ಸುಬ್ರಹ್ಮಣ್ಯಂ, ವಿದ್ಯಾಪೀಠದ ಬಿಬಿಎಂಪಿ ಕೌನ್ಸಿಲರ್ ಸಂಗಾತಿ ವೆಂಕಟೇಶ್, ಬಂದೀಖಾನೆ ಇಲಾಖೆಯ ಹಿರಿಯ ಡಿಐಜಿ ರಾಜಾ, ಮ್ಯೂಜಿಕ್ ಡೈರೆಕ್ಟರ್ ಅರ್ಜುನ್ ಜನ್ಯ ಮತ್ತು ರಜನಿಯ ಪರಮಾಪ್ತ ರಾಜ್ ಬಹಾದ್ದೂರ್!

ಇಂಥವರ ಜೊತೆ ಗಣ್ಯಾತಿಗಣ್ಯನಂತೆ ವೇದಿಕೆಯೇರಿ ಕುಳಿತಿದ್ದ ಕವಳ ಯಾನೇ ವಿಜಯ್‌ಕುಮಾರ್ ಇದಾಗಿ ಒಂದೇ ಗಂಟೆಯೊಳಗೆ ತಮಿಳುನಾಡು ಗಡಿಯಲ್ಲಿ ಹೆಣವಾಗುತ್ತಾನೆಂಬುದು ಯಾರಿಗೆ ತಾನೇ ಹೇಗೆ ಗೊತ್ತಾಗಲು ಸಾಧ್ಯ? ಹೌದು. ಒಬ್ಬನ ಹೊರತಾಗಿ...!

ಕುಟ್ಟಿ ರಾಜಾ

ಆತನೇ ತಿರುಕುಮಾರ್ ಅಲಿಯಾಸ್ ಕುಟ್ಟಿ!

ಕುಟ್ಟಿ ರಾಜಾ ಎಂದರೆ ಅದು ಒಬ್ಬನದ್ದೇ ಹೆಸರೆಂದು ಯಾರಾದರೂ ಭಾವಿಸಿದ್ದರೆ ಅದು ತಪ್ಪು. ತಿರುಕುಮಾರ್ ಅಲಿಯಾಸ್ ಕುಟ್ಟಿ ಮತ್ತು ತಿರುಮಾರನ್ ಅಲಿಯಾಸ್ ರಾಜಾ ಎಂಬ ಹೆಸರನ್ನು ಬೆಂಗಳೂರಿನ ಜನ ಕೇಳದೆಹೋದರೂ ಕತ್ತಲೆ ಕೂಪದಲ್ಲಿ ಇವೆರಡು ಹೆಸರಿಗಿರುವ ಭೀಕರತೆಯೇ ಬೇರೆ. ಕೃಷ್ಣರಾಜ ಮಾರುಕಟ್ಟೆ, ಕಾಟನ್ ಪೇಟೆ, ಭಕ್ಷಿಗಾರ್ಡನ್, ಆಂಜನಪ್ಪ ಗಾರ್ಡನ್, ಪೆನ್ಷನ್ ಮೊಹಲ್ಲಾ, ಬಿನ್ನಿಪೇಟೆ, ಗೋರಿಪಾಳ್ಯ, ಕೆಂಪಾಪುರ ಅಗ್ರಹಾರ, ಮೈಸೂರು ರೋಡ್, ಕಲಾಸಿಪಾಳ್ಯ, ಚಾಮರಾಜಪೇಟೆಯ ತಮಿಳು ಕೊಂಪೆಗಳಲ್ಲಿ ಕುಟ್ಟಿ ರಾಜಾ ಎಂದರೆ ಸಾಕು ಎಂಥವರೂ ನಡುಗಲೇ ಬೇಕು.


ಕವಳ ಅಲಿಯಾಸ್ ವಿಜಯಕುಮಾರ್ ಹಿಂದೊಮ್ಮೆ ಪೊಲೀಸ್ ಬಂಧನದಲ್ಲಿ..

ಸದ್ಯ ಕವಳನನ್ನು ಆತನ ತಮಿಳುನಾಡಿನ ಅಡಗುತಾಣದ ತನಕ ಬೆನ್ನಟ್ಟಿ ಹೋಗಿ ನಡುರಸ್ತೆಯಲ್ಲಿ ಅಟ್ಟಾಡಿಸಿ ಕೊಂದದ್ದೂ ಇದೇ ಕುಟ್ಟಿ ರಾಜಾ.

ಜೂನ್ 23ರ ಸೋಮವಾರ ಸಂಜೆಯ ಹೊತ್ತಿಗೆ ಭಾರ್ಗವಿಯ 'ಒನ್ ವೇ' ಚಿತ್ರದ ಆಡಿಯೋ ಬಿಡುಗಡೆಗೆಂದು ಬಂದಿದ್ದ ಕವಳ ಗರುಡಾಮಾಲ್‌ನ ಗ್ರ್ಯಾಂಡ್ ಮ್ಯಾಗ್ರತ್ ಹೋಟೆಲಿನ ಬ್ಯಾಂಕ್ವೆಟ್ ಹಾಲ್‌ನ ಕಾರ್ಯಕ್ರಮದ ವೇದಿಕೆಗೇ ಬಂದು ಕೂತಿದ್ದ. ಬಿಬಿಎಂಪಿಯ ಕೌನ್ಸಿಲರ್ ಸಂಗಾತಿ ವೆಂಕಟೇಶ್‌ಗಾಗಲಿ, ಬಸವನಗುಡಿ ಶಾಸಕ ರವಿ ಸುಬ್ರಹ್ಮಣ್ಯರಿಗಾಗಲಿ, ಪಕ್ಕದಲ್ಲೇ ಕೂತಿದ್ದ ಬಂದೀಖಾನೆ ಇಲಾಖೆ ಡಿಐಜಿ ರಾಜಾರಿಗಾಗಲಿ ಈ ಸೋಕಾಲ್ಡ್ ವಿಜಯ್‌ಕುಮಾರ್ ಗೊತ್ತಿಲ್ಲವೆಂದೇನಲ್ಲ. ತನ್ನದೇ ಅಧೀನದಲ್ಲಿರುವ ಪರಪ್ಪನ ಅಗ್ರಹಾರ ಜೈಲಿನಲ್ಲಿ ವರ್ಷಗಟ್ಟಲೇ ಕೈದಿಯಾಗಿದ್ದ ಕವಳ ಯಾರು ತನಗೇ ಗೊತ್ತೇ ಇಲ್ಲ ಎಂದು ಜೈಲು ಮುಖ್ಯಾಧಿಕಾರಿ ರಾಜ ಎಷ್ಟೇ ತಿಪ್ಪೆ ಸಾರಿಸಬಹುದು. ಜೈಲಧಿಕಾರಿ ರಾಜಾನ ಹಿನ್ನೆಲೆ ಪತ್ರಕರ್ತರಿಗೆ ಗೊತ್ತಿಲ್ಲವೆಂದೇನಲ್ಲ.


ತಿರುಕುಮಾರ್

'ಒನ್ ವೇ' ಚಿತ್ರದ ಆಡಿಯೋ ಬಿಡುಗಡೆಗೆಂದು ಕವಳನನ್ನು ಕರೆಸಿದ್ದು ಆ ಚಿತ್ರದ ಖತರ್‌ನಾಕ್ ಡೈರೆಕ್ಟರ್ ಖುಷಿ ಉರ್ಫ್ ಲಡ್ಡು ನಾಗರಾಜ. ಕಂಡಕಂಡವರನ್ನು ಹೀರೋ ಮಾಡ್ತೀನಿ, ಹೀರೋಯಿನ್ ಮಾಡ್ತೀನಿ ಎಂದೇ ಕೋಟಿ ಲೆಕ್ಕದಲ್ಲಿ ಸಿನಿಮಾ ವಂಚನೆಗಿಳಿದ ಲಡ್ಡು ನಾಗರಾಜ ಕವಳನ ಹಳೇ ಚೇಲಾ. ಈ ಕವಳನ ಮೂಲಕ ಖುಷಿಗೆ ಪರಿಚಯವಾದವಳು ಮಡಿವಾಳದ ಹಳೇ ಸುಮಂಗಲಿ ಭಾರ್ಗವಿ. ಕವಳನ ದುಡ್ಡಲ್ಲೇ ನಿರ್ಮಾಣವಾಗುತ್ತಿದ್ದ 'ಒನ್ ವೇ'ಗೆ ಭಾರ್ಗವಿ ನಾಮಕಾವಸ್ತೆಯ ನಿರ್ಮಾಪಕಿಯಷ್ಟೆ. ಹಾಕಿದ ಐವತ್ತು ಲಕ್ಷಕ್ಕೆ 1 ಕೋಟಿಯ ಲಾಭದ ನಿರೀಕ್ಷೆಯಲ್ಲೇ ಆಡಿಯೋ ಬಿಡುಗಡೆಯ ವೇದಿಕೆಯೇರಿದ ಕವಳ ಇಡೀ ಸಮಾರಂಭದ ವಿಶೇಷ ಆಕರ್ಷಣೆಯಂತಿದ್ದ.

ರಿವಾಲ್ವರ್!

ಗ್ರ್ಯಾಂಡ್ ಮ್ಯಾಗ್ರತ್ ಹೋಟೆಲಿನಲ್ಲಿ ಡಿನ್ನರ್ ಮುಗಿಸಿಕೊಂಡು ತನ್ನ ಜೊತೆ ಬರೋಬ್ಬರಿ ಇಪ್ಪತ್ತು ಮಂದಿ ಅಂಗರಕ್ಷಕರ ಸಮೇತ ತನ್ನ ಮಡಿವಾಳದ ಅಡ್ಡೆಗೆ ಬಂದಿದ್ದಾನೆ. ಅಲ್ಲಿ ಇನ್ನೊಂದಿಷ್ಟು ಸಹಚರರ ಜೊತೆ ಮಾತಾಡಿದ್ದಾನೆ. ಮುಂಬರುವ ಮಡಿವಾಳದ ಊರಹಬ್ಬಕ್ಕೆ ಕಮ್ಮಿಯೆಂದರೂ 10 ಸಾವಿರ ಮಂದಿಗೆ ಬಾಡೂಟ ಹಾಕಿಸುತ್ತೇನೆಂದು ಹೂಂಕರಿಸಿದ್ದಾನೆ. ಆನಂತರ ಮಾಮೂಲಿನಂತೆ ತನ್ನ ಇನ್ನೋವಾ ಗಾಡಿಯೇರಿ ಹೊಸೂರಿನತ್ತ ಹೊರಟಾಗ ರಾತ್ರಿ 10 ಗಂಟೆ. ಅತ್ತಿಬೆಲೆ ಚೆಕ್‌ಪೋಸ್ಟಿನಲ್ಲಿ ತನ್ನ ಬೆಂಗಾವಲಿಗೆ ಬಂದಿದ್ದ ಮೂರು ಕಾರುಗಳ ತುಂಬ ಇದ್ದ ರೌಡಿಪಡೆಯನ್ನೆಲ್ಲ ವಾಪಸ್ಸು ಕಳಿಸಿದ್ದೇ ತನ್ನನ್ನು ಯಾರೂ ಹಿಂಬಾಲಿಸುತ್ತಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡಿದ್ದಾನೆ.

ಮಾಮೂಲಿನಂತೆ ಎಲ್ಲಾ ಮುನ್ನೆಚ್ಚರಿಕೆ, ಸುರಕ್ಷತೆಯ ಲೆಕ್ಕ ಹಾಕಿಯೇ ತನ್ನೆಲ್ಲಾ ಅಂಗರಕ್ಷಕರನ್ನು ವಾಪಸ್ಸು ಕಳಿಸಿದ ಕವಳ ತಾನೊಬ್ಬನೇ ಇನ್ನೋವಾ ಕಾರನ್ನು ಡ್ರೈವ್ ಮಾಡಿಕೊಂಡು ಅತ್ತಿಬೆಲೆ ಚೆಕ್‌ಪೋಸ್ಟನ್ನು ದಾಟಿದ್ದಾನೆ. ಕರ್ನಾಟಕದ ಗಡಿಯಾದ್ದರಿಂದ ಮಾಮೂಲಿನಂತೆ ರಿವಾಲ್ವರ್ ಏನಾದರೂ ಚೆಕ್‌ಪೋಸ್ಟ್ ತಪಾಸಣೆಯಲ್ಲಿ ಸಿಕ್ಕಿಬಿದ್ದು ಫಜೀತಿಯಾಗಬಾರದೆಂದೇ ಬರಿಗೈಯಲ್ಲಿ ಹೋಗಿದ್ದಾನೆ. ಇನ್ನೇನು ಹೊಸೂರಿಗೆ 3 ಕಿ.ಮೀ. ಇದೆ ಎನ್ನುವಾಗಲೇ ತಮಿಳುನಾಡಿನ ಅರಸನಹಟ್ಟಿ ಚೆಕ್‌ಪೋಸ್ಟ್ ಬರುತ್ತದೆ. ಅದನ್ನು ದಾಟಿ ಆ ಕಾಳರಾತ್ರಿಯಲ್ಲಿ ಒಬ್ಬನೇ ಇನ್ನೋವಾ


ಕವಳ ಕೊಲೆಯಾಗಿರುವ ಭೀಕರ ದೃಶ್ಯ

ಸೈಕಲ್ ರವಿಗೆ ಬಳಕೆಯಾಗಿದ್ದು ವಿನಯ್ ಆಳ್ವನ ಪಡೆಯೆ?

ಕವಳನ ಹತ್ಯೆಯ ಹಿನ್ನೆಲೆಯಲ್ಲಿ ಮುಖ್ಯವಾಗಿ ಕೇಳಿಬರುವುದು ತಿರುಕುಮಾರ್ ಉರ್ಫ್ ಕುಟ್ಟಿಯ ಹೆಸರಾದರೂ ಆತ ತನ್ನ ಸ್ವಂತ ಸಾಮರ್ಥ್ಯದಿಂದ ಇಷ್ಟೊಂದು ವ್ಯವಸ್ಥಿತ ಸ್ಕೆಚ್ ಕಾರ್ಯಗತಗೊಳಿಸಲಾರ ಎಂದೇ ಭೂಗತಲೋಕ ಲೆಕ್ಕ ಹಾಕುತ್ತಿದೆ.

ಏಕೆಂದರೆ ಕುಟ್ಟಿ ಹಿಂದಿನಂತೆ ಆರ್ಥಿಕವಾಗಿ ಬಲಾಢ್ಯನಲ್ಲ, ಸಹೋದರ ರಾಜ ಆಲಿಯಾಸ್ ತಿರುಮಾರನ್ ದುಡ್ಡು ಕಾಸಿನಲ್ಲಿ ಜೋರಾಗಿದ್ದಾನೆ. ಆದರೆ ಆತ ಕುಟ್ಟಿ ಜೊತೆ ಕೈಜೋಡಿಸುವುದಿಲ್ಲ, ಯಾವತ್ತೂ ಕನಿಷ್ಠ ನೂರು ಮಂದಿ ಹುಡುಗರನ್ನು ಜೊತೆ ಹಾಕಿಕೊಂಡೇ ಓಡಾಡುತ್ತಿದ್ದ ಕವಳನನ್ನು ಸುಲಭಕ್ಕೆ ಮುಟ್ಟುವುದು ಕಷ್ಟ ಎಂಬುದು ಖುದ್ದು ಕುಟ್ಟಿಗೆ ಗೊತ್ತಿತ್ತು. ಹೀಗಾಗಿ ಕುಟ್ಟಿಗೆ ತನಗಿಂತ ಬಲಾಢ್ಯ ಮತ್ತು ನಿಷ್ಣಾತ ಹಂತಕನೊಬ್ಬನ ಅನಿವಾರ್ಯತೆಯಿತ್ತು, ಆದಕ್ಕೆ ಜೊತೆಯಾದವನು ಸೈಕಲ್ ರವಿ?



ಬೆಂಗಳೂರು ಪಾಪಕೂಪದ ಅನುಭವಿ ಮತ್ತು ಪಳಗಿದ ಕೈಗಳ ಪೈಕಿ ಕವಳನೂ ಒಬ್ಬ. ಒಂದು ಹಂತದವರೆಗೆ ದೀಡಿ ರವಿ ಜೊತೆ ಗುರುತಿಸಿಕೊಂಡಿದ್ದರಿಂದ ಆತನನ್ನು ನ್ಯೂಟ್ರಲ್ ಎಂದೇ ಪರಿಗಣಿಸಲಾಗಿತ್ತು. ಸದ್ಯ ಕೊರಂಗು ಮತ್ತು ಸುನೀಲರದ್ದೇ ಒಂದು ತಂಡವಾದರೆ ಮುಲಾಮ, ಸೈಕಲ್ ರವಿ, ಕಡಬಗೆರೆಗಳದ್ದು ಎದುರಾಳಿ ತಂಡ. ಜೈಲಿನಲ್ಲಿದ್ದಾಗ ಕವಳ ಸುನೀಲನ ಗ್ಯಾಂಗ್ ಜೊತೆ ಗುರುತಿಸಿಕೊಂಡ. ದಿನ ಬೆಳಗ್ಗೆಯಾದರೆ ಸುನೀಲ, ಮಾರ್ಕೆಟ್ ವೇಡಿ, ಕವಳ ಮುಂತಾದವರೆಲ್ಲ ಸೇರಿಕೊಂಡು ಜೈಲು ಆವರಣದಲ್ಲೇ ಶಟಲ್‌ಕಾಕ್ ಆಡುತ್ತಿದ್ದದ್ದು ಸೈಕಲ್ ರವಿಗೆ ಹೇಗಾಗಿರಬೇಡ?

ಇದನ್ನು ಸೂಕ್ಷ್ಮವಾಗೇ ಗಮನಿಸಿದ ಕುಟ್ಟಿ ರಾಜ ತನ್ನ ಕೈಲಾಗದ್ದನ್ನು ಮುಗಿಸಿ ಕೊಡುವಂತೆ ಸೈಕಲ್ ರವಿಗೆ ಸುಪಾರಿ ಕೊಟ್ಟಿರಬೇಕು. ಏಕೆಂದರೆ ಈ ಥರದ ಹೈಟೆಕ್ ಮರ್ಡರ್ ಚಾಕಚಕ್ಯತೆಯಿರುವುದು ಆತನೊಬ್ಬನಿಗೆ. ಆದಕ್ಕೆ ಮಲೆಯಾಳಿ ಪ್ರವೀಣ ಕೈಜೋಡಿಸಿದ್ದಾನೆಂಬುದು ಪೊಲೀಸರ ವಾದ. ಕವಳ ಇತ್ತೀಚೆಗೆ ದೀಡಿ ರವಿ ವಿರುದ್ಧವೇ ಉಲ್ಟಾ ಹೊಡೆದಿದ್ದ. ದೀಡಿ ರವಿಯಿಂದ ಕವಳ ದೂರಾಗಿದ್ದನ್ನು ಲೆಕ್ಕ ಹಾಕಿಯೇ ಕವಳನ ಹಳೇ ದುಷ್ಮನ್ ಮಲೆಯಾಳಿ ಪ್ರವೀಣ ಮತ್ತು ಆತನ ತಮ್ಮ ರಜನಿ- ದೀಡಿ ರವಿಗೆ ಹತ್ತಿರವಾಗಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಕವಳನ ವಿರುದ್ಧ ಕುದಿಯುತ್ತಿದ್ದದ್ದು ವಿನಯ್ ಆಳ್ವನ ಬೆಂಬಲಿಗರ ಪಡೆ. ಕುಟ್ಟಿರಾಜನ ಗೆಳೆತನಕ್ಕೆ ಕಟ್ಟು ಬಿದ್ದು ಕವಳನನ್ನೇ ಮುಗಿಸಲು ಅಟಕಾಯಿಸಿದ್ದ ವಿನಯ್ ಆಳ್ವನಂಥ ದುಡುಕಿನ ಹುಂಬ ಬಾಲಕನನ್ನು ಕವಳ ನಿರಾಯಾಸವಾಗೇ ನಿಕಾಲಿ ಮಾಡಿಸಿಬಿಟ್ಟ. ಕೊಲೆಯಾದ ವಿನಯ್ ಆಳ್ವ ಗೆಳೆಯರೆಂದರೆ ಪ್ರಾಣಕ್ಕೆ ಪ್ರಾಣದಂತಿದ್ದವನು. ಅಂಥಾ ಗೆಳೆಯರ ಪೈಕಿ ಆಂಟು ಎಂಬ ಎಳೆ ಕಿಲಾಡಿಯೂ ಕವಳನ ರಕ್ತಕ್ಕಾಗಿ ಕುದಿಯುತ್ತಿದ್ದ. ಸೈಕಲ್ ರವಿ ಇಂಥ ಹುಡುಗರ ಕೈಯಿಂದಲೇ ಕವಳನನ್ನು ಮುಗಿಸಿದನೆ?





ಓಡಿಸಿಕೊಂಡು ಇನ್ನೇನು ಹೊಸೂರು ಸಮೀಪಿಸಬೇಕು. ಅಷ್ಟರಲ್ಲೇ ವೇಗವಾಗಿ ಬಂದ ಲಾರಿಯೊಂದು ಗುದ್ದಿದಂತಾಗಿದೆ. ಹಿಂತಿರುಗಿ ನೋಡುತ್ತಾನೆ ಒಂದಲ್ಲ ಎರಡಲ್ಲ, ಐದು ಬೈಕುಗಳಲ್ಲಿ ಕಿರಾತಕರೇ ಹಿಂಬಾಲಿಸುತ್ತಿದ್ದ ದೃಶ್ಯ...

ಅಲ್ಲಿಗೆ ಸಾವು ಎದುರೇ ಬಂದು ನಿಂತಿದೆಯೆಂಬುದು ಕವಳನಿಗೆ ಅರಿವಾಗಿತ್ತು. ಕಾರಿನ ವೇಗ ಹೆಚ್ಚಿಸಿದ್ದಾನೆ. ಆದರೆ ಮುಂದೊಂದು ಲಾರಿ ಅಡ್ಡಡ್ಡ ತಡೆಯೊಡ್ಡಿತ್ತು. ನಿಲ್ಲುವಂತಿಲ್ಲ, ವೇಗ ಹೆಚ್ಚಿಸುವಂತಿಲ್ಲ. ಹಿಂಬಾಲಿಸಿ ಬಂದ ಬೈಕುಗಳಲ್ಲಿ ಹಿಂಬದಿಗೆ ಕೂತಿದ್ದವರ ಕೈಯಲ್ಲಿ ಲಾಂಗು ರಾಡುಗಳಿದ್ದವು. ಬಂದುಬಂದಿದ್ದೇ ಇನ್ನೋವಾದ ಗಾಜು ಪುಡಿಗೈದರು. ಯಾರೋ ಒಬ್ಬ ಡ್ರೈವಿಂಗ್ ಸೀಟಿನ ಪಕ್ಕ ಬಂದಿದ್ದೇ ಡಬ್ಬಿಯೊಂದರಿಂದ ಕಾರದ ಪುಡಿ ತೆಗೆದದ್ದೇ ಎರಚಿ ಬಿಟ್ಟ.

ಇನ್ನೇನು ಕಾರದ ಪುಡಿಗೆ ಕಣ್ಣೊಡ್ಡಬಾರದೆಂದು ಇನ್ನೋವಾಗೆ ಬ್ರೇಕ್ ಹಾಕಿ ರಸ್ತೆ ಬದಿಗೆ ಅದನ್ನು ನಿಲ್ಲಿಸಿದ್ದೇ ಕಾರಿನಿಂದಿಳಿದು ಓಡಲಾರಂಭಿಸಿದ. ಮತ್ತೊಂದು ಬೈಕು ಆಕಾಪಕಿ ನುಗ್ಗಿ ಬಂತು. ಅದರ ಹಿಂಬದಿ ಕೂತಿದ್ದವನೊಬ್ಬ ತೆಗೆದದ್ದೇ ಕಣ್ಣಿಗೆ ಕಾರದ ಪುಡಿ ಎರಚಿಬಿಟ್ಟ. ಕಣ್ಣು ಉಜ್ಜಿಕೊಳ್ಳುತ್ತಲೇ ಆ ಕತ್ತಲಲ್ಲಿ ರಸ್ತೆಗುಂಟ ತಮಿಳಿನಲ್ಲಿ ಏನೇನೋ ಬೊಬ್ಬೆ ಹಾಕುತ್ತ ಕವಳ ಓಡುತ್ತಿದ್ದ. ನುಗ್ಗಿ ಬಂದ ಬೈಕುಗಳಿಂದ ಇಳಿದ ಒಬ್ಬೊಬ್ಬರೇ ಕಿರಾತಕರು ಆತನನ್ನು ಅಟ್ಟಾಡಿಸಿ ಕತ್ತರಿಸುತ್ತಿದ್ದರು. ಏಳೆಂಟು ಮಂದಿ ರಾಡು, ಲಾಂಗು, ಮಚ್ಚುಗಳಲ್ಲಿ ಆತನ ಮುಖ ಮತ್ತು ತಲೆಯನ್ನೇ ಗುರಿಯಾಗಿಸಿ ಬಲವಾಗಿ ಬ್ಯಾಟು ಬೀಸುತ್ತಿದ್ದರೆ, ಕವಳ ವಿಕಾರವಾಗಿ ಕಿರುಚುತ್ತ, ರಕ್ತ ಸುರಿಸುತ್ತ ಲಾಂಗ್ ಏಟು ತಿನ್ನುತ್ತಲೇ ನೆಲಕ್ಕೊರಗಿದ್ದ.

ಬೊಬ್ಬೆ ಹಾಕುತ್ತಿದ್ದ ಜನಜಂಗುಳಿ

ಹೆಚ್ಚು ಹೊತ್ತೇನಲ್ಲ, ದಾಳಿ ನಡೆದ ಹತ್ತೇ ನಿಮಿಷಕ್ಕೆ ಕವಳ ಹೆಣವಾಗಿದ್ದ. ಅನತಿ ದೂರದಲ್ಲಿದ್ದ ಆತನ ಇನ್ನೋವಾ ಕಾರು ಅನಾಥವಾಗಿ ಒಡೆದ ಗಾಜುಗಳ ರಾಶಿಯಂತಿತ್ತು. ನಡುರಸ್ತೆಯಲ್ಲೇ ಹೆಣವಾಗಿ ಹೋಗಿದ್ದ ಭಯಾನಕ ರೌಡಿ ಕವಳ!

2014 ಜೂನ್ 23ರ ಸೋಮವಾರ ರಾತ್ರಿ ಹತ್ತೂ ಮುಕ್ಕಾಲರ ಹೊತ್ತಿಗೆ ಕವಳ ಅಲಿಯಾಸ್ ವಿಜಯ್‌ಕುಮಾರ್ ಎಂಬ ನಲವತ್ತೆರಡರ ವಯಸ್ಸಿನ, ಐದಕ್ಕೂ ಅಧಿಕ ಕೊಲೆಗಳನ್ನೆಸಗಿದ್ದ, ಪೊಲೀಸ್ ದಾಖಲೆಗಳ ಪ್ರಕಾರವೇ ಬರೋಬ್ಬರಿ 32 ಕ್ರಿಮಿನಲ್ ಕೇಸುಗಳಲ್ಲಿ ಭಾಗಿಯಾಗಿದ್ದ ಕವಳ ಹೆಣವಾಗಿದ್ದ. ತಮಿಳುನಾಡಿನ ಸಿಪ್‌ಕಾಟ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶಂಕರ್ ಸ್ಥಳಕ್ಕೆ ಬರುವ ಹೊತ್ತಿಗೆ ಇದ್ದದ್ದು ಕವಳನ ರಕ್ತಸಿಕ್ತ ಶವ ಮತ್ತು ಸುತ್ತ ನಿಂತು ಬೊಬ್ಬೆ ಹಾಕುತ್ತಿದ್ದ ಜನಜಂಗುಳಿ.

ಕಳೆದ ಮೂರ್ನಾಲ್ಕು ವರ್ಷಗಳಿಂದ ಬೆಂಗಳೂರು ಭೂಗತ ಕೂಪದಲ್ಲಿ ವಿಪರೀತ ಸದ್ದು ಮಾಡುತ್ತಿದ್ದದ್ದು ನಟೋರಿಯಸ್ ಕುಟ್ಟಿ ರಾಜಾ ಗ್ಯಾಂಗ್ ವಿರುದ್ಧದ ಕವಳನ ಅಟ್ಯಾಕುಗಳೆ. ಕುಟ್ಟಿ-ಕವಳರ ಭೀಕರ ಗ್ಯಾಂಗ್‌ವಾರ್‌ಗೆ ಸಾಲುಸಾಲು ಹೆಣ ಬಿದ್ದವು. ಕವಳನ ಮನೆಗೇ ನುಗ್ಗಿದ್ದ ಕುಟ್ಟಿ ರಾಜರ ಬಂಟ ವಿನಯ್ ಆಳ್ವ ಇನ್ನೇನು ಕವಳನನ್ನು ತೆಗೆದೇ ಬಿಟ್ಟ ಎನ್ನುವಾಗಲೇ ಹುಷಾರಾದ ಕವಳ ವಿನಯ್ ಆಳ್ವನ ಹೆಣ ಬೀಳಿಸಿದ್ದ. ಅದಕ್ಕೆ ಪ್ರತೀಕಾರವಾಗಿ ಕುಟ್ಟಿ ರಾಜಾ ಉತ್ತರಹಳ್ಳಿಯಲ್ಲಿ ಕವಳನನ್ನು ಮುಗಿಸ ಹೊರಟರೆ ಕುಟ್ಟಿ ರಾಜಾ ಪಟಾಲಮ್ಮೇ ಪೊಲೀಸರ ಪಾಲಾಯಿತು. ಆ ನಂತರ ಶಿವಾಜಿನಗರದಲ್ಲಿ ಕವಳನಿಗಾಗಿ ಹೊಂಚಿ ಕೂತಿದ್ದ ಮತ್ತೊಂದು ಹಂತಕ ಪಡೆಯೂ ಸಿಕ್ಕಿಬಿತ್ತು.

ಈ ಮಧ್ಯೆ ಕವಳನೇ ತಲೆ ಓಡಿಸಿದ. ಬೆಂಗಳೂರಿನ ಕೋರ್ಟಿಗೆ ಬಂದಿದ್ದ ಕುಟ್ಟಿಯನ್ನು ಚಿತ್ರದುರ್ಗ ಜೈಲು ಮಾರ್ಗಮಧ್ಯದಲ್ಲೇ ಹೋಟೆಲೊಂದರ ಮೇಲೆ ದಾಳಿ ನಡೆಸಿದ ಕವಳನ ಪಡೆ ಹೀನಾಯ ಕತ್ತರಿಸಿ ಹಾಕಿತು. ಆಚಾನಕ್ಕಾಗಿ ಬದುಕುಳಿದ ಕುಟ್ಟಿಗೆ ಕೈಯೇ ಕತ್ತರಿಸಿ ಐಬಾಯಿತು. ಕವಳನ ಬಂಟರು ಹಾರಿಸಿದ ಗುಂಡು ಕುಟ್ಟಿಯ ಕುತ್ತಿಗೆಯೊಳಕ್ಕೇ ಉಳಿದು ತಿಂಗಳಾನುಗಟ್ಟಲೇ ಆತ ಆಸ್ಪತ್ರೆಯಲ್ಲಿ ನರಳುವಂತಾಯ್ತು. ಸುದೀರ್ಘ ಚಿಕಿತ್ಸೆಯ ನಂತರ ಕುಟ್ಟಿ ಚೇತರಿಸಿಕೊಂಡ. ಆದರೆ ಕವಳ ಬಲಾಢ್ಯನಾಗಿ ಬೆಳೆದು ನಿಂತಿದ್ದ.

200 ಕೋಟಿ!

ಒಂದಾನೊಂದು ಕಾಲಕ್ಕೆ ಕುಟ್ಟಿ ರಾಜಾ ಗ್ಯಾಂಗಿನಲ್ಲಿ ಕೆಲಸದ ಹುಡುಗನಂತಿದ್ದವನು ಕವಳ. ಗಾರ್ಡನ್ ಮಣಿ ಕೊಲೆ ಕೇಸಿನಲ್ಲಿ ರಾಜಾ ಕುಟ್ಟಿ ಜೈಲಿನಲ್ಲಿದ್ದಾಗ ಕವಳ


ಕವಳ ಪ್ರಯಾಣಿಸುತ್ತಿದ್ದ ಇನ್ನೋವಾ ಕಾರು

ಅವರಿಗೆ ಸೇವಕನಂತಿದ್ದ. ಬರುಬರುತ್ತ ಕವಳನ ಆರ್ಭಟವೇ ಹೆಚ್ಚಾಯಿತು. ಡೆಡ್ಲಿ ಸೋಮನ ಪಡೆಯಲ್ಲಿ ಸಕ್ರಿಯನಾದ. ಸೋಮನ ಎನ್‌ಕೌಂಟರ್ ಆದನಂತರ ದೀಡಿ ರವಿಯ ಜೊತೆ ಬಿದ್ದ. ದೀಡಿ ರವಿ ಜೊತೆ ಮಲೆಯಾಳಿ ಪ್ರವೀಣ, ಕವಳ, ಅರಸಯ್ಯ, ಪ್ರವೀಣನ ತಮ್ಮ ರಜನಿ, ವಿವೇಕ್‌ನಗರದ ಜಾನ್ಸನ್; ಹೀಗೆ ಅರ್ಧ ಡಜನ್ ರೌಡಿಗಳ ಹಿಂಡೇ ಇತ್ತು. ಕವಳ ಪ್ರಾರಂಭದಲ್ಲಿ ದೀಡಿ ರವಿಗೆ ಕಾರಿನ ಡ್ರೈವರ್‌ನಂತಿದ್ದ. ದೀಡಿ ರವಿಯ ನಕಲಿ ದೀಡಿ ಗೋಲ್‌ಮಾಲ್‌ನ ದೊಡ್ಡ ಮೊತ್ತವನ್ನೇ ಲಪಟಾಯಿಸಿದ್ದ.

ಕವಳನನ್ನು ಗಾಡ್‌ಫಾದರ್‌ನಂತೆ ಕಾಪಾಡಿದ್ದು ಭೈರಸಂದ್ರದ ಹಾಲೀ ಕೌನ್ಸಿಲರ್ ಜಿಎನ್‌ಆರ್ ಬಾಬು. ವಿಲ್ಸನ್ ಗಾರ್ಡನ್ ಜೋಡಿ ಕೊಲೆ, ದೀಪಕ್‌ಸಿಂಗ್ ಮರ್ಡರ್... ಹೀಗೆ ಐದು ಕೊಲೆ ಸೇರಿದಂತೆ ಒಟ್ಟು 32 ಪ್ರಕರಣದಲ್ಲಿ ಪೊಲೀಸರಿಗೆ ಬೇಕಾದ ಕವಳ ಹೆಚ್ಚೂ ಕಮ್ಮಿ ಬೆಂಗಳೂರಿನ ಒಂದು ಭಾಗವನ್ನೇ ತನ್ನ ಪಾಳಯ ಪಟ್ಟಾಗಿ ಮಾಡಿಕೊಂಡಿದ್ದ. ಇತ್ತ ಕಲಾಸಿಪಾಳ್ಯದಿಂದ ಶುರುವಾಗಿ ಲಕ್ಕಸಂದ್ರ, ವಿಲ್ಸನ್ ಗಾರ್ಡನ್, ಹೊಸೂರು ರಸ್ತೆ ಮಡಿವಾಳ, ಮಂಗಮ್ಮನ ಪಾಳ್ಯ, ಎಲೆಕ್ಟ್ರಾನಿಕ್ ಸಿಟಿ, ಪರಪ್ಪನ ಅಗ್ರಹಾರ, ಸರ್ಜಾಪುರ, ಹೊಸೂರಿನ ತನಕ ತನ್ನ ಸಾಮ್ರಾಜ್ಯ ವಿಸ್ತರಿಸಿದ ಕವಳ ಇತರೇ ರೌಡಿಗಳಿಗೆ ಹೋಲಿಸಿದರೆ ಚಾಲಾಕಿ ಮತ್ತು ರಕ್ತಪಿಪಾಸು. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದೇ ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ ಆಸರೆಗೆ ಜಿಗಿದಿದ್ದ.

ಸತೀಶ್ ರೆಡ್ಡಿಯನ್ನು ಮುಂದಿಟ್ಟುಕೊಂಡೇ ಅನಾಹುತಕಾರಿ ಕೊಲೆಗಳನ್ನು ಮಾಡಿಸಿದ. ಸತೀಶ್ ರೆಡ್ಡಿಯ ಸಂಬಂಧಿ ನಾಗೇಂದ್ರ ರೆಡ್ಡಿ ಎಂಬ ಲ್ಯಾಂಡ್ ಡೀಲರ್‌ನಿಂದ ಸುಪಾರಿ ಪಡೆದು ಯಡಿಯೂರಿನ ಶಾಂತಕುಮಾರ್ ಎಂಬ ಜಮೀನುದಾರರನ್ನು ಆನೇಕಲ್ ಕೋರ್ಟ್ ಆವರಣದಲ್ಲೇ ಕೊಲ್ಲಿಸಿದ್ದ.

ರಿಯಲ್ ಎಸ್ಟೇಟ್

ಹಾಗೇ ಶಾಂತಕುಮಾರ್ ಹತ್ಯೆಯಿಂದ ಆವರಿಗೆ ಸೇರಿದ 200 ಕೋಟಿಯ ಸೊತ್ತು ನೆಲಕಂಟಕರ ಪಾಲಾಗಿ ಈ ಪೈಕಿ ಅರ್ಧಕ್ಕರ್ಧ ಶಾಸಕ ಸತೀಶ್ ರೆಡ್ಡಿ ಮತ್ತು ಕವಳ ಹಂಚಿಕೊಂಡರು. ಬಿಜೆಪಿ ಸರ್ಕಾರ ಮತ್ತು ಶಾಸಕ ಸತೀಶ್ ರೆಡ್ಡಿಯನ್ನು ಮುಂದಿಟ್ಟುಕೊಂಡೇ ಇಂಥ ಹಲವಾರು ಲ್ಯಾಂಡ್ ಸಂಬಂಧಿ ಹತ್ಯೆಗಳನ್ನು ಮಾಡಿದ ಕವಳ ಮಡಿವಾಳದಲ್ಲೊಂದು ಭರ್ಜರಿ ಅಪಾರ್ಟ್‌ಮೆಂಟ್ ಕಟ್ಟಿಸಿದ. ಹೆಚ್‌ಎಸ್‌ಆರ್ ಲೇಔಟಿನಲ್ಲಿ ಮತ್ತೊಂದು ಅಪಾರ್ಟ್‌ಮೆಂಟ್ ಎಬ್ಬಿಸಿದ. ಇವುಗಳ ಬಾಡಿಗೆಯೇ ತಿಂಗಳಿಗೆ ಎಂಟು ಲಕ್ಷ ಮೀರುತ್ತಿತ್ತು. ಬಂದ ಲಾಭದಲ್ಲಿ ಬೇಕಾಬಿಟ್ಟಿ ಸೈಟು ಖರೀದಿಸಿದ. ಕೇರಳದಲ್ಲಿ ಹಿನ್ನೀರು ಟೂರಿಸಂನಲ್ಲಿ ಲಾಭದಾಯಕ ದಂಧೆಯಾದ ಖಾಸಗಿ ಬೋಟುಗಳ ಉದ್ದಿಮೆ ಆರಂಭಿಸಿದ.

ಇಂಥ ಹತ್ತಕ್ಕೂ ಅಧಿಕ ಖಾಸಗಿ ಬೋಟುಗಳ ಬಾಡಿಗೆ ದುಡ್ಡೇ ಕವಳನ ಪಾಲಿಗೆ ದೊಡ್ಡ ನಿಧಿಯಂತಿತ್ತು. ಇಷ್ಟೆಲ್ಲ ಆಸ್ತಿ ಅಂತಸ್ತು ಗಳಿಸಿದ ನಂತರವಾದರೂ ಕವಳ ತನ್ನ ರೌಡಿ ಚಾಲು ಬಿಟ್ಟಿದ್ದರೆ ಬದುಕಿರುತ್ತಿದ್ದನೇನೊ. ಹೆಚ್ಚೂ ಕಮ್ಮಿ 200 ಕೋಟಿಯಷ್ಟು ಆಸ್ತಿಯಿದ್ದೂ ದುರಾಸೆ ಬಿಡಲಿಲ್ಲ. ಏಕೆಂದರೆ ತಾನು ರೌಡಿಸಮ್ ಬಿಟ್ಟು ಬಿಜಿನೆಸ್‌ಮನ್ನೋ, ಕಂಟ್ರಾಕ್ಟರೋ ಆದೆನೆಂದರೆ ಚಿಕ್ಕನ ಕಣ್ಣು ರಾಜೇಂದ್ರ, ರಾಜಶೇಖರ, ಪಳನಿ, ಜಡೇಜಾ ರವಿ ಮುಂತಾದವರಂತೆ ತಾನೂ ಕೊಲೆಯಾಗಿ ಬಿಡುತ್ತೇನೆಂಬ ಭೀತಿ ಕವಳನಿಗಿತ್ತು.

ಸಾಲದ್ದಕ್ಕೆ ಕಲಾಸಿಪಾಳ್ಯರಿಂದ ಹೊಸೂರಿನ ತನಕದ ರಿಯಲ್ ಎಸ್ಟೇಟ್ ಸಾಮ್ರಾಜ್ಯ ತನ್ನ ಕೈತಪ್ಪಿ ಜೆಸಿಬಿ ನಾರಾಯಣನ ಕೈಸೇರಿತೆಂದರೆ ತನ್ನ ಪಾಲಿಗದು ಸರ್ವನಾಶವೆಂದೇ ಲೆಕ್ಕ ಹಾಕಿದ್ದ. ಸಣ್ಣಪುಟ್ಟ ಕಾರಣಗಳು ಕೂಡ ಮತ್ತೊಬ್ಬ ಹೊಸ ರೌಡಿಯ ಹುಟ್ಟಿಗೆ ಕಾರಣವಾಯಿತೆಂದರೆ ಎಲ್ಲಿ ತನಗೆ ಎದುರಾಳಿ ಸೃಷ್ಟಿಯಾಗುತ್ತಾನೋ ಎಂದು ತಾನೇ ಚಿಲ್ಲರೆ ಕ್ರೈಮು ನಡೆಸುತ್ತಿದ್ದ. ಇದರ ಫಲವೆಂಬಂತೆ ಪದೇ ಪದೇ ಜೈಲು ಕಂಡ. 2008ರ ಹೊತ್ತಿಗೆ ಇಂಥದ್ದೇ ಚಿಲ್ಲರೆ ಬಡಿದಾಟದಲ್ಲಿ ಜೈಲು ಕಂಡ ಕವಳನಿಗೆ ಅಲ್ಲಿ ವಿಚಿತ್ರ ಸನ್ನಿವೇಶವೊಂದು ಎದುರಾಯಿತು.

ಅದು ಗಾರ್ಡನ್ ಮಣಿಯ ಪುತ್ರ ಅಪ್ಪು ಅಲಿಯಾಸ್ ಸೂರ್ಯ ಮತ್ತು ಗಾರ್ಡನ್ ಮಣಿ ಹಂತಕರಾದ ರಾಜಾ ಕುಟ್ಟಿ ನಡುವೆ ನಡೆದ ಚಿಲ್ಲರೆ ಮಾರಾಮಾರಿ. ಈ ಚಿಲ್ಲರೆ ಜೈಲು ಫೈಟಿಂಗೇ ಕ್ರಮೇಣ ಇಡೀ ಬೆಂಗಳೂರು ಭೂಗತ ಲೋಕವನ್ನು ಕಲ್ಲೋಲಗೊಳಿಸಿ (ಬಾಕ್ಸ್ ನೋಡಿ) ಅಂತಿಮವಾಗಿ ಕವಳನ ಪ್ರಾಣಕ್ಕೇ ಎರವಾಯಿತೆ?

● ರಾ.ಸೋಮನಾಥ್



ಕವಳ ತನ್ನ ಸಹಚರರೊಂದಿಗೆ....

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಉತ್ತರ ಕನ್ನಡ: ವೃತ್ತಿ ರಾಜಕೀಯದ ನಡುವೆ ನಡುಕ!!

ಲೋಕಸಭೆ ಚುನಾವಣೆಯ ಫಲಿತಾಂಶ ಬಂದಿದ್ದೇ ಬಂದಿದ್ದು, ಉತ್ತರ ಕನ್ನಡದ ರಾಜಕೀಯ ಪಡಸಾಲೆಯ ಸೈಟುಗಳು ಏಕದಮ್ ಬದಲಾಗತೊಡಗಿದೆ. ಹೊರ ನೋಟಕ್ಕೆ ಆಷ್ಟೂ ಪಕ್ಷದ ಪುಢಾರಿಗಳ ಬದುಕುವ ಲೆಕ್ಕಾಚಾರ ಪಕ್ಕಾ ಆಗುತ್ತಿದ್ದಂತೆ ಭಾಸವಾದರೂ ಒಳಗೊಳಗೇ ರಸಾಯನ ಶಾಸ್ತ್ರದ ಸಮೀಕರಣಗಳೇ ಸಂಕೀರ್ಣವಾಗಿ ರಚನೆಯಾಗುತ್ತಿವೆ. ಬೇಗುದಿ ಎಂಬುದು ಸೋತ ಕಾಂಗ್ರೆಸ್ ಒಂದನ್ನೇ ಬಾಧಿಸುತ್ತಿಲ್ಲ; ಗೆದ್ದು ಗದ್ದಲ ಎಬ್ಬಿಸಿರುವ ಬಿಜೆಪಿ ಪಾರ್ಟಿಯಲ್ಲೂ ತೊಳಲಾಟ ಶುರುವಾಗಿದೆ. ತಳ ಒಡೆದ ಜನತಾದಳದಿಂದಲೂ ಬಚಾವಾಗಲು 'ಆಚೀಚೆ' ಹಾರಲು ಕಪ್ತಾನರೇ ಕಾತರಿಸುತ್ತಿದ್ದಾರೆ.

ಕಾಂಗ್ರೆಸ್‌ನಲ್ಲಿ ಪಾಳೆಗಾರಿಕೆ ಹಠಾವ್ರೋ!

ದಳಪತಿಯಾಗಿದ್ದ ಮಂತ್ರಿ ಆರ್.ವಿ. ದೇಶಪಾಂಡೆ ಕಾಂಗ್ರೆಸ್‌ಗೆ ವಲಸೆ ಬಂದಾಗ ಆರಂಭವಾಗಿದ್ದ ಫ್ಯೂಡಲ್ ಪಾಲಿಟಿಕ್ಸ್ ವಿರುದ್ಧ ಈಗ ಸಣ್ಣಗೆ ರಣ ರಹಳೆ ಮೊಳಗುತ್ತಿದೆ! ಮಾರ್ಗರೆಟ್ ಆಳ್ವ ಆಕ್ಟೀವ್ ಆಗಿದ್ದಷ್ಟು ದಿನ ದೇಶಪಾಂಡೆಗೆ ಒಂದು ಅಂಕುಶವಾದರೂ ಇತ್ತು. ಆಕೆ ಈತನ ಕಾಟ ತಡೆಯಲಾಗದೆ ವಾನಪ್ರಸ್ಥಾಶ್ರಮ (ರಾಜ ಭವನ) ಸೇರುತ್ತಿದ್ದಂತೆ ಉತ್ತರ ಕನ್ನಡ ಕಾಂಗ್ರೆಸ್‌ನಲ್ಲಿ ಏಕಚಕ್ರಾಧಿಪತ್ಯ ನೆಲೆ ನಿಂತುಬಿಟ್ಟಿತು! ದೇಶಪಾಂಡೆ ಸಾಹೇಬರು ಹೇಳಿದ್ದೇ ಅಂತಿಮ ವಾಣಿಯಾಯ್ತು. ಮೈಕ್ರೋಸ್ಕೋಪಿಕ್ ಮೈನಾರಿಟಿ ಕಮ್ಯುನಿಟಿಯಾದ ಕೊಂಕಣಿ ಪರಿವಾರದ ದೇಶಪಾಂಡೆ ಜಿಲ್ಲೆಯ ಬಹುಸಂಖ್ಯಾತ ದೀವರು-ಹೈಗರು-ಮೀನುಗಾರರು-ಮುಸ್ಲಿಮರನ್ನೆಲ್ಲ ಹೊಸಕಿ ಹಾಕಿ ಸ್ವಜನ-ಸ್ವಕುಟುಂಬ ಹಿತದ ರಾಜಕೀಯ ಮಾಡುತ್ತ ಸಾಗಿದರು.

ಸಿದ್ದು ಸರ್ಕಾರ ಬಂದ ತರುವಾಯವಂತೂ ಜಿಲ್ಲಾ ಕಾಂಗ್ರೆಸ್‌ನಲ್ಲಿ ಅಕ್ಷರಶಃ ಮಾರ್ಷಲ್ ಲಾ ಜಾರಿಯಾಗಿತ್ತು. ತಾಪಂ-ಜಿಪಂ-ಎಮ್ಮೆಲ್ಲೆ-ಎಮ್ಮೆಲ್ಸಿ-ಎಂಪಿ-ನಿಗಮ-ಮಂಡಳಿ... ಹೀಗೆ ಪ್ರತಿಯೊಂದು ಅಧಿಕಾರದ ಟಿಕೆಟ್ಟೂ ದೇಶಪಾಂಡೆಯ ಮನದಿಚ್ಛೆಯಂತೆಯೇ ಹಂಚುವಿಕೆ ಆಗತೊಡಗಿತು. ಬಿಜೆಪಿ ಮೇಲೆ ಬೇಸತ್ತು ಕಾಂಗ್ರೆಸ್ ಬೆಂಬಲಿಸಲಾರಂಭಿಸಿದ್ದ ಬಹುಸಂಖ್ಯಾತ ದೀವರು (ಈಡಿಗರು) ಮತ್ತು ಮುಸ್ಲಿಮ್-ಕ್ರಿಶ್ಚಿಯನ್ನರಿಗೆಲ್ಲ ಅನ್ಯಾಯ-ವಂಚನೆ ಮಾಡುತ್ತ ದೇಶಪಾಂಡೆ ತನ್ನ ದುಷ್ಟಕೂಟದ ಉದ್ಧಾರಕ್ಕೆ ನಿಂತುಬಿಟ್ಟರು. ಅರ್ಹ ಅಲ್ಪಸಂಖ್ಯಾತರಿಗೆ- ದೀವರಿಗೆ-ಬ್ರಾಹ್ಮಣರಿಗೆ ಮೋಸ ಮಾಡಿ ದೇಶಪಾಂಡೆ ದಂಡಪಿಂಡ ದಢೂತಿ ಎಲ್ವಿ ಶಾನಭಾಗ್ ನಂಥವನನ್ನು ದಾದಾಗಿರಿಯಿಂದ ಜಿಪಂ ಪೀಠದಲ್ಲಿ ಪ್ರತಿಷ್ಠಾಪಿಸಿದಾಗ ದೇಶಪಾಂಡೆ ವಿರುದ್ಧ ಎದ್ದಿದ್ದ ಅಸಮಾಧಾನದ ಕೂಗು ಪಾರ್ಲಿಮೆಂಟ್ ಎಲೆಕ್ಷನ್ ಟಿಕೆಟ್ ಸ್ವಂತ ಪುತ್ರ ಪೆದ್ದು ಪ್ರಶಾಂತನಿಗೆ ಕೊಡಿಸಿದಾಗ ಕಾಂಗ್ರೆಸ್ ವಿರುದ್ಧದ ಆಕ್ರೋಶವಾಗಿ ಪರಿವರ್ತನೆಯಾಯ್ತು!!

ದೇಶಪಾಂಡೆಯ ಅಹಂಕಾರ ಮುರಿಯಲು ಇದೇ ತಕ್ಕ ಸಮಯ ಎಂದುಕೊಂಡ ಎಲ್ಲ ಸಮುದಾಯದ ಕಾಂಗ್ರೆಸ್ ಮುಂದಾಳುಗಳು ಲೋಕಸಭೆ ಚುನಾವಣೆಯಲ್ಲಿ ಪ್ರಶಾಂತ್‌ಗೆ ಮಣ್ಣು ಮುಕ್ಕಿಸಲು ಪ್ಲಾನ್ ಹಾಕಿದರು. ಬಿಜೆಪಿ ಅಭ್ಯರ್ಥಿ ಅನಂತ್ಮಾಣಿ ಬಗ್ಗೆ ಇದ್ದ ಬೇಸರಕ್ಕಿಂತಲೂ ದೇಶಪಾಂಡೆ ಬಗೆಗಿನ ಸಿಟ್ಟೇ ದೊಡ್ಡ ಬೆಂಕಿಯಾಗಿ ಕಾಂಗ್ರೆಸ್‌ನ್ನು ಸುಟ್ಟು ಬೂದಿ ಮಾಡಿತು. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಮತ್ತು ಆ ಬಳಿಕದ ತಾಪಂ-ಜಿಪಂ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಯಲ್ಲೂ ದೇಶಪಾಂಡೆ ಬಹುಸಂಖ್ಯಾತರ ಅಭಿಪ್ರಾಯಕ್ಕೆ- ಬೇಡಿಕೆಗೆ ಮನ್ನಣೆ ನೀಡಲೇ ಇಲ್ಲ. ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಮಗ 1.40 ಲಕ್ಷದಷ್ಟು ಭರ್ಜರಿ ಅಂತರದಲ್ಲಿ ನೆಗೆದುಬಿದ್ದರೂ ಪಾಠ ಕಲಿಯಲಿಲ್ಲ!

ಈ ತಿಂಗಳು ನಡೆದ ಜಿಪಂ ಅಧ್ಯಕ್ಷ-ಉಪಾಧ್ಯಕ್ಷ ಆಯ್ಕೆ ಹೊತ್ತಲ್ಲೂ ದೇಶಪಾಂಡೆ ಸರ್ವಾಧಿಕಾರಿಯಂತೆಯೇ ನಡೆದುಕೊಂಡರು. ಇಡೀ ಜಿಲ್ಲೆಯಲ್ಲಿ ದೀವರು ತನ್ನಿಂದಾಗಿ ಕಾಂಗ್ರೆಸ್ ವಿರುದ್ಧ ತಿರುಗಿಬಿದ್ದಿದ್ದಾರೆಂಬ ವಾಸ್ತವ ಆತ ಅರಿಯದೇ ಹೋದರು. ಬ್ರಾಹ್ಮಣರಂತೂ ಎಂದಿಗೂ ಕಾಂಗ್ರೆಸ್ ಬೆಂಬಲಿಸಲು ಸಾಧ್ಯವೇ ಇಲ್ಲ. ಇಂಥ ಪಾರಂಪರಿಕ ರಾಜಕೀಯ ಲೆಕ್ಕಾಚಾರ ಅರ್ಥಮಾಡಿಕೊಳ್ಳದ ದೇಶಪಾಂಡೆ ಅತ್ತ ದೀವರನ್ನೂ ಒಲಿಸಿಕೊಳ್ಳುವ ಸಲಹೆ-ಸೂಚನೆ ಹೈಕಮಾಂಡ್‌ನಲ್ಲಿರುವ ಬಿ.ಕೆ. ಹರಿಪ್ರಸಾದ್‌ರಂಥವರು ಹೇಳಿದರೂ ಕೇಳಲಿಲ್ಲ. ಬಿಜೆಪಿ ಬೆಂಬಲಿಗರಾದ ಬ್ರಾಹ್ಮಣರೊಂದಿಗೆ ದೇಶಪಾಂಡೆ ಮೇಲೆ ಮುನಿದಿದ್ದ ದೀವರು ಸೇರಿಕೊಂಡಿದ್ದೇ ಈ ಬಾರಿಯ ಪಾರ್ಲಿಮೆಂಟ್ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರಶಾಂತ ದೇಶಪಾಂಡೆ ಅವಮಾನಕರ ಸೋಲು ಕಾಣಲು ಕಾರಣವಾಗಿತ್ತು! ಈ ಲೋಪ-ದೋಷ ಸರಿಪಡಿಸಿಕೊಳ್ಳಲು ದೇಶಪಾಂಡೆಗೆ ಜಿಪಂ ಗದ್ದುಗೆ ಕೊಡಿಸುವ ಅವಕಾಶ ಸಿಕ್ಕಿತ್ತು.

ಆದರೆ ಆಗಲೂ 'ದೋಷ ಪಾಂಡೆ' ಬುದ್ಧಿಪೂರ್ವಕವಾಗೇ ಎಡವಿದರು. ಅಧ್ಯಕ್ಷ ಸ್ಥಾನ ಬುಡಕಟ್ಟು ಸಮುದಾಯದ ಹಾಲಕ್ಕಿ ಒಕ್ಕಲಿಗರ ಸರಸ್ವತಿ ಗೌಡರಿಗೆ ನೀಡಲಾಗಿತ್ತು. ಈ ಬಗ್ಗೆ ಯಾರೂ ಆಕ್ಷೇಪ ಎತ್ತಲಿಲ್ಲ. ಉಪಾಧ್ಯಕ್ಷ ಸ್ಥಾನಕ್ಕೆ ತನ್ನ ಕ್ಷೇತ್ರದ (ಜೋಯಿಡಾ) ಮಹಿಳೆಗೆ ಪ್ರಾಶಸ್ತ್ಯ ಕೊಟ್ಟದ್ದು ಬಹುಸಂಖ್ಯಾತ ದೀವರನ್ನಷ್ಟೇ ಅಲ್ಲ ದೇಶಪಾಂಡೆಯ ಲಾಗಾಯ್ತಿನ ದಮನ ರಾಜಕೀಯದ ಬಲಿಪಶುಗಳಾಗಿದ್ದ ಕ್ರಿಶ್ಚಿಯನ್-ಮುಸ್ಲಿಮ್-ಮೀನುಗಾರ... ಮುಂತಾದ ಜಾತಿಯ ಜನರಲ್ಲಿ ಅಸಮಾಧಾನ ಮೂಡಿಸಿತು. ಈ ಬಾರಿ ಉಪಾಧ್ಯಕ್ಷ ಸ್ಥಾನವಾದರೂ ದೀವರಿಗೆ ದೇಶಪಾಂಡೆ ಸಿಗುವಂತೆ ತಂತ್ರಗಾರಿಕೆ ಮಾಡಿದ್ದರೆ ಆ ಜಾತಿಯವರಿಗೆ ಕಾಂಗ್ರೆಸ್ ಮೇಲಿದ್ದ ಅಪನಂಬಿಕೆ ಕೊಂಚವಾದರೂ ಕಡಿಮೆ ಆಗುತ್ತಿತ್ತು. ಜನಸಾಮಾನ್ಯರ ನಾಡಿಮಿಡಿತ ಅರಿಯದ ಪಕ್ಕಾ ವ್ಯಾಪಾರಿ ರಾಜಕಾರಣ ವೃತ್ತಿಯ ದೇಶಪಾಂಡೆಗದು ಹೊಳೆಯಲೇ ಇಲ್ಲ!

ದೇಶಪಾಂಡೆ ತನ್ನ ಕುಟುಂಬ ಅಥವಾ ಸಮಾಜದಲ್ಲಿ ಒಳ್ಳೆಯ ಹೆಸರಿಲ್ಲದ ತನ್ನ ಹರಾಮಿ ಹಿಂಬಾಲಕರ ಬಿಟ್ಟರೆ ಮತ್ತ್ಯಾರಿಗೂ ಮೇಲೇರಲು ಬಿಡಲಾರನೆಂಬುದು ಮೊನ್ನೆಯ ಪಾರ್ಲಿಮೆಂಟ್ ಎಲೆಕ್ಷನ್ ಮತ್ತು ಆ ನಂತರ ಜಿಪಂ ಗದ್ದುಗೆ ಆರೋಹಣ ಪ್ರಹಸನದಿಂದ ಕಾಂಗ್ರೆಸ್‌ಗರಿಗಷ್ಟೇ ಅಲ್ಲ, ಇಡೀ ಜಿಲ್ಲೆಯ ಸಕಲ ಜಾತಿ-ಜನಾಂಗದವರಿಗೂ ಖಾತ್ರಿಯಾಗಿ ಹೋಗಿದೆ. ಕಾಂಗ್ರೆಸ್‌ನಲ್ಲಿ ಬೇಗುದಿ ಶುರುವಾಗಿದೆ. ದೇಶಪಾಂಡೆ ಹಠಾವ್ರೋ ಆಂದೋಲನ ರಹಸ್ಯವಾಗಿ ರೂಪುಗೊಳ್ಳುತ್ತಿವೆ. ಸದ್ಯವೇ ಮತ್ತೆ 'ಸಕ್ರಿಯ' ರಾಜಕಾರಣಿಯಾಗಲಿರುವ ರಾಜಸ್ಥಾನದ ರಾಜ್ಯಪಾಲೆ ಮ್ಯಾಗಿಯಜ್ಜಿ ಮತ್ತು ಎಐಸಿಸಿ ಪ್ರಧಾನಕಾರ್ಯದರ್ಶಿ ಹರಿಪ್ರಸಾದ್‌ರಂಥವರ ಪ್ರೋತ್ಸಾಹವೂ ಈ ಬಂಡಾಯಕ್ಕೆ ಸಿಗುತ್ತಿವೆ. ಭಟ್ಕಳದ ಪಕ್ಷೇತರ ಶಾಸಕ ಮಂಡಾಳು ವೈದ್ಯ ಒಬ್ಬನ ಬಿಟ್ಟರೆ ಉಳಿದ ಕಾಂಗ್ರೆಸ್ ಶಾಸಕರು ಮತ್ತು ಇನ್ನೊಬ್ಬ ಪಕ್ಷೇತರ ಶಾಸಕ ಸೈಲ್‌ನೂ ದೇಶಪಾಂಡೆ ವಿರುದ್ಧ ತಿರುಗಿಬಿದ್ದಿದ್ದಾರೆ.

ದಿನಗಳೆದಂತೆ ದೈತ್ಯ ಸಂಹಾರಕ್ಕೆ ಬೆಂಬಲ ಜಾಸ್ತಿಯಾಗುತ್ತಿದೆ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಭಟ್ಕಳ ಮಂಡಾಳು ವೈದ್ಯನೆಂಬ 'ನಿಗೂಢ ದಂಧೆ'ಗಳ ಆಸಾಮಿ ಮತ್ತು ಕಾರವಾರದ ಸತೀಶ್ ಸೈಲ್ ಎಂಬ ಅದಿರುಗಳ್ಳ ಪಕ್ಷೇತರನಾಗಿ ಗೆದ್ದಿದ್ದರು. ಗೆದ್ದ ನಂತರ ಕಾಂಗ್ರೆಸ್‌ನತ್ತ ಒಲಿದಿದ್ದರು. ಆದರೆ ಸತೀಶ್ ಸೈಲ್ ಜೈಲು ಸೇರುತ್ತಿದ್ದಂತೆಯೇ ಆತನ ಎದುರಾಳಿ ಎಲ್ಲೂ ಸಲ್ಲದೆ ಮೂಲೆ ಪಾಲಾಗಿರುವ ಆನಂದ ಅಸ್ನೋಟಿಕರ್‌ನೊಂದಿಗೆ ಚಕ್ಕಂದ ಶುರು ಹಚ್ಚಿಕೊಂಡಿದ್ದರು. ಇದು ಸಹಜವಾಗೇ ಸೈಲ್‌ನ ಕೆರಳಿಸಿತು. ಆತ ಲೋಕಸಭೆ ಎಲೆಕ್ಷನ್‌ನಲ್ಲಿ ದೇಶಪಾಂಡೆ ಮಗನಿಗೆ ಸೈಲ್ ಬತ್ತಿ ಇಟ್ಟ. ಸಿಬಿಐ ವಶದಲ್ಲಿರುವ ಸೈಲ್‌ನ ಬಿಜೆಪಿ ಒಲವಿಗೆ ಮತ್ತೊಂದು ಕಾರಣವೂ ಇತ್ತು. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಗಣಿಗೂಂಡಾ ಜನಾರ್ದನ ರೆಡ್ಡಿ ಜತೆ ತಾನೂ ಸಲೀಸಾಗಿ ಜೈಲಿಂದ ಹೇರಬರಬಹುದೆಂಬ ಲೆಕ್ಕಾಚಾರ ಸೈಲ್‌ನದಾಗಿತ್ತು.

ಆದರೆ ಭಟ್ಕಳದ ಮಂಡಾಳು ವೈದ್ಯ ದೇಶಪಾಂಡೆಯನ್ನು ಅಪ್ಪಿಕೊಂಡಿದ್ದು ಮೂರ್ಖತನವೇ ಸರಿ. ತನ್ನ ಬಹುಕಾಲದ ಹಿಂಬಾಲಕನಾದ ಮಾಜಿ ಶಾಸಕ ಜೆ.ಡಿ. ನಾಯ್ಕ್ ಎಂಬ ಪಿಕ್ರೇಸ್ ಪುಢಾರಿಯ ಕೈಬಿಟ್ಟು ವೈದ್ಯನನ್ನು ಬಗಲಲ್ಲಿಟ್ಟುಕೊಂಡು ಭಟ್ಕಳ ರಾಜಕೀಯ ನಿಭಾಯಿಸಲು ಹೋದ ದೇಶಪಾಂಡೆ ಜಿಲ್ಲೆಯ ದೀವರಿಗೆ ತಾನು ನಿಮ್ಮ ವಿರೋಧಿ ಎಂಬ ಮೆಸೇಜ್ ಕಳಿಸಿದಂತಾಗಿತ್ತು. ಹೇಳಿಕೇಳಿ ವೈದ್ಯ ದೀವರ ವಿರೋಧಿ ರಾಜಕಾರಣವನ್ನೇ ಬಂಡವಾಳ ಮಾಡಿಕೊಂಡು ಅಚಾನಕ್ ಭಟ್ಕಳದಲ್ಲಿ ಗೆದ್ದವನು. ಜೆ.ಡಿ.ನಾಯ್ಕ್ ದೀವರ ಸಮುದಾಯದವನು. ಹೀಗಿರುವಾಗ ದೀವರು ದೇಶಪಾಂಡೆ ಆಧಿಪತ್ಯ ಕಾಂಗ್ರೆಸ್‌ನಲ್ಲಿರುವವರೆಗೆ ಆ ಪಾರ್ಟಿಯನ್ನು ನಂಬಲು ಸಾಧ್ಯವಾ? ಅದರಲ್ಲೂ ಈಗ ಶಾಸಕ ವೈದ್ಯನನ್ನು ತುಂಬ ಮುತುವರ್ಜಿಯಿಂದ ದೇಶಪಾಂಡೆಯೇ ಕಾಂಗ್ರೆಸ್ ಸಹ-ಶಾಸಕನಾಗಿ ಸಿಎಲ್‌ಪಿ ಸಭೆಗೆ ಕರಕೊಂಡು ಹೋಗಿರುವುದು ಭಟ್ಕಳ ಕಾಂಗ್ರೆಸ್‌ನಲ್ಲಿ ಬಿರುಗಾಳಿ ಎಬ್ಬಿಸಿದೆ. ಮಾಜಿ ಶಾಸಕ ಜೆಡಿಗಷ್ಟೇ ಅಲ್ಲ ಸ್ಥಳೀಯ ಕಾಂಗ್ರೆಸ್‌ನ ಶಕ್ತಿಶಾಲಿ ಮುಂದಾಳುಗಳಾದ ದಾಮೋದರ ಗರ್ಡೀಕರ್ (ಮಾಜಿ ಜಿಪಂ ಅಧ್ಯಕ್ಷ), ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಸುನಿಲ್ ನಾಯ್ಕ್ ಎಂಬ ಯುವಕನಿಗೂ ಶಾಸಕ ವೈದ್ಯನ ಕಾಂಗ್ರೆಸ್ ಎಂಟ್ರಿ ಬೇಡವಾಗಿತ್ತು.

ನಿಧಾನ ಘಟ್ಟ ಹತ್ತಿದರೆ ಶಿರಸಿಯಲ್ಲೂ ದೀವರದೇ ಬಾಹುಳ್ಯ. ಜಿಲ್ಲಾ ಕಾಂಗ್ರೆಸ್‌ನ ನಾಮಕಾವಾಸ್ತೆ ಅಧ್ಯಕ್ಷ ಭೀಮಣ್ಣ ನಾಯ್ಕ್, ಶಿರಸಿ ಸೀಮೆಯವರು. 'ಬಂ'ರ ಭಾಮೈದನಾದ ಭೀಮಣ್ಣನಿಗೆ ಶಿರಸಿ ಅಸೆಂಬ್ಲಿ ಟಿಕೆಟ್, ಎಮ್ಮೆಲ್ಸಿಗಿರಿ ಚಾನ್ಸ್, ಎಂಪಿಗಿರಿ ಅವಕಾಶ... ಹೀಗೆ ಕಾಲಕ್ಕೆ ತಕ್ಕಂತೆ ಆಮಿಷ ಒಡ್ಡಿದ ದೇಶಪಾಂಡೆ ಅಲ್ಲಿಂದಿಲ್ಲಿಗೂ ಮೋಸವನ್ನೇ ಮಾಡಿದ್ದಾರೆ. ಇದು ದೀವರನ್ನು ದಿಕ್ಕೆಡಿಸಿದೆ. ಬೆನ್ನೆಲುಬಿಲ್ಲದ ಭೀಮಣ್ಣ ಈಗ ದೇಶಪಾಂಡೆ ವಿರುದ್ಧ ಹರಿಪ್ರಸಾದ್ ಹತ್ತಿರ ದೂರು ಹೇಳುವಷ್ಟು ಧೈರ್ಯಗೊಂಡಿದ್ದಾರೆ. ಹಾಗೆಯೇ ಪಕ್ಕದ ಯಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ್ ಎಂಬ ಅದಿರು ಕಳ್ಳನೂ ದೇಶಪಾಂಡೆ ಎಂದರೆ ಮೂಗು ಮುರಿವವನೇ. ಈತ ಮ್ಯಾಗಿ ಬ್ರಿಗೇಡ್‌ನ 'ಕೋಶಾಧಿಕಾರಿ'. ಮ್ಯಾಗಿಯೇ ಈತನಿಗೆ ದೇಶಪಾಂಡೆಗೆ ಸೆಡ್ಡು ಹೊಡೆದು ಅಸೆಂಬ್ಲಿ ಟಿಕೆಟ್ ಕೊಡಿಸಿದ್ದು. ಕುಮಟಾದ ಶಾಸಕಿ ಶಾರದಾ ಶೆಟ್ಟಿ ಕಂಡರೆ ದೇಶಪಾಂಡೆ ಗ್ಯಾಂಗಿಗೆ ಆಗದು. ಆಕೆಯ ಮಗ ರವಿಕುಮಾರ್ ಎಂಬ ಅಡ್ನಾಡಿಯೂ ದೇಶಪಾಂಡೆಗೆ ಕೇರ್ ಮಾಡುವ ಪೈಕಿಯಲ್ಲ. ದೇವಮಾತಾ ಮ್ಯಾಗಿ ಕೃಪೆಯಿರುವಾಗ ದೇಶಪಾಂಡೆ ಹಂಗೇನು ಶಾರದಾ ಶೆಟ್ಟಿಗೆ?!

ಇದಿಷ್ಟು ದೇಶಪಾಂಡೆಯ ಪಕ್ಕಾ ವಿರೋಧಿಗಳ ಕತೆಯಾದರೆ, ಖುದ್ದು ದೇಶಪಾಂಡೆಯೇ ನಂಬಿ ಬೆಳೆಸಿದ್ದ ಬಕಾಸುರರು-ರೌಡಿಗಳು, ಕಳ್ಳ ಕಂಟ್ರಾಕ್ಟರ್‌ಗಳೂ ಆತನ ನೆರವಿಗೆ ಬಂದಿಲ್ಲ. ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ವಿಶ್ವಾಸಿಗರೇ ಆತನಿಗೆ ಘಾತ ಮಾಡಿದ್ದಾರೆ. ಕೊಟ್ಟ ಹಣ ತಿಜೋರಿಗಿಳಿಸಿ ಪ್ರಶಾಂತನನ್ನು ಸೋಲಿಸಿದ್ದಾರೆ. ಅದೇ ರೀತಿ ಜನರ ಬೆಂಬಲ ಇಲ್ಲದ ಸೋಕಾಲ್ಡ್ ಹವ್ಯಕ ಲೀಡರ್‌ಗಳಿಂದ ಶಿರಸಿ ಟಿಎಸ್‌ಎಸ್ ಚೋರ ಶಾಂತಾರಾಮ ಹೆಗಡೆ, ದೋ ನಂಬರ್ ಬಿಸ್ನೆಸ್‌ಮನ್ ಶಿವಾನಂದ ಹೆಗಡೆ, ಪುಂಡರ ಗಂಡು ಷಣ್ಮುಖ ಗೌಡ, ಕೊಳಕು ನಾಲಿಗೆಯ ಎಮ್ಮೆಲ್ಸಿ ಶ್ರೀಕಾಂತ ಘೋಟನೇಕರ್ ತರಹದವರ ಅಟ್ಟಹಾಸ, ಅಡ್ನಾಡಿತನಗಳು ದೇಶಪಾಂಡೆ ಮುಳುವಾಗಿದೆ. ಇವರ ಮೂತಿ ಕಂಡರೆ ಮೂರು ಮತ್ತೊಂದು ಮತ ಬೀಳದು!!

ಒಟ್ಟಿನಲ್ಲಿ ದೇಶಪಾಂಡೆಯ ಕಪಿಮುಷ್ಟಿಯಿಂದ ಜಿಲ್ಲಾ ಕಾಂಗ್ರೆಸ್ ಮುಕ್ತಗೊಳಿಸದಿದ್ದರೆ ಪಾರ್ಟಿಗೆ ಉಳಿಗಾಲ ಇಲ್ಲವೆಂಬುದು ಎಲ್ಲರಿಗೂ ಖಾತ್ರಿಯಾಗಿದೆ. ಆತನ ವಿರುದ್ಧದ ಒಳಸುಳಿ ಬಿರುಸಾಗುತ್ತಿದೆ. ಮ್ಯಾಗಿ ರಾಜ್ಯಪಾಲಿಕೆಯಿಂದ ನಿವೃತ್ತಿಯಾಗುತ್ತಲೇ 'ದೇಶಪಾಂಡೆ ಹಠಾವ್ರೋ' ಜೋರಾಗುವುದು ದೇಶಪಾಂಡೆಗೆ ಮಾಜಿ ಮಾಡಿ ಮನೆಯಲ್ಲಿ ರೆಸ್ಟ್ ಕೊಡಲು ಜಿಲ್ಲೆಯ ಜನರಂತೂ ದೃಢ ನಿರ್ಧಾರಕ್ಕೆ ಬಂದಿದ್ದಾರೆ.

ಬಿಜೆಪಿಯಲ್ಲಿ ಮಾಣಿ ಹಣಿವ ಹವಣಿಕೆ


ಪೈಸೆ ಮುಖ ಬೆಲೆಯೂ ಇಲ್ಲದ ಸೋಗಲಾಡಿ ಅನಂತ್ಮಾಣಿ ಮೋದಿ ಮುಖವಾಡ ಹಾಕಿಕೊಂಡು ಅಚಾನಕ್ ಗೆದ್ದ ಶಾಕ್‌ನಿಂದ ಜಿಲ್ಲಾ ಬಿಜೆಪಿ ಇನ್ನೂ ಚೇತರಿಸಿಕೊಂಡಿಲ್ಲ. ಅನಂತ್ಮಾಣಿಯ ಆಜನ್ಮ ಶತ್ರುಗಳಾದ ಮಾಜಿ ಮಂತ್ರಿ ಕಾಗೇರಿ ಮತ್ತು ಮಾನಗೇಡಿ ಶಿವಾನಂದ ನಾಯ್ಕ್‌ರಿಗೆ ಆತನ ಗೆಲುವು ಅರಗಿಸಿಕೊಳ್ಳಲಿಕ್ಕೇ ಆಗುತ್ತಿಲ್ಲ. ಈ ಇಬ್ಬರು ಮಾಣಿ ಸೋತು ಮೂಲೆ ಸೇರಲೆಂದು ಹರಕೆ ಹೊರದ ದೇವರೇ ಇಲ್ಲ, ಪಾಪ! ಆದರೂ ಹೊರಲೋಕಕ್ಕೆ ಬಿಜೆಪಿ ಗೆದ್ದಿದ್ದಕ್ಕೆ ಖುಷಿ ತೋರಿಸಿಕೊಳ್ಳುತ್ತಿದ್ದಾರೆ. ಮಾಣಿ ಸಂಗಡ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಒಳಗೊಳಗೇ ಸೇಡಿನ ಲಾವಾರಸ ಉಕ್ಕುತ್ತಿದೆ!


ಸಂಸದನಾಗಿ ಆಯ್ಕೆಯಾಗಿದ್ದೇ ತಡ, ಮಾಣಿಯ ಹಾರಾಟ ಹೆಚ್ಚಾಗಿ ಹೋಗಿದೆ. ಉತ್ತರ ಕನ್ನಡದ ಬಿಜೆಪಿಗೆ ತಾನೇ ಯಜಮಾನ ಎಂಬಂತೆ ಸೊಕ್ಕಿಂದ ಬೊಬ್ಬೆ ಹೊಡೆಯುತ್ತಿದ್ದಾನೆ. ಜಿಲ್ಲಾ ಬಿಜೆಪಿ ಅನಂತ್ಮಾಣಿಯ ಹಿಡಿತಕ್ಕೆ ಸಿಕ್ಕಿ ಹಾಕಿಕೊಂಡಿದೆ ಎಂಬಂತ ಪರಿಸ್ಥಿತಿ ನಿರ್ಮಾಣ ಆಗಿದೆ. ಆದರೆ ನರಿಬುದ್ಧಿಯ ಕಾಗೇರಿ ಅಷ್ಟು ಸುಲಭಕ್ಕೆ ಆರೆಸ್ಸೆಸ್‌ನ ಬುದ್ಧಿಗೇಡಿ ಬುತ್ತಿ ಮಾಣಿಗೆ ಶರಣಾಗುತ್ತಾರಾ? ಕಾಗೇರಿ ಸೂಪರ್ ಪವರ್ ತಾನೇ ಎಂದು ಬೀಗುತ್ತಿರುವ ಮಾಣಿಯ ಬಾಲ ಕಟ್ ಮಾಡಲು ಬೆಂಗಳೂರಿನ ಕೇಶವಕೃಪದಲ್ಲೇ ನೀಲ ನಕ್ಷೆ ತಯಾರಿಸಿ ಜಿಲ್ಲೆಯಲ್ಲಿ ಹಂಚುತ್ತಿದ್ದಾರೆ.

ಜಿಲ್ಲಾ ಬಿಜೆಪಿಯ ಮುಖಂಡ ಮಣಿಗಳೆಂದರೆ ಮೂರೇ ಮಂದಿ. ಒಬ್ಬ ಸಂಸದ ಅನಂತ್ಮಾಣಿ, ಮತ್ತೊಬ್ಬ ಕಾಗೇರಿ, ಮಗದೊಬ್ಬನೆಂದರೆ ಶಿವಾನಂದ ನಾಯ್ಕ್. ಇದರಲ್ಲಿ ನಾಯ್ಕ್‌ಗೆ ಹಿಂದುಳಿದವರ ಮುಂದಾಳೆಂದಷ್ಟೇ ಅನಿವಾರ್ಯ ಪ್ರಾಶಸ್ತ್ಯ ಸಿಕ್ಕಿದೆ. ಹಾಗಂತ ನಾಯ್ಕ್‌ಗೆ ಬಿಜೆಪಿಯಲ್ಲೀಗ ಅಧಿಕಾರವಾಣಿಯಿಂದ ಮಾತಾಡುವ ನೈತಿಕತೆ ಉಳಿದಿಲ್ಲ. ಕಾಗೇರಿ-ಮಾಣಿಗಳ ಉಪಟಳ ತಡೆಯಲಾಗದೆ ಜೆಡಿಎಸ್‌ಗೆ ಹೋಗಿ ಅಲ್ಲಿ ಕಂಗಾಲಾಗಿ ಗತಿಯಿಲ್ಲದೇ ಮತ್ತೆ ಮೂಲ ಮನೆಗೇ ಬಂದಿರುವ ನಾಯ್ಕ್‌ಗೆ ಮೊದಲಿನ ಕಿಮ್ಮತ್ತಿಲ್ಲ. ಈಗಂತೂ ಅನಂತ್ಮಾಣಿ "ಆ ಮೂರ್‍ಕಾಸಿನ ನಾಯ್ಕ್‌ನ ಅವಶ್ಯಕತೆ ನಮ್ ಪಕ್ಷಕ್ಕೆ ಇಲ್ಲ... ಬಂದ್ರೆ ಅಂವ ನಾಯಿ ಹಾಗೆ ಬಿದ್ದಿರ್ಬೇಕು..." ಎಂದು ಬುಸುಗುಡುತ್ತಿದ್ದಾನಂತೆ. ಅತ್ತ ಕಾಗೇರಿಗೂ ಈ ನಾಯ್ಕನೆಂದರೆ ಅಷ್ಟಕ್ಕಷ್ಟೇ. ಈ ಶೂದ್ರ ಪಾರ್ಟಿಯಲ್ಲಿ ಬೆಳೆದರೆ ತನ್ನ ಸ್ಥಾನ-ಮಾನಕ್ಕೆ ಧಕ್ಕೆ ಎಂದೆಯಲ್ಲವೆ ಕಾಗೇರಿ ಹಿಂದಾತನ ಸೋಲಿಸಿ ಪಾರ್ಟಿಯಿಂದಲೇ ಹೊರಹೋಗುವಂತೆ ಕಾಡಿದ್ದು?!


ಎಂಪಿಯಾಗುತ್ತಲೇ ಜಿಲ್ಲಾ ಬಿಜೆಪಿ ಕಬ್ಜಾ ಮಾಡಿಕೊಳ್ಳುವ ಇರಾದೆ ಅನಂತ್ಮಾಣಿಯಲ್ಲಿತ್ತು. ಅದನ್ನು ಅರ್ಥಮಾಡಿಕೊಂಡ ಕಾಗೇರಿ ಆರೆಸೆಸ್ಸ್‌ನ ರಿಂಗ್ ಮಾಸ್ಟರ್‌ಗಳಿಂದ ಮಾಣಿಗೆ ಮೂಗುದಾರ ತೊಡಿಸಿದ್ದಾರೆ. ಹಸಿ-ಹಸೀ ಹುಂಬನೂ-ಅಭಿವೃದ್ಧಿ ಕಲ್ಪನೆ ಇಲ್ಲದ ದುಡ್ಡಿನ ದಾಹದ ಪೆದ್ದಣ್ಣನೂ ಆಗಿರುವ ಅನಂತ್ಮಾಣಿ ಪಾರ್ಟಿ ಯಜಮಾನನಾದರೆ ಗಂಡಾಂತರ ಎಂಬ ಸಂದೇಶ ಚಡ್ಡಿಗಳಿಗೆ ನೀಡಿದ್ದೇ ಕಾಗೇರಿ ಬಳಗ. ಹಾಗೆಯೇ ಮಾಣಿಯೇನೂ ಕಾಗೇರಿ ತಂತ್ರಕ್ಕೆ ಸೋಲು ಒಪ್ಪಿಕೊಂಡಿಲ್ಲ. ಐದು ಬಾರಿ ಗೆದ್ದಿರುವ ಸೀನಿಯಾರಿಟಿ ಪ್ರಯೋಗಿಸಿಯೇ ಆತನೂ ಕಾಗೇರಿ ಕರಾಮತ್ತುಗಳನ್ನೆಲ್ಲ ಹಿರಿಯರಿಗೆ ಅರುಹಿದ್ದಾನೆ. ಇದರ ಜತೆಜತೆಗೇ ಜಿಲ್ಲಾ ಬಿಜೆಪಿಯ ಬ್ರಾಹ್ಮಣಿಕತೆಗೆ ಶೂದ್ರ ಮುಖವಾಡ ಒಂದರ ಅವಶ್ಯಕತೆ ಇರುವ ಅನಿವಾರ್ಯತೆಯೂ ಸಂಘ ಸರದಾರರಿಗೆ ಅರಿವಾಗಿದೆ. ಹಾಗಾಗಿ ಶಿವಾನಂದ ನಾಯ್ಕ್‌ನ ಹಿಂದಿನ 'ತಪ್ಪು' ಕ್ಷಮಿಸಿ ಆತನನ್ನು ಮುನ್ನಲೆಗೆ ತರುವ ತೀರ್ಮಾನಕ್ಕೆ ಬಂದಿದೆ.

ದಿಕ್ಕು ತಪ್ಪಿ ಅತಂತ್ರ ಸ್ಥಿತಿಯಲ್ಲಿರುವ ನಾಯ್ಕ್‌ಗೂ ಆರೆಸ್ಸೆಸ್‌ನ ಅಡಿಯಾಳಾಗದೇ ವಿಧಿಯೇ ಇಲ್ಲ. ಗುರುಯಡ್ಡಿ ಕೈ-ಕಾಲು ಹಿಡಿದು ಅನಂತ್ಮಾಣಿ-ಕಾಗೇರಿ ಗ್ಯಾಂಗ್‌ಗೆ ಸೆಡ್ಡು ಹೊಡೆಯೋಣವೆಂದರೆ ಯಡ್ಡಿಯೇ ಮೂಲೆಗುಂಪಾಗಿದ್ದಾರೆ. ಶೋಭಕ್ಕ ಕರುಣೆಯಿಂದ ಸದ್ಯಕ್ಕೆ ಬಚಾವಾಗಿರುವ ನಾಯ್ಕ್ ಗುರೂಜಿ ರಾಜ್ಯ ಬಿಜೆಪಿ ಅಧ್ಯಕ್ಷರಾಗುವ ಅಚ್ಚೇ ದಿನ್‌ಗಾಗಿ ಕಾಯುತ್ತಿದ್ದಾರೆ. ಇದೇನೇ ಇರಲಿ, ನಾಯ್ಕ್-ಕಾಗೇರಿ-ಅನಂತ್ಮಾಣಿ ತ್ರಿಮೂರ್ತಿಗಳಲ್ಲಿ ಸಮನ್ವಯ ಸಾಧಿಸಿ ಜಿಲ್ಲಾ ಬಿಜೆಪಿಯಲ್ಲಿ ಶೂದ್ರ-ಬ್ರಾಹ್ಮಣ ಸೂತ್ರದ ಸಮತೋಲ ಕಾಪಾಡಲು ಆರೆಸ್ಸೆಸ್ ಪ್ಲಾನ್ ಹಾಕಿದೆ. ಈಗ ಈ ಮೂವರೂ ಅಸ್ತಿತ್ವದ ಆಟದಲ್ಲಿ ತೊಡಗಿದ್ದಾರೆ. ತಂತಮ್ಮ ಬೆಂಬಲಿಗರಿಗೆ ಪಾರ್ಟಿಯಲ್ಲಿ-ಕೇಂದ್ರ ಸರ್ಕಾರದ ಕಮಿಟಿ-ಬೋರ್ಡ್‌ಗಳಲ್ಲಿ ತೂರಿ ಹಾಕತ್ತು


ದೇಶಪಾಂಡೆ


ಮಂಡಾಳು ವೈದ್ಯ



ಭೀಮಣ್ಣ ನಾಯ್ಕ್


ಶಿವರಾಮ ಹೆಬ್ಬಾರ್


ಹರಿಪ್ರಸಾದ್


ಮ್ಯಾಗಿ


ಅನಂತಕುಮಾರ್ ಹೆಗಡೆ


ಕಾಗೇರಿ


ಸುನಿಲ್ ಹಗ್ಡೆ


ಶಿವಾನಂದ ನಾಯ್ಕ್


ಶಶಿಭೂಷಣ ಹೆಗಡೆ


ಪ್ರಶಾಂತ ದೇಶಪಾಂಡೆ

...ರಿಸಲು ಹವಣಿಸುತ್ತಿದ್ದಾರೆ. ಮತ್ತೊಂದೆಡೆ ಯಲ್ಲಾಪುರದ ...ಾಜಿ ಶಾಸಕ ವಿ.ಎಸ್. ಪಾಟೀಲನ ಸೊಂಟ ಮುರಿಯಲು ...ನಂತ್ಕಾಣಿ ಪ್ರಯತ್ನಿಸುತ್ತಲೇ ಇದ್ದಾನೆ. ಪಾಟೀಲ್ ಸ್ವ- ...ತಿ ಬಾಸ್ ಯಡ್ಡಿ-ಸ್ಥಳೀಯ ಅಹುದ್ದಾಂಢವ ಕಾಗೇರಿ ...ಲಿಗರಗಿ ಕಾಪಾಡಿ ಎನ್ನುತ್ತಿದ್ದಾರೆ.

ಆರೆಸ್ಸೆಸ್ ಅದೆಂಥದೇ ಹಿಕಮತ್ತು ಮಾಡಲಿ. ...ಂಪುಗಾರಿಕೆಯನ್ನೇ ರಾಜಕಾರಣ ಮಾಡಿಕೊಂಡಿರುವ ...ಗೇರಿ-ಅನಂತ್ಕಾಣಿ-ನಾಯ್ಕ್‌ನನ್ನ ಒಂದೇ ಬುಟ್ಟಿಯಲ್ಲಿಟ್ಟು ...ಲಾಭಾರ ಮಾಡಲಂತೂ ಸಾಧ್ಯವೇ ಇಲ್ಲ, ಹೀಗಾಗಿ ...ಜೆಪಿಯ ಹಿಂದೂತ್ವದ ರಾಜಕೀಯ ಈ ಮೂರು ...ಲತ್ತುಗಾರರ ಸುತ್ತಲೇ ಗಿರಕಿ ಹೊಡೆಯುತ್ತಿದೆ.

ತಳ ಒಡೆದ ದಳದಲ್ಲಿ

ಜಿಲ್ಲೆಯಲ್ಲಿ ಜೆಡಿಎಸ್ ಸಿಂಬಲಿಗೆ ನೆಲೆ-ಬೆಲೆಯಿಲ್ಲ. ...ಗಂತ ಭಟ್ಕಳ, ಕುಮಟಾ, ಶಿರಸಿ ಮತ್ತು ಹಳಿಯಾಳದಲ್ಲಿ ...ಪಾರ್ಟಿ ಸ್ಥಳೀಯ ನಾಯಕತ್ವದ ವೈಯಕ್ತಿಕ ಇಮೇಜಿಂದ ...ಜ್ಜೀವದಲ್ಲಿದೆ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಭಟ್ಕಳದ ...ಾಯಿತುಲ್ಲಾ ಶಾ 'ಬಂದ್ರಿ, ಕುಮಟಾದ ದಿನಕರ ಶೆಟ್ಟಿ ...ಾಜಿ ಎಮ್ಮೆಲ್ಲೆ, ಶಿರಸಿಯ ಶಶಿಭೂಷಣ ಹೆಗಡೆ (ದಿವಂಗತ ...ಾಜಿ ಸಿಂಎಂ ರಾಮಕೃಷ್ಣ ಹೆಗಡೆ ದಾಯಾದಿ ಮೊಮ್ಮಗ) ...ತ್ತು ಹಳಿಯಾಳದ ಮಾಜಿ ಶಾಸಕ ಸುನಿಲ್ ಹೆಗ್ಡೆ ...ುಪಾಳಿಗಳಿಗೆ ನಡುಕ ಹುಟ್ಟುವಷ್ಟು ದೊಡ್ಡ ಪ್ರಮಾಣದಲ್ಲಿ ...ತ ಪಡೆದಿದ್ದರು. ಆದರೆ ಲೋಕಸಭೆ ಚುನಾವಣೆ ಹೊತ್ತಲ್ಲಿ ...ಲ್ಲಾ ಜೆಡಿಎಸ್ ದೊಡ್ಡ ಸೊನ್ನೆ ಆಗಿಹೋಯ್ತು.

ಜೆಡಿಎಸ್‌ನ ಪಾರ್ಲಿಮೆಂಟ್ ಕ್ಯಾಂಡಿಡೇಟಾಗಿದ್ದ ...ಾನಂದ ನಾಯ್ಕ್ ಕೊನೆ ಗಳಿಗೆಯಲ್ಲಿ ಶಸ್ತ್ರಾಸ್ತ್ರ ತ್ಯಾಗ ...ಾಡಿ ರಣಹೇಡಿಯಂತೆ ಯುದ್ಧ ಭೂಮಿಯಿಂದ ...ಾಯನ ಮಾಡಿದಾಗ ಜಿಲ್ಲಾ ಜೆಡಿಎಸ್ ರಾಷ್ಟ್ರದಾದ್ಯಂತ ...ದ್ವಿ ಮಾಡಿತ್ತು. ನಾಯ್ಕ್ ಬಿಜೆಪಿಗೆ ಡಿಲಾದನೋ? ಕಾಂಗ್ರೆಸ್ ...ಂಡುಕೊಂಡಿತೇ? ಒಟ್ಟಿನಲ್ಲಿ ಎಡಬಿಡಂಗಿ ನಾಯ್ಕ್‌ನ ...ಜಕೀಯದ ಇತಿಶ್ರೀಯಂತೂ ಆಯ್ತು. ಗರ್ಭಗುಡಿ ...ಸ್ಮೃತಿಯ ಬಿಜೆಪಿ ಶೂದ್ರನೊಬ್ಬನ ಹೇಗೆ ಬಲಿ ...ತೆಗುಬಲ್ಲುದೆಂಬುದಕ್ಕೆ ನಾಯ್ಕ್ ಸರ್ವಕಾಲಿಕ ...ೇತವಾದರು, ಪಾಪ! ನಾಯ್ಕ್ ಎಲೆಕ್ಷನ್‌ಗೂ ಮೊದಲೇ ...ಜೆಪಿ ಪಾಲಾದರೆ, ಈಗ ಇನ್ನೊಂದಿಷ್ಟು ದಳಪತಿಗಳು ...ಜೆಪಿ ಪಡೆಯುತ್ತಾ ಕಣ್ಣು ನೆಟ್ಟಿದ್ದಾರೆ. ಜಿಲ್ಲೆಯಲ್ಲಿ ಜೆಡಿಎಸ್‌ಗೆ ...ಭವಿಷ್ಯವಿಲ್ಲ ಎಂಬುದು ಇವರ ತೀರ್ಮಾನ.

ಬಿಜೆಪಿಯಲ್ಲಿದ್ದಾಗ ಕಾಗೇರಿ-ಅನಂತ್ಕಾಣಿಗಳ ಅಟ್ಟಹಾಸಕ್ಕೆ ...ಕ್ಕಿ ಹೈರಾಣಾಗಿದ್ದ ಶಶಿಭೂಷಣ, ಮಾಜಿ ಶಾಸಕ ...ವೇಕಾನಂದ ವೈದ್ಯ ಮತ್ತು ಸುಭಾಸ್ ಮಂಡೂರ್ ಮತ್ತೆ ...ತ್ತಲೇ ವಾಲುತ್ತಿದ್ದಾರೆ. ಕುಮಟೆಯ ದಿನಕರ ಶೆಟ್ಟಿಗೂ ...ಜೆಪಿ ಆಕರ್ಷಣೆ ಇದೆಯಾದರೂ ಸಾಬಿಗಳ ಮತ ...ದರೆಂಬ ಭಯ. ಅದಕ್ಕಿಂತಲೂ ಹೆಚ್ಚಾಗಿ ಕುಮಟಾ ...ಜೆಪಿಯಲ್ಲಿ ದಿನಕರನ ತಲೆ ಕಂಡರಾಗದ ದೊಡ್ಡ ಬಳಗವೇ ...ೆ. ಹೀಗಾಗಿ ಆತ ಗೊಂದಲಕ್ಕೆ ಬಿದ್ದಿದ್ದಾರೆ.

...ಕುತೂಹಲ ಮೂಡಿಸಿರುವುದು ಹಳಿಯಾಳದ ಮಾಜಿ ...ಸಕ- ರಾಜ್ಯ ಜೆಡಿಎಸ್ ಕಾರ್ಯಾಧ್ಯಕ್ಷ ಸುನಿಲ್ ಹೆಗ್ಡೆಯ ...-ನುಡಿ. ದೇಶಪಾಂಡೆ ಗರಡಿಯಲ್ಲೇ ಪಳಗಿ ಗುರುವಿಗೆ ...ುಮಂತ್ರ ಹಾಕಿ ಒಮ್ಮೆ ಗೆದ್ದಿರುವ ಸುನಿಲ್ ಇವತ್ತಿಗೂ ...ಯಾಳ ಜೋಯಿಡಾದಲ್ಲಿ ಸ್ವತಂತ್ರ ಶಕ್ತಿ. ದೇಶಪಾಂಡೆಗೆ ...ದ್ದೆಯಲ್ಲೂ ಬೆವರುವಂತೆ ಮಾಡುವ ತಾಕತ್ತಿನ ಸುನಿಲ್‌ಗೆ ...ಾಕೋ ಜೆಡಿಎಸ್ ಯುವರಾಜ ಕುಮ್ಮಿ ಬಗ್ಗೆ ...ಬೆಕೆಯಿಲ್ಲ, ಹಣಕಾಸಿನ ವಿಷಯದಲ್ಲಿ ಇವರಿಬ್ಬರ ನಡುವೆ ...ಮನಸ್ಸು ಬೆಳೆದಿದೆ ಎಂಬ ಗುಲ್ಲೂ ಎದ್ದಿದೆ. ಹೆಗ್ಡೆ ...ಸತನಕ್ಕೆ ದುಡ್ಡು ಮೋಹ ಜಾಸ್ತಿ; ಗೌಡರ ಫ್ಯಾಮಿಲಿಗೆ ...ಟು ಬಿಚ್ಚೋದು ಆಗದು, ಇದು ಗುಟ್ಟು.

ಈಗ ಈ ಮನಸ್ತಾಪವೇ ಸುನಿಲ್‌ನನ್ನು ಬಿಜೆಪಿಯ ...ಿ ಬಾಗಿಲು ತನಕ ತಂದು ನಿಲ್ಲಿಸಿದೆ. ಕಳೆದ ...ರ್ಲಿಮೆಂಟ್ ಎಲೆಕ್ಷನ್‌ನಲ್ಲಿ ತನ್ನ ಶತ್ರು ದೇಶಪಾಂಡೆ ...ಗನ ಸೋಲಿಸಲು ಸುನಿಲ್ ಮತ್ತವನ ತಂದೆ- ಮಾಜಿ ...ಮ್ಮೆಲ್ಸಿ- ವಿ.ಡಿ. ಹೆಗ್ಡೆ ಹಗಲುಇರುಳು ಕಟಿಪಿಟಿ ...ಸಿದ್ದರು. ಗೆದ್ದ ತಕ್ಷಣ ಬಿಜೆಪಿ ಸಂಸದ ಅನಂತ್ಕಾಣಿ ...ಿ ಮನೆಗೇ ಹೋಗಿ ಪಾದಕ್ಕೆ ಡೈಹೊಡೆದು ಬಂದಿದ್ದಾರೆ. ...ೀ ಅಲ್ಲ, ನಿಮ್ಮ ಮಗನಿಗೆ ಬಿಜೆಪಿಗೆ ಕಳಿಸಿ ನಾನವನ ...- ಬೆಳೆಸುತ್ತೇನೆಂಬ ಪುಕ್ಕಟೆ ಭರವಸೆಯೂ ನೀಡಿದ್ದಾನೆ. ...ಕೆ, ಸಮಾನಾಂತರವಾಗಿ ಸುನಿಲ್ ಜೆಡಿಎಸ್‌ನ ದೊರೆಗಳ ...! ಬೇಸರದ ಮಾತು ಬಿತ್ತರಿಸುತ್ತಿದ್ದಾನೆ. ಈಚೆಗೆ ...ಗಾಪೂರದಲ್ಲಿ ನಡೆದ ಉತ್ತರ ಕರ್ನಾಟಕದ ಬಿಜೆಪಿ ...ಸದರ ಅಭಿನಂದನಾ ಸಭೆಗೆ ಕರೆಯದೆಯೇ ಹೋಗಿ ...ೆ ಮಾಡಿ ಬಂದಿದ್ದಾನೆ ಸುನಿಲ್.

...ಸುನಿಲ್‌ಗೆ ಬಿಜೆಪಿ ಅನಿವಾರ್ಯ. ಆತ ಬಿಜೆಪಿ ...ೋದು ಖಂಡಿತ. ಶಶಿಭೂಷಣ ಹೆಗಡೆ, ವೈದ್ಯ ...ರೆಗೆ ಸೇರಿಸಿಕೊಳ್ಳಲು ಬಿಜೆಪಿಯಲ್ಲಿ ತಕರಾರು ...ಬಹುದು. ಆದರೆ ಸುನಿಲ್‌ಗೆ ಯಾರ ವಿರೋಧವೂ ...ಪಾರ್ಟಿಯಲ್ಲಿಲ್ಲ. ಕೆಲವೇ ದಿನಗಳಲ್ಲಿ ಜಿಲ್ಲೆಯ ...ಕೀಯ ಭೂಪಟ ಬದಲಾಗುವ ಲಕ್ಷಣಗಳು ...ಗೋಚರಿಸುತ್ತಿದೆ. ಎಲ್ಲ ಪಕ್ಷದಲ್ಲೂ ಅದಲು-ಬದಲು ...ಕದಲು ಆಗಲಿದೆ!

● ನಹುಷ

ಇಳಕಲ್: ಬಲಾಢ್ಯರ ನೆರಳಲ್ಲಿ....

06 ⏮

ಕಂಪನಿಗಳಿಗಿದೆ. ಮೊದಲು ಗಣಿಗಾರಿಕೆ ಮತ್ತು ಪಾಲಿಶಿಂಗ್ ಕಂಪನಿಗಳಿಗೆ ನೋಟಿಸ್ ಕಳುಹಿಸಿ ಆನಂತರ ಡೀಲ್ ಕುದುರಿಸಿಕೊಳ್ಳುವುದು ಇವನ ನಿತ್ಯ ಕಾಯಕ. ರಾಜಕಾರಣಿಗಳಿಗೆ ಪಾಲು ಕೊಡಬೇಕು ಎಂಬ ಸಬೂಬು ಹೇಳಿಕೊಂಡೇ ಲಕ್ಷಾಂತರ ರೂಪಾಯಿ ಕಮಾಯಿ ಕಾಣುತ್ತಾನೆ.

ಇವರೀರ್ವರ ಜೊತೆಗೆ ನಗರಸಭೆ ಕಮೀಷನರ್ ಮಠ ಎಂಬ ಕಾಸುಹೊಸೆಯುವ ಜಂಗಮ ಆಸಾಮಿಯೂ ಈ ಮಾಫಿಯಾದ ಒಂದು ಭಾಗ. ಆಳ ಅಳತೆ ಒಂದೂ ಇಲ್ಲದಂತೆ ನಗರಸಭೆ ಪರವಾನಗಿ ನೀಡಿದ್ದರಿಂದಲೇ ನಗರದಾದ್ಯಂತ ನಾಯಿಕೊಡಗಳಂತೆ 316 ಕಟಿಂಗ್ ಕಾರ್ಖಾನೆಗಳು ತಲೆ ಎತ್ತಲು ಸಾಧ್ಯವಾಗಿರೋದು. ಅದರಲ್ಲಿ 200 ಫ್ಯಾಕ್ಟರಿಗಳು ಜನನಿಭಿಡ ಪ್ರದೇಶಗಳಲ್ಲೇ ವಿಷಕಾರುತ್ತಿವೆ. ಹೀಗೆ ತಲೆ ಎತ್ತಿದ ಕಂಪನಿಗಳಾದರೂ ನಿಯಮದಂತೆ ನಡೆದುಕೊಳ್ಳುತ್ತವೆಯೇ? ಅದೂ ಇಲ್ಲ. ಕರಾರುಪ್ರಕಾರ ದಿನದ 12 ಗಂಟೆ ಮಾತ್ರ ಇವು ಕಾರ್ಯನಿರ್ವಹಿಸಬೇಕು. ಆದರೆ ಇಪ್ಪತ್ನಾಲ್ಕು ಗಂಟೆಯೂ ಕೆಲಸ ಮಾಡುತ್ತಿರುತ್ತವೆ. ಇದನ್ನು ಕೇಳಬೇಕಾದ ನಗರಸಭೆಯ ಕಮೀಷನರ್ 'ಮಠಾ'ಧಿಪತಿಯೇ ಮಾರಾಟವಾಗಿ ಹೋಗಿದ್ದಾರೆ.

ಇವಕ್ಕೆಲ್ಲಾ ವಿದ್ಯುತ್ತನ್ನು ಕೆಪಿಟಿಸಿಎಲ್ ಕೊಡಬೇಕು. ಕೇವಲ ಕಟಿಂಗ್ ಮಶಿನ್‌ಗಳಿಂದಲೇ ವಿದ್ಯುತ್ ಇಲಾಖೆಗೆ ತಿಂಗಳೊಂದಕ್ಕೆ 30 ರಿಂದ 35 ಕೋಟಿ ಆದಾಯ ಬರುತ್ತಿದೆ ಎಂದರೆ ಅವುಗಳ ಯುನಿಟ್ ಬಳಕೆ ಅದಿನ್ನೆಷ್ಟಿರಬೇಡ. ಇನ್ನು ಜನಸಾಮಾನ್ಯರಿಗೆ ಎಲ್ಲಿಂದ ವಿದ್ಯುತ್ ಬಂದೀತು. ಒಮ್ಮೆ ಅಪಾಯಕಾರಿ ರಾಸಾಯನಿಕ ಬಳಸುತ್ತಿರುವ 20 ಗ್ರಾನೈಟ್ ಫ್ಯಾಕ್ಟರಿಗಳಿಗೆ ವಿದ್ಯುತ್ ಸರಬರಾಜು ನಿಲ್ಲಿಸುವಂತೆ ಸರ್ಕಾರವೇ ಆದೇಶಿಸಿತ್ತು. ಅದರ ಪ್ರಕಾರ ಪವರ್‌ಕಟ್ ಮಾಡಲು ಕೆಪಿಟಿಸಿಎಲ್ ಅಧಿಕಾರಿಗಳು ಹೋದಾಗ ಗ್ರಾನೈಟ್ ರಿಪಬ್ಲಿಕ್‌ನ ಧಣಿಗಳು ಸರ್ಕಾರಿ ಅಧಿಕಾರಿಗಳು ಎಂಬುದನ್ನೂ ಲೆಕ್ಕಿಸದೆ ಹಿಗ್ಗಾಮುಗ್ಗಾ ಜಡಿದು ಕಳಿಸಿದ್ದರು. ಈ ಬಗ್ಗೆ ದೂರು ಕೊಡಲು ಪೊಲೀಸ್ ಸ್ಟೇಷನ್‌ಗೆ ಹೋದರೂ ಕಂಪ್ಲೆಂಟ್ ರಿಜಿಸ್ಟರ್ ಆಗಲಿಲ್ಲ. ಆ ಮಟ್ಟಿಗಿದೆ ಗ್ರಾನೈಟ್ ಮಾಫಿಯಾ. ಇದನ್ನು ಕಂಡ ಮಾನವ ಹಕ್ಕು ಆಯೋಗದ ಅಧ್ಯಕ್ಷರಾಗಿದ್ದ ಎಸ್.ಆರ್. ನಾಯಕ್‌ರೇ ಇಲ್ಲಿಗೆ ಬಂದಾಗೊಮ್ಮೆ 'ನಾನಿರೋದು ಬಿಹಾರದಲ್ಲಾ ಅಥವಾ ಬಾಗಲಕೋಟೆಯಲ್ಲಾ' ಅಂತ ದಂಗಾಗಿ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡಿದ್ದರು. ಆದರೂ ಪರಿಸ್ಥಿತಿಯೇನು ಸುಧಾರಿಸಲಿಲ್ಲ.

ಅಕ್ರಮ ಗಣಿಗಾರಿಕೆಗೆ ಬಿತ್ತು ಗುನ್ನ

ಇಳಕಲ್‌ನಲ್ಲಿ ಈ ಪರಿ ಗ್ರಾನೈಟ್ ಫ್ಯಾಕ್ಟರಿಗಳು ಹಬ್ಬುವುದಕ್ಕೆ ಮೂಲ ಕಾರಣ ಸುತ್ತಲೂ ನಡೆಯುತ್ತಿರುವ ಕಲ್ಲಿನ ಗಣಿಗಾರಿಕೆಗಳು. ಇಲ್ಲಿನ ಕೆಂಪು ಶಿಲೆ ಜಗತ್ ಪ್ರಸಿದ್ಧಿ ಪಡೆದಂಥದ್ದು. ಇದಕ್ಕೆ ವಿದೇಶಗಳಲ್ಲಿ ಭಾರೀ ಬೇಡಿಕೆ ಇದೆ. ಇಂತಹ ಅಮೂಲ್ಯ ಸಂಪತ್ತನ್ನು 1980ರ ದಶಕದಿಂದಲೆ ಹರಾಜು ಹಾಕುತ್ತ ಬರಲಾಗಿದೆ. ಲಾಭದ ಆಸೆಗೆ ಬಿದ್ದ ಕೆಲ ರಾಜಕಾರಣಿಗಳು ಕಲ್ಲು ಗಣಿಗಾರಿಕೆಯನ್ನೇ ಒಂದು ದೊಡ್ಡ ಮಾಫಿಯಾ ಮಾಡಿಟ್ಟಿದ್ದಾರೆ. ಭಜಂತ್ರಿ ಎಂಬ ಡಬಲ್ ಮನಿ ದುಷ್ಟನೊಬ್ಬ ಸಂದೇಹಾಸ್ಪದವಾಗಿ ಸಾಯುವವರೆಗೆ ಇದರ ಕರಾಳತೆ ಜನರಿಗೆ ತಿಳಿದಿರಲಿಲ್ಲ. ಆ ನಂತರವೇ ಗ್ರಾನೈಟ್ ಲೋಕದ ಮಸಲತ್ತು ರಾಜ್ಯದ ಜನರಿಗೆ ಗೊತ್ತಾದದ್ದು. ಕೆಲ ಕಾಲದ ನಂತರ ಭಜಂತ್ರಿಯ ಸಾವಿನ ಸುದ್ದಿ ಮಸುಕಾಗಿದ್ದೆ ತಡ ಕ್ವಾರಿ ಗಣಿಗಾರಿಕೆ ಮೊದಲಿಗಿಂತಲೂ ಪುಷ್ಕಳವಾಗಿ ಹಬ್ಬುತ್ತಾ ಬಂದಿತ್ತು.

ಇಪ್ಪತ್ತು ವರ್ಷಗಳ ಹಿಂದೆ ಭೂ ಮತ್ತು ಗಣಿ ಇಲಾಖೆ ನಿಗದಿತ ಸ್ಥಳಗಳಲ್ಲಿ ನಿರ್ದಿಷ್ಟವಾದ ಕಲ್ಲು ಕೊರೆಯಲು 32 ಕಂಪನಿಗಳಿಗೆ ಮಾತ್ರ ಪರವಾನಗಿ ನೀಡಿತ್ತು. ಆದರೆ ಅವುಗಳಲ್ಲಿ 23 ಕಂಪನಿಗಳು ತಮ್ಮ ಪರವಾನಗಿಯನ್ನು ನವೀಕರಿಸಿಕೊಳ್ಳುವ ಗೋಜಿಗೇ ಹೋಗಿಲ್ಲ. ಅವೆಲ್ಲಾ ಈಗ ಅಕ್ರಮ ಗಣಿಗಾರಿಕೆ ನಡೆಸುತ್ತಿವೆ. ಅಲ್ಲದೆ ತಮಗೆ ನೀಡಲಾಗಿರುವ ಜಾಗದಲ್ಲಿ ಮಾತ್ರವೇ ಕಲ್ಲು ಕೀಳದೆ ಸರ್ಕಾರಿ ಜಮೀನಿನಲ್ಲಿ, ಅರಣ್ಯ ಇಲಾಖೆಯ ಜಾಗದಲ್ಲಿ, ಕೆರೆ-ಹಳ್ಳ



ಏನೊಂದನ್ನು ಬಿಡದೆ ಗೆಬರುತ್ತಿದ್ದಾರೆ. ಇದು ಸಾಲದೆಂಬಂತೆ ಅಲ್ಪ ಅಂತರದಲ್ಲಿರುವ ರಾಯಚೂರಿನ ಮುದಗಲ್, ಕುಷ್ಟಗಿಯ ಲಿಂಗಸೂರಿನಲ್ಲೂ ಕಲ್ಲು ಕೀಳುವ ಜಾಲ ಪಸರಿಸಿಕೊಂಡಿದೆ. ಹಾಲಿ ಶಾಸಕ ಕಾಶಪ್ಪ ಅಂಡ್ ಬ್ರದರ್ಸ್, ಮಾಜಿ ಶಾಸಕ ದೊಡ್ಡನಗೌಡ ಪಾಟೀಲ್, ದಿಲಿಪ ದೇವಗಿರಿಕರ, ವೆಂಕಟೇಶ್ ಸಾಕಾ, ಉಸ್ಮಾನಗಣಿ ಹುಮ್ನಾಬಾದ, ಹುಲಗೇರಿ ಬಸಯ್ಯಾ ಹಿರೇಮಠ, ಮಂಜುನಾಥ್ ಶೆಟ್ಟಿ, ನವನಿತ ಬೊರಾ, ಮೋಹನ ಹೊಸಮನಿ- ಹೀಗೆ ಅಕ್ರಮ ಗಣಿಗಾರಿಕೆ ನಡೆಸುವವರ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇದರಲ್ಲಿ ಎಲ್ಲಾ ಪಕ್ಷದವರೂ ಶಾಮೀಲು.

ಹಾಲಿ ಶಾಸಕ ವಿಜಯಾನಂದರ ತಂದೆ ಎಸ್.ಆರ್.ಕಾಶಪ್ಪನವರ್ ಹುನಗುಂದ ಕ್ಷೇತ್ರವನ್ನು ಹತ್ತಾರು ವರ್ಷ ಶಾಸಕನಾಗಿ ಪ್ರತಿನಿಧಿಸಿದ್ದಂತವರು. ಗ್ರಾನೈಟ್ ದಂಧೆ ಚಿಗೊರೊಡೆಯಲು ಎಸ್.ಆರ್ ಮೂಲ ಕಾರಣ. ಈಗವರ ಮಕ್ಕಳು ಅದನ್ನು ದೊಡ್ಡ ಮಟ್ಟದಲ್ಲಿ ಮುಂದುವರೆಸಿಕೊಂಡು ಬರುತ್ತಿದ್ದಾರಷ್ಟೆ. ದಿವಂಗತ ಎಸ್‌ಆರ್ ಇವರು ಅಂದೇ ಪರಿಸರ-ಜನಪರ ಕಾಳಜಿ ವಹಿಸಿದ್ದರೆ ಇಳಕಲ್‌ಗೆ ಈ ಅಧೋಗತಿ ಬರುತ್ತಿರಲಿಲ್ಲ.

ಯಥಾ ರಾಜ ತಥಾ ಪ್ರಜೆ ಎನ್ನುವಂತೆ ಅವರ ಮಗ ವಿಜಯಾನಂದ ಕಾಶಪ್ಪನದೂ ಅದೇ ದಾರಿ. ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬರುವ ಸಂದರ್ಭದಲ್ಲಿ ಆಲಮಟ್ಟಿ ಹಿನ್ನೀರನ್ನು ಜಿಂದಾಲ್ ಎಂಬ ಮಾರ್ವಾಡಿಯ ಬಳ್ಳಾರಿ ಸ್ಟೀಲ್ ಫ್ಯಾಕ್ಟರಿಗೆ ನಿರಂತರವಾಗಿ ಸರಬರಾಜು ಮಾಡುವುದನ್ನು ವಿರೋಧಿಸಿ ಮುಂಚೂಣಿಗೆ ಬಂದ ವಿಜಯಾನಂದ ಇಂದು ಮರೋಳ ಏತ ನೀರಾವರಿ ಬಗ್ಗೆ, ಗ್ರಾನೈಟ್ ಮಾಫಿಯಾದ ಪರಿಸರ ಮಾಲಿನ್ಯದ ಬಗ್ಗೆ, ತ್ಯಾಜ್ಯ ಧೂಳಿನಿಂದಾಗುತ್ತಿರುವ ಹೆದ್ದಾರಿ ಅಪಘಾತಗಳ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳುತ್ತಿಲ್ಲ. ಇದೇ ಕಾರಣಕ್ಕೆ ತನ್ನ ತಮ್ಮ ದೇವಾನಂದನನ್ನೇ ನಗರಸಭೆ ಅಧ್ಯಕ್ಷನ ಸ್ಥಾನದಲ್ಲಿ ಕೂರಿಸಿ ಗ್ರಾನೈಟ್ ದಂಧೆಯನ್ನು ಭರ್ಜರಿಯಾಗಿ ನಡೆಸುತ್ತಿದ್ದಾನೆ.

ಮತ್ತೊಬ್ಬ ಗ್ರಾನೈಟ್ ಕುಳ ವೆಂಕಟೇಶ್ ಸಾಕಾ ಕೂಡಾ ಪೊಲಿಟಿಕಲ್ ಬೇಸ್ ಇರುವಂತವನೇ. ಈತನ ತಂದೆ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಂತವರು. ಹಾಗಾಗಿ ಕಾಂಗ್ರೆಸ್ ಸಖ್ಯದ'ಜೊತೆಗೆ ಹಿಂದಿನ ಬಿಜೆಪಿ ಶಾಸಕ ದೊಡ್ಡನಗೌಡನ ಆಪ್ತತೆಯನ್ನೂ ಗಿಟ್ಟಿಸಿಕೊಂಡಿದ್ದಾನೆ. ಈ ದೊಡ್ಡನಗೌಡ ಪಾಟೀಲ್‌ನದೆ ಮುದಗಲ್‌ನಲ್ಲಿ ಅನೇಕ ಕ್ವಾರಿಗಳಿವೆ. ಆಚ್ಚರಿಯ ಸಂಗತಿಯೆಂದರೆ ಈತ ತಮಿಳುನಾಡಿನ ಜಯಲಲಿತಳ ಅಂದಕಾಲತ್ತಿಲ್ ಸ್ನೇಹಿತೆ ಶಶಿಕಲಾ ನಟರಾಜನ್ ಜೊತೆ ಪಾಲುದಾರಿಕೆಯೂ ಇದೆ. ಆ ಕಾರಣಕ್ಕೆ ಆಗ ಶಾಸಕನಾಗಿದ್ದ ದೊಡ್ಡನಗೌಡ, ಸಾಕಾಗೆ ಸಾಕುಸಾಕು ಎನ್ನುವಷ್ಟು ಸಹಾಯಹಸ್ತ ನೀಡಿದ್ದ. ಅಲ್ಲದೆ ಅದೇ ಶಾಸಕನ ಕುಲಬಾಂಧವ ಕಂ ಚಡ್ಡಿ ಕಾರ್ಯಕರ್ತ ಆಗಿನ ಅಸಿಸ್ಟೆಂಟ್ ಕಮೀಷನರ್ ಗೋವಿಂದ ರೆಡ್ಡಿಯೂ ವೆಂಕಟೇಶ್ ಸಾಕಾಗೆ ಎನ್‌ಎಚ್-13 ಪಕ್ಕದಲ್ಲೆ ಕಾನೂನುಬಾಹಿರ ಬ್ಲಾಸ್ಟಿಂಗ್‌ಗೆ ಗ್ರೀನ್‌ಸಿಗ್ನಲ್ ನೀಡಿದ್ದಲ್ಲದೆ ಸರ್ಕಾರಿ ಎರಡು ಎಕರೆ ಜಮೀನನ್ನು ಗೋಲ್‌ಮಾಲ್ 'ಮಾಡಿ ಸಾಕಾ ಹೆಸರಿಗೆ ವರ್ಗಾಯಿಸಿಕೊಟ್ಟಿದ್ದ. ನಂತರ ಅದೇ ಜಮೀನಿನ 200 ಮೀಟರ್ ಜಾಗವನ್ನು ಸರ್ಕಾರದಿಂದ ಸ್ವಾಧೀನ ಪಡಿಸಿಕೊಂಡಂತೆ ನಾಟಕ ಮಾಡಿದ ಎ.ಸಿ. ಗೋವಿಂದ ರೆಡ್ಡಿ, ವೆಂಕಟೇಶ್ ಸಾಕಾಗೆ ಪರಿಹಾರಧನವಾಗಿ 51 ಲಕ್ಷದ ಚೆಕ್ ಸಂದಾಯವಾಗುವಂತೆ ನೋಡಿಕೊಂಡಿದ್ದ ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ ಅಂದ್ರೆ ಇದೇ ಅಲ್ಲವೇ?

ಹೀಗೆ ಎಗ್ಗಿಲ್ಲದಂತೆ ರಾಜಕಾರಣಿಗಳ ಬಿಗಿ ಬಂದೋಬಸ್ತ್‌ನಲ್ಲಿ ಸಾಗುತ್ತಿದ್ದ ಅಕ್ರಮ ಕಲ್ಲು ಗಣಿಗಾರಿಕೆಗೆ ಕೊನೆಗೂ ಬೀಗ ಬಿದ್ದಿದೆ. ಅದಕ್ಕೆ ಕಾರಣವಾದದ್ದು ಅಖಿಲ ಭಾರತ ಜನಜಾಗೃತ ವೇದಿಕೆಯ ನಾಗರಾಜ್ ಹೊಂಗಲ್ ಮತ್ತು ಅಖಿಲ ಭಾರತ ಭ್ರಷ್ಟಾಚಾರ ನಿರ್ಮೂಲನಾ ಸಮಿತಿ ಅಣ್ಣಾಜೀ ರಾವ್‌ರ ಹೋರಾಟ. ಈ ಇಬ್ಬರೂ ಸರ್ಕಾರದ ಬೊಕ್ಕಸಕ್ಕಾಗುತ್ತಿರುವ ಲುಕ್ಸಾನು ಮತ್ತು ಪರಿಸರ ಹಾನಿಯ ಕುರಿತು ದಾಖಲೆ ಕಲೆಹಾಕಿ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದು ತಕ್ಕಮಟ್ಟಿನ 'ಪರಿಣಾಮ ತೋರುತ್ತಿದೆ. ಮೇ 31ರಂದು ಲೋಕಾಯುಕ್ತ ಎಸ್.ಪಿ. ಪ್ರಭಾಕರ್, ಡಿವೈಎಸ್‌ಪಿ ತೋಳಮಟ್ಟಿ ತಂಡ ಇಳಕಲ್‌ನ ಅಕ್ರಮ ಗಣಿಗಾರಿಕೆ ಕ್ವಾರಿಗಳಿಗೆ ದಾಳಿಯಿಟ್ಟು ಮೆಷಿನ್‌ಗಳನ್ನು ಜಪ್ತಿ ಮಾಡಿದ್ದಲ್ಲದೆ ಭೂ ಮತ್ತು ಗಣಿ ಇಲಾಖೆಯ ಜಿಯಾಲಜಿಸ್ಟ್ ಅಧಿಕಾರಿ ಸಿದ್ದಪ್ಪನನ್ನೂ ಸೇರಿದಂತೆ ಪರವಾನಗಿ ಇಲ್ಲದೆ ಗಣಿಗಾರಿಕೆ ನಡೆಸುತ್ತಿದ್ದ ಬಸಯ್ಯ ಹಿರೇಮಠ ಹಾಗು ಸಹೋದರ ಸಂಗಯ್ಯನನ್ನು ಒದ್ದು ಕಂಬಿ ಹಿಂದೆ ಕಳಿಸಿದ್ದಾರೆ. ಇನ್ನು ಅನೇಕರನ್ನು ಬಂಧಿಸುವ ತಯ್ಯಾರಿ ನಡೆದಿದೆ. ಸುದ್ದಿ ತಿಳಿದ ಕಳ್ಳ ಗಣಿ ಮಾಲಿಕರು ಇಳಕಲ್‌ನಿಂದ ನಾಪತ್ತೆಯಾಗಿದ್ದಾರೆ. ಪರವಾನಗಿ ಹೊಂದಿರುವ ಬೆರಳೆಣಿಕೆಯಷ್ಟು ಕ್ವಾರಿಗಳು ಮಾತ್ರ ಗಣಿಕಾರಿಗೆ ನಡೆಸುತ್ತಿರೋದರಿಂದ ಗ್ರಾನೈಟ್ ಕಂಪನಿಗಳಿಗೆ ಬರುತ್ತಿದ್ದ ಸರಕು ಕಡಿಮೆಯಾಗಿ ಅವುಗಳ ಉಪಟಳವೂ ತಕ್ಕ ಮಟ್ಟಿಗೆ ತಗ್ಗಿದೆ.

ಹಾಗಂತ ಗ್ರಾನೈಟ್ ಮಾಫಿಯಾ ಸಂಪೂರ್ಣವಾಗಿ ಸ್ತಬ್ಧವಾಗಿ ಬಿಡುತ್ತದೆಂದು ನಿರೀಕ್ಷಿಸಲಿಕ್ಕಾಗದು. ಯಾಕೆಂದರೆ ಇಂತಹ ದಾಳಿಗಳನ್ನು ನಿಭಾಯಿಸುವ ಪರಿ ಅವರಿಗೆ ಚೆನ್ನಾಗಿಯೇ ಕರಗತವಾಗಿರುತ್ತದೆ. ಒಂದೊಮ್ಮೆ ಗ್ರಾನೈಟ್ ಮಾಫಿಯಾದ ನಿಜವಾದ ನೆರಳುಗಳಾದ ಪರಮಭ್ರಷ್ಟ ಎ.ಸಿ. ಶಂಕರ್ ವನಕಿಹಾಳ, ಪರಿಸರ ಮಾಲಿನ್ಯ ಅಧಿಕಾರಿ ಮನಿಯಾರ್, ದಯಾನಂದ ಕಾಶಪ್ಪ ನಗರಸಭೆ ಕಮೀಷನರ್ ಮಠ ಮೊದಲಾದವರನ್ನು ಬಂಧಿಸಿದ್ದರೆ ಅಂಥ ನಿರೀಕ್ಷೆಗೆ ಅರ್ಥವಿರುತ್ತಿತ್ತು. ಈಗವರೆಲ್ಲಾ ಹೆಡೆ ತುಳಿದ ಹಾವಿನಂತೆ ಬುಸುಗುಡುತ್ತಿದ್ದಾರೆ. ಅಧಿಕಾರ ದುರುಪಯೋಗಪಡಿಸಿಕೊಂಡು ಹೋರಾಟಗಾರರಾದ ನಾಗರಾಜ್ ಹೊಂಗಲ್ ಮತ್ತು ಅಣ್ಣಾಜೀ ರಾವ್‌ರನ್ನೇ ನಿವಾರಿಸಿಕೊಂಡರೂ ಆಚ್ಚರಿಯಿಲ್ಲ. ಈಗಾಗಲೇ ಗ್ರಾನೈಟ್ ಧಣಿಗಳಲ್ಲಿ ಒಬ್ಬನಾದ ಉಸ್ಮಾನಗಣಿ ಹುಮ್ನಾಬಾದ್ 'ನಾವು ಮಾಡಿದ್ದು ಸ್ವಲ್ಪ ಅಪರಾಧ. ಅದನ್ನೇ ಕೆಲವರು ಅಕ್ಷಮ್ಯ ಅಪರಾಧ ಎನ್ನುವಂತೆ ಬಿಂಬಿಸಿದ್ದಾರೆ.

ಅದನ್ನೇ ನಂಬಿಕೊಂಡು ಮಾಧ್ಯಮಗಳು ಸುದ್ದಿ ಮಾಡುತ್ತಿವೆ, ಲೋಕಾಯುಕ್ತರು ದಾಳಿ ಮಾಡಿದ್ದಾರೆ' ಅಂತ ಪತ್ರಿಕಾ ಹೇಳಿಕೆ ಬಿಸಾಕಿದ್ದಾನೆ. ತಮ್ಮ ತಪ್ಪನ್ನು 'ಸ್ವಲ್ಪ ಅಪರಾಧ' ಎಂದು ಸಮರ್ಥಿಸಿಕೊಳ್ಳುವ ಇಂತವರನ್ನು ವ್ಯವಸ್ಥಿತವಾಗಿ ಮಟ್ಟಹಾಕುವ ಕೆಲಸವನ್ನು ಲೋಕಾಯುಕ್ತ ಮಾಡಬೇಕಿದೆ. ಒಂದು ಕಾಲದಲ್ಲಿ ಈತ ಖಾಲಿ ಬಾಟಲ್‌ನ ಗುಜರಿ ವ್ಯಾಪಾರ ಮಾಡುತ್ತಿದ್ದ. ಎಸ್.ಆರ್. ಕಾಶಪ್ಪನವರ ವಿರೋಧಿ ಗುಂಪಿನ ಭಿನ್ನಮತ ಕಾಂಗ್ರೆಸ್‌ನ ನಾಯಕನಾಗಿ ಗುರುತಿಸಿಕೊಂಡ ಉಸ್ಮಾನಗಣಿ ಕೇವಲ 15-20 ವರ್ಷದಲ್ಲಿ ಅಗಣಿತ ಆಸ್ತಿಯ ಒಡೆಯನಾಗಿದ್ದಾನೆ. ಇಂತವರಿಂದಲೇ ಗ್ರಾನೈಟ್ ಮಾಫಿಯಾ ತುಂಬಿ ತುಳುಕಾಡುತ್ತಿದೆ. ಈ ಕಲು ಖದೀಮರಿಗೆಲ್ಲಾ ಶಾಶ್ವತ ಪಾಠ ಅದ್ಯಾವಾಗ ಸಿದ್ಧವಾಗುತ್ತೋ ಕಾದು ನೋಡಬೇಕು.

● ಮೇಘರಾಜ್

ಇಳ'ಕಲ್' ಸೀರೆಗೆ ಗ್ರಾನೈಟ್ ಧೂಳು

ಅಕ್ರಮ ಕಲ್ಲು ಕ್ವಾರಿಗಳು ಮತ್ತು ಗ್ರಾನೈಟ್ ಕಟಿಂಗ್ ಮಷಿನ್‌ಗಳಿಂದಾಗಿ ಇಳಕಲ್‌ನ ಸಾಂಪ್ರದಾಯಿಕ ಸೊಬಗಿನ ಸೀರೆ ನೇಯ್ಗೆ ಉದ್ಯಮವೇ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಸಹಸ್ರಾರು ಕಟಿಂಗ್ ಮಷಿನ್‌ಗಳಿಗೆ ವಿದ್ಯುತ್ ಪೂರೈಸುವುದಕ್ಕೋಸ್ಕರ ಇಲ್ಲಿಯ ಮೂಲಕಸುಬು ಸೀರೆಯ ನೇಕಾರರ ಪವರ್‌ಲೂಮ್‌ಗಳಿಗೆ ವಿದ್ಯುತ್ತನ್ನೇ ಕೆಪಿಟಿಸಿಎಲ್ ಸರಿಯಾಗಿ ನೀಡುತ್ತಿಲ್ಲ. ಎಷ್ಟೋ ಪವರ್‌ಲೂಮ್‌ಗಳನ್ನು ನೇಕಾರರು ಗುಜುರಿಗೆ ಹಾಕಿ ಗ್ರಾನೈಟ್ ಕಟಿಂಗ್ ಮಷಿನ್‌ಗಳತ್ತ ಮುಖ ಮಾಡಿದ ನಿದರ್ಶನಗಳಿವೆ. ನಿಯಮದ ಪ್ರಕಾರ ಕಟಿಂಗ್ ಮಷಿನ್‌ಗಳಿಗೆ 12 ಗಂಟೆ ಮಾತ್ರವೇ ವಿದ್ಯುತ್ ನೀಡಬೇಕಾಗಿದ್ದರೂ ವಿದ್ಯುತ್ ಇಲಾಖೆ ದಿನದ 24 ಗಂಟೆಯೂ ಈ ಫ್ಯಾಕ್ಟರಿಗಳಿಗೆ ಪವರ್ ಹರಿಸುತ್ತಿದೆ. ಹಾಗಾಗಿ ನೇಕಾರಿಕೆಗೆ ವಿದ್ಯುತ್‌ನ ಕಣ್ಣಾಮುಚ್ಚಾಲೆಯೇ ಗತಿ. ಒಮ್ಮೊಮ್ಮೆ ದಿನಂಪೂರ್ತಿ ವಿದ್ಯುತ್ ಇರುವುದೇ ಇಲ್ಲ. ಹಾಗಾಗಿ ಇಳಕಲ್ ಸೀರೆಯ ಸೊಬಗೇ ನಾಶವಾಗುತ್ತಿದೆ.

ಬತ್ತೀಸರಾಗದ ಶಿವಪ್ರಕಾಶ್ ಸರಿಹೋಗಿಲ್ಲವಂತಲ್ಲಾ

ಥೂತ್ತೇರಿ

ಯಾಹೂ

'ರಾಜಕಾರಣಿಯ ಕೈಗೆ ಎಷ್ಟೇ ಅರ್ಜಿ ತುರುಕಿ ಹಲ್ಲು ಗಿಂಜಿದರೂ ಕೂಡ ಅಂತಿಮವಾಗಿ ಅವನು ಕೂಡ ಸದರಿ ಅರ್ಜಿಗಳನ್ನು ಅಧಿಕಾರಿಯ ಕೈಗೆ ಕೊಟ್ಟು, "ಇದನ್ನ ಮಾಡಿ, ಅಥವಾ ಇದನ್ನು ಮಾಡಲು ಸಾಧ್ಯವೆ? ಇದು ನಮಗೆ ಬೇಕಾದವರ ಅರ್ಜಿ" ಎಂದು ಹಲ್ಲುಗಿಂಜಬೇಕಾಗಿ ದೆಯಂತಲ್ಲಾ. ಅಧಿಕಾರಿಗಳ ಸಂಬಳ ಬಂದು ಬ್ಯಾಂಕಿಗೆ ಬೀಳುತ್ತೆ ಗಿಂಬಳ ಕೈಸೇರುತ್ತೆ. ಗಿಂಬಳವೇ ಇಲ್ಲದೆ ಕೆಲಸ ಮಾಡಲು ಸಾಧ್ಯವೇ ಇಲ್ಲದಂತಹ ಮನೋಸ್ಥಿತಿಗೆ ಬಹುತೇಕ ಅಧಿಕಾರಿಗಳು ತಲುಪಿದ್ದಾರೆ. ಇಂತಹ ಅಧಿಕಾರಿಗಳು ಸಿದ್ದರಾಮಯ್ಯನ ಸರ್ಕಾರ ಇದ್ದಲ್ಲೇ ಇರುವಂತೆ ಮಾಡಿಬಿಟ್ಟಿ ದ್ದಾರಂತಲ್ಲಾ. ಇಂತಹ ಅಧಿಕಾರಿಗಳ ಮುಖ ನೋಡಿದ ಕೂಡಲೇ "ಹೊಟ್ಟೆಗೆ ಏನು ತಿಂತೀರಿ ನೀವು" ಎಂದು ಸಿದ್ದು ಕೇಳಿದರಂತಲ್ಲಾ. ಸರಕಾರಿ ಕೆಲಸಕ್ಕೆ ಸೇರಿದಂದಿನಿಂದಲೂ ಕಸವನ್ನೇ ತಿನ್ನುತ್ತ ಬಂದ ಅಧಿಕಾರಿಗಳು ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಹಾಗೇ ನಿಂತಿದ್ದರಂತಲ್ಲಾ. ಅವರನ್ನು ಕೂರಲು ಹೇಳದ ಸಿದ್ದರಾಮಯ್ಯ "ಬೆಂಗಳೂರು ಕಸದ ಬಗ್ಗೆ ಏನು ಮಾಡಿದ್ದಿರಿ? ಎಲ್ಲಿ ನಿಮ್ಮ ಡೈರಿಗಳು? ಅದರೊಳಗಿನ ಟಿಪ್ಪಣಿ ತೋರಿಸಿ" ಎಂದರಂತಲ್ಲಾ. ಸಾಮಾನ್ಯವಾಗಿ ಭ್ರಷ್ಟ ಮೈಗಳ್ಳ ಅಧಿಕಾರಿಗಳಿಗೆ ಯಾವ ಅವಮಾನವೂ ಆಗುವುದಿಲ್ಲ. ನಾಚಿಕೆ ಹೇಸಿಕೆಯಿಲ್ಲದ ಅಧಿಕಾರಿಗಳು ಸಿದ್ದರಾಮಯ್ಯನ ಮಾತಿಗೆ ಕಿವುಡಾದವರಂತೆ ನಿಂತಿದ್ದರಂತಲ್ಲಾ. ಸದರಿ ಪ್ರಸಂಗ ಕನ್ನಡದ ಖ್ಯಾತ ಸಾಹಿತಿ ಬರಗೂರು ರಾಮಚಂದ್ರಪ್ಪನವರನ್ನ ಶಾನೆ ಕೆರಳಿಸಿದೆಯಂತಲ್ಲಾ. ಅದಕ್ಕೆ ಅವರು ಕೂಡಲೇ ಪ್ರತಿಕ್ರಿಯಿಸಿ ಅಧಿಕಾರಿಗಳನ್ನ ನಿಲ್ಲಿಸಿ ಪ್ರಶ್ನಿಸಬಾರದು, ಕೂರಿಸಿ ಕಾಫಿ ತರಿಸಿ ಕುಡಿಸಿ, ಸದ್ಯ ಬೆಂಗಳೂರಲ್ಲಿ ಬಿದ್ದಿರುವ ಕಸ ಎಷ್ಟು ಟನ್ ಆಗಬಹುದು ಎಂಬ ಲೆಕ್ಕ ಕೊಡಿ ಎನ್ನಬೇಕಾಗಿತ್ತಂತಲ್ಲಾ, ಥೂತ್ತೇರಿ!

* * *

'ಬತ್ತೀಸರಾಗ' ಬರೆದು ಮನೋವೈದ್ಯರನ್ನು ಭೇಟಿ ಮಾಡುವ ಹಂತಕ್ಕೆ ಬಂದಿದ್ದ ಎಚ್.ಎಸ್. ಶಿವಪ್ರಕಾಶ್ ಎಂಬ ಕವಿ ಇನ್ನೂ ಸರಿಹೋಗಿಲ್ಲವೆಂಬ ಸ್ಪಷ್ಟ ಸಾಕ್ಷ್ಯಾಧಾರ ಗಳೇ ಸಿಗತೊಡಗಿವೆಯಂತಲ್ಲಾ. ಅನಂತಮೂರ್ತಿಯವರು ಭೂತದ ಕಲ್ಲಿನ ಮೇಲೆ ಮೂತ್ರ ಸಿಡಿಸಿದ್ದನ್ನು ಕೇಳಿ ಬೆಚ್ಚಿ ಬಿದ್ದಿರುವ ಶಿವಪ್ರಕಾಶ, ಅನಂತಮೂರ್ತಿ ತನ್ನ ತಲೆಯ ಮೇಲೆ ಉಚ್ಚೆ ಹುಯ್ದರೆಂಬಂತೆ ಬೊಬ್ಬೆ ಹೊಡೆದುಕೊಂಡು ಬತ್ತೀಸರಾಗದಲ್ಲಿ ಬರೆಯುತ್ತಿರುವುದನ್ನು ನೋಡಿದರೆ, ಈತ ಬೆಲ್ಜಿಯಂ ಬಾಲಗಂಗಾಧರನ ಪ್ರಭಾವಕ್ಕೆ ಸಿಕ್ಕಿ ಹಾಳಾಗಿ ಹೋಗುತ್ತಿರುವಂತೆ ಕಾಣುತ್ತಿದೆಯಲ್ಲಾ. ಎಲ್ಲಕ್ಕಿಂತ ಮುಖ್ಯ ವಾಗಿ ಈ ವಿದ್ವಾಂಸ ಅನಂತಮೂರ್ತಿಯವರ ಲೇಖನವನ್ನೇ



ಓದದೆ ಬೀದಿ ಮಾತಿಗೆ ಪ್ರತಿಕ್ರಿಯಿಸಿ ಬುದ್ಧಿ ಮಾತು ಹೇಳಿಸಿಕೊಳ್ಳುವಂತಾಗಿದ್ದಾನಲ್ಲ, ಥೂತ್ತೇರಿ!!

* * *

ಹಾಡುಹಗಲೇ ಗಾಂಧೀಜಿ ಕೊಂದವರು ಅಷ್ಟೇ ಭಂಡು ಧೈರ್ಯದಿಂದ ಈಗ ದೇಶವನ್ನೇ ಕೈಗೆ ತೆಗೆದುಕೊಂಡು ಮುಂದೇನು ಮಾಡುವುದೆಂದು ಯೋಚಿಸುತ್ತಿದ್ದಾರಲ್ಲಾ, ಇದೇ ಹೊತ್ತಿಗೆ ಅತ್ತ ಇರಾಕ್ ದೇಶವನ್ನು ಸಂಪೂರ್ಣ ಸುನ್ನಿ ಇರಾಕ್ ಮಾಡಲೆಂದು ಹೊರಟ ಸೈತಾನರು, ಶಿಯಾಗಳನ್ನು ಹಿಡಿದು ಸಾಮೂಹಿಕವಾಗಿ ಕೊಂದು ಅದ್ದೂರಿಯಾಗಿ ರಂಜಾನ್ ಆಚರಿಸುವ ತಯಾರಿ ನಡೆಸಿವೆಯಂತಲ್ಲಾ. ಇತ್ತ ಸಾಬರು ಸತ್ತರೆ ಸಂತೋಷ ಪಡುವ ಪುರೋಹಿತಶಾಹಿ ಚೆಡ್ಡಿ ವೀರರು "ನೋಡ್ರಿ ಆ ಮುಸ್ಲಿಂ ದೇಶಗಳಲ್ಲಿ ಸ್ವಧರ್ಮ ದಲ್ಲಿನ ಇನ್ನೊಂದು ಪಂಗಡವನ್ನೇ ಸಹಿಸದೆ ನಿರ್ನಾಮ ಮಾಡುತ್ತಿದ್ದಾರೆ. ಇಂಥವರು ಅನ್ಯ ಧರ್ಮವನ್ನು ಸಹಿಸಿಕೊಳ್ಳು ವುದು ನಿಜವೆ. ನಾವು ಯಾಕೆ ಮುಸ್ಲಿಂ ವಿರೋಧಿಗಳೆಂಬುದು ಈಗಲಾದರು ಗೊತ್ತಾಯ್ತಲ್ಲಾ" ಎಂದು ಕೇಳುತ್ತಿದ್ದಾರಂತಲ್ಲಾ. ಅಷ್ಟೇ ಅಲ್ಲದೆ "ನಮ್ಮ ಮೋದಿ ಗುಜರಾತಿನಲ್ಲಿ ಮುಸ್ಲಿಮರ ಮಾರಣಹೋಮ ಮಾಡಿದರು ಎಂದು ದೂರಿದರಲ್ಲಾ, ಈಗ ಮುಸ್ಲಿಮರೆ ಮುಸ್ಲಿಮರ ರುಂಡ ಹಾರಿಸುತ್ತಿದ್ದಾರೆ. ಮಸೀದಿ ಸ್ಫೋಟಿಸುತ್ತಿದ್ದಾರೆ. ಇದಕ್ಕೇನು ಹೇಳುತ್ತೀರಿ" ಎಂದು ರೋಮಾಂಚನದಿಂದ ಭಾಷಣ ಬಿಗಿಯುತ್ತಿವೆ ಯಂತಲ್ಲಾ. ಇದನ್ನು ಕೇಳಿಸಿಕೊಂಡ ಶೂದ್ರ ಚೆಡ್ಡಿಗಳು "ಈ ಹಿರಿಯ ಚೆಡ್ಡಿಗಳು ಹೇಳುವುದರಲ್ಲೂ ಸತ್ಯ ಇದೆ. ಈ ಸಾಬರು ಜಾಸ್ತಿಯಾದರೆ ಯಾವ ದೇಶಕ್ಕೂ ಸುಖ ಸಿಗುವುದಿಲ್ಲ" ಎಂದು ಯೋಚಿಸುತ್ತಿದ್ದಾರಂತಲ್ಲಾ. ಇದೆಲ್ಲದರ ಮಧ್ಯೆ ಭಾರತದ ಬಹುತೇಕ ಸಾಬರು ತಾವಾಯಿತು, ತಮ್ಮ ಧರ್ಮ ನಿರ್ದೇಶಿತ ಬದುಕಾಯಿತು ಎಂಬಂತೆ ಆಹಾರ ಸಂಪಾದನೆ, ಸಂತಾನಾಭಿವೃದ್ಧಿ ಮತ್ತು ವೈರಿಗಳಿಂದ ತಪ್ಪಿಸಿಕೊಳ್ಳುವುದು, ಇತ್ಯಾದಿ ಜೀವಿ ಸಹಜ ಬಾಳ್ವೆಯಲ್ಲಿ ಸುಖವಾಗಿಯೇ ಇದ್ದಾರಂತಲ್ಲಾ. ಇದ್ದುದರಲ್ಲಿ ಚೆಡ್ಡಿಗಳೇ ಸದಾ ಅಸಂತುಷ್ಟರಾಗಿ ಅತ್ತ ಮದುವೆಯೂ ಇಲ್ಲ, ಇತ್ತ ಸುಖ ಸಂಸಾರವೂ ಇಲ್ಲ, ವ್ಯಭಿಚಾರ ಮಾಡೋಣವೆಂದರೆ ಅದಕ್ಕೂ ತಾಕತ್ತಿಲ್ಲ ಎಂದು ಅಸ್ವಸ್ಥಗೊಂಡಿವೆಯಂತಲ್ಲಾ, ಥೂತ್ತೇರಿ!!

* * *

ಇದ್ದಕ್ಕಿದ್ದಂತೆ ವಾಟಿಸ್ಸೆ ಮಾತನಾಡಿಸಿ, ಅವನ ಚಟುವಟಿಕೆ ಬಗ್ಗೆ ಕೇಳಬೇಕೆನಿಸಿತಲ್ಲಾ. ಆದ್ದರಿಂದ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಟರ್‌ರ್... ಟರ್‌ರ್..."

"ಹಲೋ ವಾಟಿಸ್ಸೆ ಸ್ಪೀಕಿಂಗ್."

"ನಾನು ವಾಟಿಸ್ಸೆ, ಹ್ಯಂಗಿದ್ದಿ?"

"ಹ್ಯಂಗಿದ್ದಿ ಅಂದ್ರೆ ಏನ್ ಮೀನಿಂಗು ಸಾರ್?"

"ಸುಮ್ಮನೆ ಕೇಳಿದೆ. ಜುಮ್ಮಿ ಹ್ಯಂಗವ್ಳೆ?"

"ಜುಮ್ಮಕ್ಕನಿಗೆ ಆಪರೇಷನ್ ಆಯ್ತು, ಅದೇ ಟೈಮಿಗೆ ಉಗ್ರಿ ಮದುವೆನೂ ಆಯ್ತು, ಅಂಗಾಗಿ ಉಗ್ರಿ ಮದುವೇಲಿ ನಮ್ಮಕ್ಕ ಓಡಾಡಕ್ಕಾಗಲೇಯಿಲ್ಲ."

"ಜುಮ್ಮಿ ಓಡಾಡೋ ಅಂತ ಮದುವೆನೆ?"

"ಮದುವೇಲಿ ಲೇಡೀಸು ಸುಮ್ಮಸುಮ್ಮನೆ ಓಡಾಡ್ತರೆ ಸಾರ್. ಮೂರು ಸತಿ ಸೀರೆ ಬದ್ಲಾಸ್ತರೆ. ಒಡವೆ ಬದ್ಲಾಸ್ತರೆ. ನಮ್ಮ ಜುಮ್ಮಕ್ಕನೂ ವಸಿ ಅಂಗೆಯಾ."

"ಅಂತೂ ಉಗ್ರಿ ಮದುವೆ ಆದ."

"ಆದ ಸರಿ, ಆದ್ರು ಮೂವತ್ತೆಂಟು ವರ್ಷಕ್ಕೆ ಮದುವೆ ಆದ್ರೆ ಯಾವ ಸ್ವಾರಸ್ಯವೂ ಇರಲ್ಲ ಸಾರ್. ಅದೊಂತರ ಬ್ರಾಂಬ್ರು ಮದುವೆ ಇದ್ದಂಗೆ. ಬ್ರಾಂಬ್ರು ನೋಡಿ ವಯಸ್ಸಾದ ಮ್ಯಾಲೆ ಮದುವೆ ಆಯ್ತರೆ. ಅದ್ಕೆ ಮಕ್ಕಳು ಬೇಗ ಮುದುಕರಾಯ್ತವೆ. ಅದೇ ಸಾಬರು ನೋಡಿ ಸರಿಯಾದ ವಯಸ್ಸಿಗೆ ಮದುವೆ ಆಯ್ತರೆ. ಹುಟ್ಟೊ ಮಕ್ಕಳು ಯಂಗೋ ಬದುಕ್ತವೆ. ನಾವು ಅದೇತರ ಇಪ್ಪತ್ತಾರು ವರ್ಷಕ್ಕೆ ಮ್ಯಾರೇಜ್ ಆದೊ. ಯಾವ ಯಾವ ಏಜಿಗೆ ಏನಾಗಬೇಕೊ ಆದಾದ್ರೆ ಸರಿ."

"ಜುಮ್ಮಿಗೇನಾಪರೇಷನ್ನು?"

"ಗರ್ಭಕೋಶದ ಆಪರೇಷನ್ನು ಸಾರ್. ಈಚೆಗೆ ಯಾವೆಂಗಸರಿಗೂ ಗರ್ಭಕೋಶ ನಿಲ್ತಾಯಿಲ್ಲ. ಈ ಗರ್ಭಕೋಶದ ಕೆಲಸ ಮಕ್ಕಳನ್ನ ತಯಾರು ಮಾಡಿ ಬಿಡುಗಡೆ ಮಾಡದು. ಆ ಕೆಲಸ ನಿಲ್ತು ಅಂದ್ರೆ ಅದೇ ವೇಷ್ಟು. ಅದ್ಕೆ ಆಪರೇಷನ್ ಆಗ್ತಾಯಿರದು."

"ನಿಜವಾಗ್ಲು ನೀನು ಮೆಡಿಕಲ್ ಓದಬೇಕಾಗಿತ್ತು."

"ಬ್ಯಾಡಿ ಸಾರ್. ಮೆಡಿಕಲ್ಲಿಂದ ಏನು ಪ್ರಯೋಜನ? ಅದಕ್ಕೆ ನೋಡಿ ನಮ್ಮ ಹೆಚ್.ಸಿ. ಮಹದೇವಪ್ಪ ರಾಜಕಾರಣಿಯಾಗಿ ಪಿ.ಡಬ್ಲ್ಯೂ.ಡಿ ಮಂತ್ರಿಯಾದ."

"ಒಳ್ಳೆ ಡಾಕ್ಟರಲ್ಲದವರು ರಾಜಕಾರಣಿಗಳಾಯ್ತರೆ ಅನ್ನು."

"ಅಂಗೇನು ಇಲ್ಲ ಸಾರ್. ನೋಡಿ ನಮ್ಮ ಡಾಕ್ಟರ್ ಕೃಷ್ಣ ಒಳ್ಳೆ ಡಾಕ್ಟರು. ಅದೂ ಡೆಂಟಲ್ ಡಾಕ್ಟರು. ಆ ಕೆಲಸ ಮಾಡಿಕಂಡು ಇರಬಹುದಿತ್ತು. ಆದ್ರೆ ದೇವೇಗೌಡ್ರು ಮಾತು ಕೇಳಿ ರಾಜಕಾರಣಕ್ಕೋದ್ರು. ಕೆಪಿಎಸ್‌ಸಿ ಮೆಂಬರ್ರಾದ್ರು. ದೇವೇಗೌಡ್ರು, ಕುಮಾರಣ್ಣ ಹೇಳಿದವ್ರಿಗೆ ಕೆಲಸ ಕೊಟ್ರು. ತನಿಖೆ ಆಯ್ತು. ಜೈಲಿಗೂ ಹೋಗಿ ಬಂದ್ರು. ಆದ್ರಿವತ್ತು ಎಲ್ಲೂ ಮಕ ತೋರದಂಗಾದ್ರು. ಇದ್ಯಾಕೆ ಬೇಕಿತ್ತು ಅಂತ ಸಾರ್?"

"ಹೋಗ್ಲಿ ಬುಡು, ಉಪ್ಪು ತಿಂದೋರು ನೀರು ಕುಡಿತರೆ. ಸಿದ್ದರಾಮಯ್ಯನ ಸರಕಾರದ ಬಗ್ಗೆ ಏನೇಳ್ತಿ."

"ಯಾಕೋ ಸಿದ್ದಣ್ಣ ಬೋರೊಡುಸ್ತಾ ಅವನೆ ಸಾರ್. ಅದೇ ಬಜೆಪಿಗಳು ಅಧಿಕಾರ ಸಿಕ್ಕಿದೇಟಿಗೆ ಯಂಗೆ ಶುರು ಮಾಡಿದ್ರು ನೋಡಿ. ದರೋಡೆಕೋರ್ರು ಊರು ಮೇಲೆ ದಾಳಿ ಮಾಡಿದಂಗಾಯ್ತು."

"ಅಂಗಂತಿಯಾ?"

"ನೀವೇ ನೋಡಿದರಲ್ಲಾ ಸಾರ್. ಅದೇ ಸಿದ್ದು ಸಂಪುಟ ನೋಡಿದ್ರೆ ಒಬ್ಬನಿಗೆ ನಿಂತಗಳಕ್ಕಾಗದಿಲ್ಲ, ಒಬ್ಬನಿಗೆ ಉಸುರಾಡಕ್ಕಾಗದಿಲ್ಲ ಇನ್ನೊಬ್ಬ ಆಗ್ಲೊ ಈಗ್ಲೊ ಅನ್ನಂಗವ್ನೆ ಇಂಥೋರ ಕಟ್ಟಿಗಂಡಿರೊ ಸಿದ್ದು ಏನೂ ಮಾಡಕ್ಕಾಗದಂಗೆ ಮನಿಗೊಗಬಹುದು ಸಾರ್."

"ಥೂತ್ತೇರಿ!!!"

ಸತ್ಯ ಹೇಳುವಲ್ಲಿನ ಸಂಕಷ್ಟ



'ಧಾರ್ಮಿಕ ನಂಬಿಕೆಗಳಿಗೆ ಅಪಚಾರವಾಗಿದೆ.'

ಇಂತಹ ಅಥವಾ ಮಾತುಗಳು ಪದೇ ಪದೇ ಕೇಳು ಬರುತ್ತಿರುತ್ತಿವೆ.

ಹಾಗಾದರೆ 'ನಂಬಿಕೆ' ಎಂದರೆ ಏನು?

ಶಾಂತಾರಾಮ ಸೋಮಯಾಜಿ ಅವರು ತಮ್ಮ 'ದೇವರೆಂಬ ಸುಳ್ಳು ಧರ್ಮವೆಂಬ ದ್ವೇಷ' ಕೃತಿಯಲ್ಲಿ ಹೀಗೆ ಹೇಳುತ್ತಾರೆ:

"ಸ್ಪಷ್ಟ ಉತ್ತರ ಸಿಗದಿದ್ದಾಗ ನಾವು ಊಹೆಯ ಮೂಲಕ ಯಾವುದಾದರೂ ಒಂದು ಉತ್ತರವನ್ನು ಸ್ಪಷ್ಟ ಮಾಡುತ್ತೇವೆ. ಊಹಿಸಿದ್ದೇ ಸರಿ ಎಂದು ಪಟ್ಟು ಹಿಡಿದಾಗ 'ನಂಬಿಕೆ' ಯಾಗುತ್ತದೆ. ಎಲ್ಲ ನಂಬಿಕೆಗಳೂ ಅಸತ್ಯವೇ. ಏಕೆಂದರೆ ಸತ್ಯ ಗೊತ್ತಿದ್ದಲ್ಲಿ ನಂಬಿಕೆಯ ಅಗತ್ಯ ಇಲ್ಲ.

ಬರಿಯ ಊಹೆಯ ಬಲದಿಂದ ಗ್ರಹಿಸಿದ ಉತ್ತರ ತಪ್ಪಾದಾಗ ನಾವು ಸಿಟ್ಟುಗೊಳ್ಳುವುದಿಲ್ಲ. ಆದರೆ ವೈಜ್ಞಾನಿಕ ಅನ್ವೇಷಣೆಯ ಆಧಾರವಿಲ್ಲದ ಊಹೆಯು ನಮ್ಮೊಳಗೆ 'ನಂಬಿಕೆ'ಯಾಗಿ ಮಾರ್ಪಾಡಾದಾಗ ಅದನ್ನು ಪ್ರಶ್ನಿಸಿದವರ ಮೇಲೆ ನಾವು ರೇಗುತ್ತೇವೆ."

ಈ ಅರ್ಥದಲ್ಲಿ ಪರಿಶೀಲಿಸಿದರೆ 'ಧಾರ್ಮಿಕ ನಂಬಿಕೆಗಳಿಗೆ ಅಪಚಾರವಾಗಿದೆ' ಎನ್ನುವ ಮಾತಿಗೆ ಅರ್ಥವೇ ಇಲ್ಲ. ಏಕೆಂದರೆ 'ಧಾರ್ಮಿಕ ನಂಬಿಕೆ' ಎನ್ನುವುದೇ ಸುಳ್ಳು. ಸುಳ್ಳಿಗೆ ಅಪಚಾರ ಎಂದರೆ ಏನು ಅರ್ಥ?

ಇಂತಹದ್ದೇ ಅಭಿಪ್ರಾಯ ಹಲವರದ್ದು ಆಗಿರಬಹುದು. ಬಹು ಜನರ ಅಭಿಪ್ರಾಯ ಇದಕ್ಕೆ ವಿರುದ್ಧವಾಗಿರಬಹುದು. ಬಹು ಜನರ ಅಭಿಪ್ರಾಯವೇ ಯಾವಾಗಲೂ ಸರಿ ಎನ್ನಲಾಗುವುದಿಲ್ಲ, ತಮಗೆ ಸತ್ಯ ಎಂದು ಸ್ಪಷ್ಟವಾಗಿದ್ದನ್ನು ಹೇಳಿದರೆ ಬಹು ಜನರಿಗೆ ರುಚಿಸದೆ ಇರಬಹುದು. ಅವರು ಪ್ರತಿರೋಧ ಒಡ್ಡಬಹುದು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸತ್ಯ ತಿಳಿದವರು ಏನು ಮಾಡಬೇಕು? ಬಹಿರಂಗಪಡಿಸ ಬೇಕೊ? ಅಥವ 'ಪೊಳ್ಳು ನಂಬಿಕೆ' ಉಳ್ಳವರಿಗೆ ನೋವಾಗುತ್ತದೆ ಎಂದು ಸುಮ್ಮನಿರಬೇಕೊ?

ಇಲ್ಲಿ ಬುದ್ಧನನ್ನು ಕುರಿತು ಅಂಬೇಡ್ಕರ್ ಅವರು ಬರೆದಿರುವ ಮಾತುಗಳನ್ನು ನೆನಪಿಸಿಕೊಳ್ಳಬಹುದಾಗಿದೆ.

ಬುದ್ಧನಿಗೆ ಜ್ಞಾನೋದಯವಾಗಿ ತನ್ನ ಮಾರ್ಗವನ್ನು ರೂಪಿಸಿಕೊಂಡ ಮೇಲೆ ಅವನ ಮನಸ್ಸಿನಲ್ಲಿ ಒಂದು ಸಂಶಯ ಹುಟ್ಟಿತು. ತನ್ನ ಸಿದ್ಧಾಂತವನ್ನು ಬೇರೆಯವರಿಗೆ ಬೋಧಿಸ ಬೇಕೋ ಅಥವಾ ತನ್ನ ವೈಯಕ್ತಿಕ ಪರಿಪೂರ್ಣತೆ ಗೋಸ್ಕರ ಉಳಿದ ಜೀವನವನ್ನು ಮುಡುಪಾಗಿಡಬೇಕೋ?

ಅವನು ಹೀಗೆ ಗೊಂದಲಕ್ಕೆ ಬೀಳಲು ಕಾರಣ ಇತ್ತು. ಅವನಿಗೆ ಹೊಸ ಸಿದ್ಧಾಂತ ದೊರಕಿತ್ತು ನಿಜ. ಆದರೆ ಸಾಮಾನ್ಯ ಜನರು ಅದನ್ನು ಒಪ್ಪಿಕೊಳ್ಳುವುದೂ, ಆಚರಿಸು ವುದೂ ಬಹಳ ಕಷ್ಟವಾಗಿತ್ತು. ವಿವೇಕಿಗಳಿಗೂ ಅದು ಬಹಳ ಸೂಕ್ಷ್ಮವಾಗಿತ್ತು.

ದೇವರು, ಆತ್ಮ ಮುಂತಾದ ಸಂಕೋಲೆಗಳಿಂದ ಜನತೆ ಬಿಡುಗಡೆ ಹೊಂದುವುದು ಕಠಿಣ. ಯಜ್ಞಯಾಗಾದಿಗಳಲ್ಲಿನ ನಂಬಿಕೆಯನ್ನು ತೊರೆಯುವುದೂ ಜನತೆಗೆ ಬಹಳ ಕಠಿಣ. ಕರ್ಮ ಸಿದ್ಧಾಂತದಲ್ಲಿನ ನಂಬಿಕೆಯನ್ನು ತ್ಯಜಿಸುವುದೂ ಜನರಿಗೆ ಕಠಿಣ. ಆತ್ಮದ ಅಮರತ್ವದಲ್ಲಿನ ನಂಬಿಕೆಯನ್ನು ತೊರೆಯುವುದು ಜನರಿಗೆ ಕಠಿಣ ಹಾಗೂ ಸ್ವತಂತ್ರ ವಸ್ತುವೆಂಬ ಆತ್ಮವು ಇಲ್ಲ. ಸತ್ತ ನಂತರ ಅದು ಉಳಿದಿರಲು ಸಾಧ್ಯವಿಲ್ಲವೆಂಬ ಸಿದ್ಧಾಂತವನ್ನು ಅವರು ಒಪ್ಪಿಕೊಳ್ಳುವುದೂ ಕಠಿಣ. ಜನತೆಗೆ ಸ್ವಾರ್ಥತೆಯಲ್ಲೇ ಆಸಕ್ತಿ. ಅದರಲ್ಲೇ ಆನಂದ ಕಾಣುತ್ತಾರೆ. ಸ್ವಾರ್ಥತೆಗಿಂತ ನಿಸ್ವಾರ್ಥತೆಯೇ ಮೇಲು ಎಂಬ ಸಿದ್ಧಾಂತವನ್ನು ಜನತೆ ಒಪ್ಪಿಕೊಳ್ಳುವುದು ಕಠಿಣ.

ಹೊಸ ಸಿದ್ಧಾಂತವನ್ನು ಬೋಧಿಸಿದರೂ ಜನರು ಅದನ್ನು ಅರ್ಥ ಮಾಡಿಕೊಳ್ಳದಿರಬಹುದು. ಅರ್ಥಮಾಡಿಕೊಂಡರೂ ಅದನ್ನು ಒಪ್ಪಿಕೊಳ್ಳದಿರಬಹುದು. ಒಪ್ಪಿಕೊಂಡರೂ ಅದನ್ನು ಆಚರಿಸದಿರಬಹುದು. ಆಗ ಅದರಿಂದಾಗಿ ಅವರಿಗೆ ವೃಥಾ ಬೇಸರ ಮತ್ತು ಬೋಧಿಸಿದವನಿಗೂ ಪೀಡೆಯಾದೀತು. ಅದರ ಬದಲು ಸನ್ಯಾಸಿಯಂತೆ ಪ್ರಪಂಚದಿಂದ ದೂರ ಉಳಿದು ಈ ಸಿದ್ಧಾಂತವನ್ನು ತನ್ನ ಸ್ವಂತ ಆತ್ಮೋನ್ನತಿಗೆ ಏಕೆ ಬಳಸಿಕೊಳ್ಳಬಾರದು? ಇದರಿಂದಾಗಿ ಕಡೇ ಪಕ್ಷ ತನ್ನೊಬ್ಬನಿಗಾದರೂ ಒಳ್ಳೆಯದಾದೀತು... ಎಂದೆಲ್ಲ ಯೋಚಿಸಿದ. ಹೀಗೆ ಮಾಡುವಾಗ ಅವನ ಮನಸ್ಸು ಸಿದ್ಧಾಂತವನ್ನು ಬೋಧಿಸುವುದನ್ನು ಬಿಟ್ಟು ನಿವೃತ್ತಿಯ ಕಡೆಗೆ ಹರಿಯಲಾರಂಭಿಸಿತು.

ಮನಸ್ಸಿನೊಳಗಿನ ತುಮುಲವನ್ನು ತಹಬಂದಿಗೆ ತಂದುಕೊಂಡ ಬುದ್ಧ ಮತ್ತೆ ಯೋಚಿಸಿದ. ಪ್ರಪಂಚವು ನಾಶದ ಕಡೆಗೆ ಹೋಗುತ್ತಿದೆ. ಸಂಪೂರ್ಣ ಜ್ಞಾನೋದಯ ವನ್ನು ಪಡೆದ ನಾನು ಒಂದು ವೇಳೆ ನನ್ನ ಸಿದ್ಧಾಂತವನ್ನು ಬೋಧಿಸುವುದರ ಬದಲು ನಿವೃತ್ತಿಯ ಕಡೆಗೆ ತಿರುಗಿದರೆ ಪ್ರಪಂಚವು ನಿಜವಾಗಿಯೂ ನಾಶವಾಗುತ್ತದೆ. ಈಗ ನಾನು ಹಿಂದಿನ ಸಿದ್ಧಾರ್ಥ ಗೌತಮನಲ್ಲ, ಈಗ ನಾನು ಬುದ್ಧ ಪರಿಪೂರ್ಣ ಜ್ಞಾನ ಪಡೆದ ಜ್ಞಾನಿ. ಹೀಗಿರುವಾಗ ಈ ಜ್ಞಾನವನ್ನು ಪ್ರಪಂಚಕ್ಕೆ ನೀಡಲು ನಿರಾಕರಿಸುವುದೆಷ್ಟು ಸರಿ ತಪ್ಪು ಮಾಡುತ್ತಿರುವ ಮನುಕುಲವನ್ನು ರಕ್ಷಿಸುವುದು ನನ್ನ ಕರ್ತವ್ಯ ಅಲ್ಲವೆ? ಹಾಗೆ ಮಾಡದೇ ಇದ್ದಲ್ಲಿ ನಾನು ಸ್ವಾರ್ಥಿಯಾಗುತ್ತೇನೆ. ನಮ್ಮ ದೇಶದಲ್ಲಿ ಈ ಹಿಂದೆ ಅನೇಕ ಉದ್ದೇಶಪೂರಿತ ತಪ್ಪುಗಳಿಂದ ಕೂಡಿದ ಸಿದ್ಧಾಂತಗಳು ಬೋಧಿಸಲ್ಪಟ್ಟವು. ಅವು ಈಗಲೂ ಮುಂದುವರೆಯುತ್ತಿವೆ. ತಪ್ಪು ಬೋಧನೆಗಳಿಂದ ಅಧೋಗತಿಗೆ ಹೋಗುತ್ತಿರುವ ಮುಗ್ಧರು, ಅಮಾಯಕರನ್ನು ಆ ತಪ್ಪು ದಾರಿಯಿಂದ ಸರಿದಾರಿಗೆ ತರಲಾದರೂ ನನ್ನ ಸಿದ್ಧಾಂತದ ಬಾಗಿಲನ್ನು ತೆರೆಯಬಾರದೆ? ಶುದ್ಧ ಜ್ಞಾನವನ್ನು ಪಡೆದಿರುವ ತಾನು ಹಾಗೂ ದುಃಖವನ್ನು ಜಯಿಸಿರುವ ತಾನು ದುಃಖವನ್ನು ಅನುಭವಿಸುತ್ತಿರುವವರ ಮೇಲೆ ಕೃಪಾಕಟಾಕ್ಷ ಬೀರಬೇಕು. ಪ್ರಪಂಚದಲ್ಲಿ ಬಹಳ ದುಃಖವಿರುವುದನ್ನು ಮನಗಂಡಿರುವ ನಾನು ಸನ್ಯಾಸಿಯಂತೆ ಕೈಕಟ್ಟಿ ಕುಳಿತುಕೊಳ್ಳುವುದು ಅಥವ ಏನಾದರಾಗಲಿ ನನಗೇನು ಎಂದು ಸುಮ್ಮನಿರುವುದು ತಪ್ಪು. ಸನ್ಯಾಸವು ನಿಷ್ಪ್ರಯೋಜಕವು. ಪ್ರಪಂಚದಿಂದ ಪಲಾಯನ ಮಾಡಲು ಪ್ರಯತ್ನಿಸುವುದರಿಂದ ಏನೂ ಉಪಯೋಗವಿಲ್ಲ. ಸನ್ಯಾಸಿಯೂ ಸಹ ಇದರಿಂದ ತಪ್ಪಿಸಿಕೊಳ್ಳಲಾರ. ಇ[illegible] ಅಗತ್ಯವಾದುದೇನೆಂದರೆ ಪ್ರಪಂಚದಿಂದ ತಪ್ಪಿಸಿಕೊಳ್ಳುವುದ[illegible] ಪ್ರಪಂಚವನ್ನು ಬದಲಾಯಿಸುವುದು ಮತ್ತು ಅದನ್ನು ಉತ್ತಮಗೊಳಿಸುವುದು. ನನ್ನ ಸಿದ್ಧಾಂತದ ಪ್ರಚಾರದಿಂದಾ[illegible] ದುಃಖ ನಿವಾರಣೆ ಸಾಧ್ಯವಾಗುವುದಾದರೆ ನಿಷ್ಕ್ರಿಯ ಮೂರ್ತಿಯಂತೆ ಸುಮ್ಮನೆ ಕುಳಿತುಕೊಳ್ಳುವುದರ ಬದಲು ಪ್ರಪಂಚಕ್ಕೆ ಹಿಂತಿರುಗಿ ಅದರ ಸೇವೆ ಮಾಡುವುದು ತ[illegible] ಕರ್ತವ್ಯ. ಈ ತೀರ್ಮಾನಕ್ಕೆ ಬಂದ ಬುದ್ಧ ಜನತೆಗೆ ತ[illegible] ಸಿದ್ಧಾಂತವನ್ನು ಬೋಧಿಸಲು ನಿರ್ಣಯಿಸಿದನು.

● ಎಚ್.ಎಲ್. ಕೇಶವಮೂರ್ತಿ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಭೂಮಿಗೀತೆ ವರ್ಸಸ್ ರಾಷ್ಟ್ರೀಯತೆ

ಸಮುದ್ರವಸನೇ ದೇವಿ ಪರ್ವತ ಸ್ತನ ಮಂಡಲೇ।
ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ॥

ಈ ಒಂದು ಶ್ಲೋಕ ನಾನು ಬಹಳ ಸಣ್ಣವನಿರುವಾಗ ...ದಂತಹದ್ದು. ಸಮುದ್ರವನ್ನೇ ಉಡುಪನ್ನಾಗಿ ಹೊದ್ದವಳು, ...ರ್ವತಗಳನ್ನೇ ಸ್ತನವನ್ನಾಗಿ ಹೊಂದಿರುವವಳು... ಈ ...ಕ್ಯಗಳು ಅಲಂಕಾರಿಕವಾಗಿದ್ದು, ಕಾವ್ಯದ ಗುಣಗಳನ್ನು ...ಪಡೆದಿದ್ದರಿಂದ ಮೆಚ್ಚಿದ್ದೆ. ಆದರೆ, ಶ್ಲೋಕವನ್ನು ಹೇಳಲು ...ಗೆ ಇಷ್ಟವಾಗುತ್ತಿರಲಿಲ್ಲ. ಅದಕ್ಕೆ ಕಾರಣಗಳು ಎರಡು. ...ಮು ವಿಷ್ಣುಪತ್ನಿ ಎಂದು ಅವಳನ್ನು ವಿಷ್ಣುವಿಗೆ ಸಲ್ಲಿಸಿದ್ದು ...ಗೆ ಹಿಡಿಸಲಿಲ್ಲ. ಭೂಮಿಯಂತಹ ಎಲ್ಲರೂ ಸೇರುವಂತಹ ...ದಾತ್ತ ಮತ್ತು ಉದಾರ ಜೀವಂತ ವಸ್ತು ಅಥವಾ ...ಕಲ್ಪನೆಯನ್ನು ಯಾರೋ ಒಬ್ಬನ ಅದರಲ್ಲೂ ವಿಷ್ಣುವಿನ ...ಸ್ವತನಕ್ಕೆ ವಹಿಸಿದ್ದು, ಮತ್ತೊಂದು ವಿಷಯವೆಂದರೆ ...ಭೂಮಿಯ ಮೇಲೆ ನಡೆದಾಡುವುದು ಅನಿವಾರ್ಯ. ...ಭೂಮಿಯ ಮೇಲೆಯೇ ಕಾಲಿಡಬೇಕು. ಇನ್ನೆಲ್ಲಿ ಕಾಲಿಟ್ಟು ...ಕೊಳ್ಳೋಣ? ಅದಕ್ಕೆ ಕ್ಷಮೆ ಯಾಕೆ ಕೇಳಬೇಕು? ಹೀಗಾಗಿ ...ಶ್ಲೋಕ ನನ್ನಿಂದ ವರ್ಜಿತವಾಯ್ತು.

ಆದರೆ ಭೂ ಸೂಕ್ತವನ್ನು ಅಧ್ಯಯನ ಮಾಡುವಾಗ ...ದರಲ್ಲಿ ಅನೇಕ ವೈದಿಕರ ಅಥವಾ ಆರ್ಯರ ಲೌಕಿಕ ...ಕಾಂಕ್ಷೆಗಳೂ ಮತ್ತು ಭೂಗ್ರಹಣಕ್ಕೆ ಸಂಬಂಧಪಟ್ಟಂತಹ ...ಬದ್ಧ ಪ್ರಸ್ತಾಪಗಳು ಇದ್ದಾಗ್ಯೂ ಕೂಡ, ಅನೇಕ ಅಂಶಗಳು ...ಗೆ ತೀರಾ ಸಂತೋಷ ಕೊಟ್ಟಿತು. ಭೂ ಸೂಕ್ತವನ್ನು ...ಡಿಯಾಡಿದರೆ, ಹೊಟ್ಟು ಸರಿದು ಕೆಲವಾದರೂ ಗಟ್ಟಿ ...ಕಾಳುಗಳು ದೊರಕುವುದರಲ್ಲಿ ಯಾವ ಸಂಶಯವೂ ಇಲ್ಲ.

"ಕಲ್ಲು, ಬಂಡೆ, ಧೂಳು, ಹರಳು ಇವುಗಳನ್ನೆಲ್ಲಾ ...ಗಿ ಧರಿಸಿ, ತಾನೂ ಧೃತಳಾಗಿರುವ, ಬಂಗಾರದ ಒಡಲಿ...ವ ಕೂಡಿರುವ ಆ ಭೂದೇವಿಗೆ ನಮಸ್ಕಾರ." (26)

"ಯಾವಳಲ್ಲಿ ಗಿಡಮರಗಳು, ವನಸ್ಪತಿಗಳು ಸರ್ವದಾ...ವಾಗಿ ನಿಂತಿರುವುವೋ, ಎಲ್ಲಕ್ಕೂ ಆಶ್ರಯಳಾದ, ...ವನ್ನೂ ಧರಿಸಿರುವ ಭೂಮಿತಾಯಿಯನ್ನು ನಾವು ...ಸುತ್ತೇವೆ." (27)

ಈ ಬಗೆಯ ಸ್ತುತಿಗಳು ಅಭಿಮಾನಭರಿತವಾಗಿದ್ದು, ...ಶಂಸನೀಯವಾಗಿವೆ, ಇನ್ನೂ ಮುಂದೆ ತೋರುವ ಕಾಳಜಿ ...ಪ್ರಾರ್ಹ.

"ಓ ಭೂಮಿಯೇ, ಯಾವಾಗ ನಿನ್ನಲ್ಲಿ ಹಳ್ಳ ತೋಡಿ ...ಯುವೆವೋ ಅದು ಕೂಡಲೇ ಮುಚ್ಚಿಕೊಳ್ಳಲಿ. ನಿನ್ನ ...ರ್ಮಸ್ಥಾನವನ್ನೂ, ಹೃದಯವನ್ನೂ ನಾವು ಹಾನಿ ...ಪಡದಂತಾಗಲಿ." (35)

ಇಡೀ ಭೂ ಸೂಕ್ತದಲ್ಲೇ ಅತ್ಯಂತ ಸಂವೇದನಾಶೀಲ ...ರ್ಥನೆಯೆಂದರೆ ಇದು ಎಂದು ನನ್ನ ಭಾವನೆ. ಆದರೂ, ...ಲ್ಲೊಂದು ಸೂಕ್ಷ್ಮತೆಯೂ ಇದೆ. ಕೃಷಿಕರಲ್ಲಿ, ಬೇಸಾಯ ...ರಲ್ಲಿ ಈ ಆಲೋಚನೆಯು ಬಾರದು. ಅವರಿಗೆ ಭೂಮಿ...ಲ್ಲಿ ಉಳುವುದು, ನೀರಿಗಾಗಿ ಹಳ್ಳ ತೋಡುವುದು, ...ಗಳನ್ನು ನೆಡಲು ಗುಳಿ ತೆಗೆಯುವುದು ಇತ್ಯಾದಿಗಳೆಲ್ಲಾ ...ಳ ಸಹಜವಾಗಿದ್ದು, ಅವರು ತೆಗೆಯುವ ಹಳ್ಳಗಳಾಗಲಿ, ...ಗಳಾಗಲಿ ವ್ಯರ್ಥವಾಗದೇ ಜೀವಂತಿಕೆಯ ಕುರುಹುಗಳೇ ...ಡಿ ಭೂಮಿಯ ಫಲವತ್ತಿನ ಉದ್ದೇಶ ಫಲಿಸುತ್ತದೆ. ...ಗಾಗಿ, ನಮ್ಮ ಕೃಷಿಕರಲ್ಲಿ ಇಂತಹ ಪ್ರಾರ್ಥನೆಗಳು ...ಮ್ಮುವುದಿಲ್ಲ. ಕೃಷಿಕರಲ್ಲದ ವೈದಿಕರು ಹೀಗೆ ...ಳಬಹುದು. ಆದರೆ, ಈಗ ನಮ್ಮ ನಗರದ ...ಮೈದಾನಗಳಲ್ಲಿ ಗುಂಡಿಗಳು, ಕೇಬಲ್ ಹಾಕಲು ...ಂಗಳು, ಇತ್ಯಾದಿಗಳ ಕಾರಣದಿಂದ ಅರೆಬರೆ ಮುಚ್ಚಿದ್ದು ...ವಾ ಹಾಗೆಯೇ ತೆರೆದಿಟ್ಟಿರುವ ಹಳ್ಳಗಳು ಮತ್ತು ...ಗಳಿಂದ ಕೂಡಿರುವ ರಸ್ತೆಗಳ ದುರ್ಗತಿಗಳನ್ನು ನೋಡು...ವ ನಗರಿಗನಾದ ನನಗೆ ಈ ಮೇಲಿನ ಶ್ಲೋಕ ಸಂವೇದ...ಶೀಲವಾಗಿರಲು ಸಾಧ್ಯ. ಈ ಶ್ಲೋಕವು ರೈತಪರವಲ್ಲವೆಂದು ...ಲ್ಲೋಚಿಕ್ಕ ಅನ್ನಿಸುವುದಾದರೂ, ಅಗೆದ ಮೇಲೆ ಅದರಲ್ಲಿ ...ಜೀವಂತವಾಗಿರುವುದು ಬೆಳೆಯುವುದರ ಮೂಲಕವಾದರೂ ...ಯು ಹಳ್ಳವಾಗಿಯೇ ಉಳಿಯದಿರಲು ಸೂಚನೆಯೇನೋ ...ದುಕೊಳ್ಳಬಹುದು.

ಕೆಲವು ಇಂತಹ ಶ್ಲೋಕಗಳನ್ನು ಹೊರತುಪಡಿಸಿ, ಇನ್ನೂ ...ವು ಸ್ವಾರ್ಥಪರವೂ, ಲೌಕಿಕಾಂಕ್ಷೆಯಿಂದ ತುಂಬಿರು...ವೂ ಮತ್ತು ಜನಾಂಗೀಯ ದ್ವೇಷಪೂರಿತವೂ ಆಗಿವೆ.

"ನಿದ್ರಿಸುವಾಗ ನಾವು ಎಡಕ್ಕೂ ಬಲಕ್ಕೂ ಹೊರಳುತ್ತೇವೆ ...ಅಂಗಾತವಾಗಿ ನಿನ್ನ ಮೇಲೆ ಮಲಗಿರುತ್ತೇವೆ. ಹೀಗೆ ...ವಾಗ ಸರ್ವರಿಗೂ ಆಧಾರಳಾಗಿ ಸಲಹುತ್ತಿರುವ ...ಮಿಯೇ, ನಮಗೆ ನೋವನ್ನುಂಟು ಮಾಡಬೇಡ."

ಹೀಗೆನ್ನುವ ವೈದಿಕ ಕವಿಯು ಮುಗ್ಧನಾಗಿ ...ಕೊಳ್ಳುತ್ತಿದ್ದಾನೆ ಎಂದುಕೊಳ್ಳುವುದಕ್ಕಿಂತ ಆತನ ...ಸಂಸ್ಕೃತಿಯ ಸಂಗ್ರಹಿತ ಧೋರಣೆಯೇ ನನಗೆ ತೋರುತ್ತದೆ. ಭೂಮಿ ಏಕೆ ಅವನಿಗೆ ನೋವನ್ನುಂಟುಮಾಡುತ್ತಾಳೆ? ಆದರೂ ಭೂಮಿಯನ್ನು ಜೀವಂತ ಪ್ರತಿಮಾ ರೂಪದಲ್ಲಿ ನೋಡುತ್ತಿರುವ ಸಲುಗೆ ಮತ್ತು ಪ್ರೀತಿಯಿಂದ ಹಾಗೆ ಅನ್ನುತ್ತಿದ್ದಾನೆಂದಾದರೂ, "ಸೂರ್ಯನ ಸಹಾಯದಿಂದ ಎಲ್ಲಿಯತನಕ ನಿನ್ನ ವಿಸ್ತಾರ ವೈಭವವನ್ನು ನೋಡುತ್ತೇವೆಯೋ ಅಲ್ಲಿಯವರೆಗೆ ಆ ಪ್ರದೇಶಗಳನ್ನು ವರ್ಷಗಳು ಉರುಳಿದರೂ ನೋಡಲು ಅನುವಾಗುವಂತೆ ಕಣ್ಣಿನ ದೃಷ್ಟಿ ಕಡಿಮೆಯಾಗದಿರಲಿ." (33) ಮತ್ತೆ ಇಲ್ಲಿ ಅವರ ಲೋಭಭರಿತವಾದ ಕೋರಿಕೆಯೇ













ತೋರುತ್ತದೆ. ಇರಲಿ ಬಿಡಿ, ಅವರ ಆಸೆ ಅವರದ್ದು, ಆದರೆ ಅದು ಪ್ರಕೃತಿ ಸಹಜವಾಗಿ ಯಾವ್ಯಾವ ಸಮಯಕ್ಕೆ ಏನೇನಾಗಬೇಕು ಅದು ಆಗುತ್ತಲೇ ಇರುತ್ತದೆ.

"ದೇವಹಿಂಸಕರೂ, ದೂಷಕರೂ ಆದ ದಸ್ಯುಗಳನ್ನು ತಿರಸ್ಕರಿಸಿ, ಇಂದ್ರನನ್ನು ಆರಿಸಿಕೊಂಡೆ" (37) ಎಂದು ಭೂಮಿಯನ್ನು ಕೊಂಡಾಡುವ ವೈದಿಕ ಕವಿ ಮುಂದೆ ತಾನೇ ಜಾಗೃತನಾದಂತೆ ಹೇಳುತ್ತಾನೆ, "ಕುದುರೆಯು ತನ್ನ ಕಾಲಡಿಯ ಧೂಳನ್ನು ಕೊಡವಿಕೊಳ್ಳುವಂತೆ ಭೂಮಿಯು ತನ್ನಲ್ಲಿ ಹಿರಿದೆ ಹುಟ್ಟಿ ವಾಸಿಸಿದಂತಹ ಎಲ್ಲರನ್ನೂ ಝಾಡಿಸಿ ತೊರೆದಿದ್ದಾಳೆ." (57) ಇದಂತೂ ಪರಮನಿಜ. ಒಂದು ಫಲವಂತಿ ಹೆಣ್ಣು ಮೌನವಾಗಿರುವಾಗ ಯಾರ್ಯಾರೋ ಅವಳಿಂದ ಉಪಭೋಗ ಪಡೆದವರು ಅಭಿಮಾನದಿಂದ, ಆನಂದದಿಂದ ಆರಾಧಿಸುತ್ತಾರೆ. ಮತ್ತಾರೋ ಅವರಿಗಿಷ್ಟ ಬಂದಂತೆ ಅವಳನ್ನು ಉಪಯೋಗಿಸಿಕೊಳ್ಳುತ್ತಾರೆ. ಇಂತವಳು ತನ್ನ ಅಧೀನದಲ್ಲಿರಬೇಕು ಎಂದು ಅಧಿಕಾರಕ್ಕಾಗಿ ಅವಳನ್ನು ಕಬಳಿಸಲು ಯತ್ನಿಸುತ್ತಾರೆ. ಯಾರೇನೇ ಮಾಡಿದರೂ ಸಹಿಸಿಕೊಂಡು ಇರುವ ಭೂಮಿಯಂತಹ ಹೆಣ್ಣು ತನ್ನ ಪಾಡಿಗೆ ತಾನು ತನ್ನ ಅಸ್ತಿತ್ವದಲ್ಲಿರಲು, ಆರಾಧಕರೂ, ಅಧಿಕಾರಿಗಳೂ, ಅತ್ಯಾಚಾರಿಗಳೂ ಎಲ್ಲರೂ ಹೊರಟು ಹೋಗುತ್ತಾರೆ. ಅವಳುಳಿದಿರುತ್ತಾಳೆ.

ಮಾತೃಭೂಮಿ

ಭೂಮಿಯನ್ನು ತಾಯಿ ಎಂದು ಬಹುತೇಕ ಸಂಸ್ಕೃತಿಗಳು ಕೊಂಡಾಡಿದರೂ, ಭೂಮಿಯನ್ನು ಗಂಡಾಗಿಯೂ ಮತ್ತು ಆಕಾಶವನ್ನು ಹೆಣ್ಣಾಗಿಯೂ ನೋಡುವುದು ಈಜಿಪ್ಟಿನ ಸಂಸ್ಕೃತಿಯಲ್ಲಿತ್ತು. ಅದನ್ನು ಮುಂದಿನ ಸಂಚಿಕೆಗಳಲ್ಲಿ ನೋಡುವ. ಇರಲಿ, ಮಾತೃಭೂಮಿಯ ಪರಿಕಲ್ಪನೆಯನ್ನು ಉದಾರವಾಗಿ ಸ್ವೀಕರಿಸಿದರೆ ಉದಾತ್ತವಾಗಿ ತೋರುತ್ತದೆ. ಬರಿಯ ದೇಶ, ನಾಡುಗಳ ಸೀಮಿತ ಪರಿಮಿತಿಯಲ್ಲಿ ನೋಡಿದರೆ ಅಪಹಾಸ್ಯವಾಗಿ ಕಾಣುತ್ತದೆ. ತಮ್ಮ ಜೀವನದ ವ್ಯಾಪ್ತಿಯಲ್ಲಿ ಬದುಕಿದ ನೆಲದ ಬಗ್ಗೆ ಹೆಮ್ಮೆ ಮತ್ತು ಅಭಿಮಾನದಿಂದ ಹೇಳಿಕೊಳ್ಳುವಾಗ ತಮ್ಮ ಜೀವನಾಧಾರಕ್ಕೆ ಸಹಾಯಕವಾದ ಪ್ರಕೃತಿಯಲ್ಲಿನ ಗಿರಿ, ನದಿ, ಮಣ್ಣು ಇತ್ಯಾದಿಗಳನ್ನು ನೆನೆಯುತ್ತಾ ಉಪಕೃತರಾದ ಭಾವದಲ್ಲಿ ವಂದನೆಗಳನ್ನು ಸಲ್ಲಿಸುವುದು ಒಂದು ಕೃತಜ್ಞತಾ ಮನೋಭಾವದ ಅಭಿವ್ಯಕ್ತಿ. ಆದರೆ, ಅದನ್ನು ವರ್ಣಿಸುವ ಭರದಲ್ಲಿ, ಆರಾಧಿಸುವ ಉನ್ಮತ್ತತೆಯಲ್ಲಿ ಉತ್ಪ್ರೇಕ್ಷೆಯ ಪರಮಾವಧಿಯನ್ನು ತಲುಪುವ ಪ್ರಮಾದಗಳನ್ನು ಸಾಹಿತ್ಯದಲ್ಲಿ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಯಲ್ಲಿ ಕಾಣುತ್ತೇವೆ. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪೀ ಗರೀಯಸಿ" ಎಂದು ಹೇಳುವ ಮಾತಿನಲ್ಲಿ ನನಗೆ ಹೋಂ-ಸಿಕ್‌ನೆಸ್ ಕಾಣುತ್ತದೆ. ಅಲೆಮಾರಿ ಸಂತರ ಅಥವಾ ಜಂಗಮರು ಎಂದಿಗೂ ಈ ಮಾತನ್ನು ಹೇಳಲು ಸಾಧ್ಯವಿಲ್ಲ. ಅವರದು "ಎಲ್ಲಿಯೂ ನಿಲ್ಲದಿರು ಮನೆಯನೆಂದು ಕಟ್ಟದಿರು ಕೊನೆಯನೆಂದೂ ಮುಟ್ಟದಿರು ಓ ಅನಂತವಾಗಿರು" ಎಂದು ಹೇಳುವಂತಹ ಚೈತನ್ಯದ ಪ್ರತಿನಿಧಿಗಳು. "ಜನನೀ ಜನ್ಮಭೂಮಿಶ್ಚ" ಹೇಳಿರುವ ರಾಮನು ತನ್ನ ಸ್ಥಳದಿಂದ ದೂರ ಹೋಗಿದ್ದು, ರಾಜಕೀಯವಾಗಿ; ವೈಯಕ್ತಿಕವಾಗಿ ಸಾಕಷ್ಟು ಹೆಣಗಾಡಿ ಮುಗಿಸಿ ಅಯೋಧ್ಯೆಗೆ ಮರಳಿದಾಗ "ಅಟ್‌ಲಾಸ್ಟ್ ಅಟ್ ಹೋಮ್" ಎಂಬ ರಿಲ್ಯಾಕ್ಸ್ ಭಾವ ಅಲ್ಲಿ ಮೂಡುವುದು. ಇರಲಿ, ಅದು ಸಹಜ. ಆದರೆ, ಮಾತೃಭೂಮಿ ಎಂದರೆ ದೇಶವಲ್ಲ, ತಮ್ಮ ಸೀಮೆಗೊಂಡಿರುವ ನಾಡಲ್ಲ ಎಂಬ ಪ್ರಾಕೃತಿಕ ವಿಚಾರ ಖಂಡಿತ ಗಮನದಲ್ಲಿರಬೇಕು. ಗಡಿಗಳನ್ನು ಗುರುತಿಸಿಕೊಂಡಿರುವ ದೇಶಗಳು ಪ್ರಾಕೃತಿಕವಲ್ಲ. ಭಾರತೀಯ ಆಕಾಶ, ಚೀನೀ ಗಾಳಿ, ಆಫ್ರಿಕನ್ ಸೂರ್ಯ, ಭೂತಾನ್ ಚಂದ್ರ ಹೀಗೆಲ್ಲಾ ಹೇಗಿಲ್ಲವೋ ಅದೇ ರೀತಿಯಲ್ಲಿ ಹಿಂದೂ ಭೂಮಿ, ಭಾರತೀಯ ಮಣ್ಣು ಆಫ್ಘನ್ ನೆಲ; ಪ್ರಾಕೃತಿಕವಾಗಿ ನಮಗೆ ದೊರಕಲಾರದು. ವ್ಯಕ್ತಿಯು ಸಾಮಾಜಿಕ ಮತ್ತು ಸಾಂಸ್ಕೃತಿಕ ರಚನೆಯಲ್ಲಿ ಒಂದಾಗಿದ್ದು, ಅದರ ಪ್ರಭಾವಕ್ಕೆ ತೀವ್ರತರವಾಗಿ ಒಳಗಾಗಿ ಅದರನುಸಾರವಾಗಿ ಆಹಾರ, ಉಡುಪು, ಚಿಂತನೆ ಇತ್ಯಾದಿ ಜೀವನ ಪದ್ಧತಿಗಳಿಗೆ ರೂಢಿಯಾಗಿರುವುದರಿಂದ ವ್ಯತ್ಯಾಸಗಳು ಕಂಡು ಕಾಣುತ್ತವೆಯೇ ಹೊರತು ಭೂಮಿಯನ್ನು ಸೀಮಿತಗೊಳಿಸಿ ವೈಭವೀಕರಿಸುವುದು ಅಸಹಜ ಅಥವಾ ಅಪ್ರಬುದ್ಧವಾಗಿ ಕಾಣುತ್ತದೆ. ಇರುವುದೊಂದೇ ಭೂಮಿ, ನನ್ನ ಜನ್ಮಭೂಮಿ, ಅವನ ಜನ್ಮಭೂಮಿ ಹೇಗಿರಲು ಸಾಧ್ಯ? ಅತಿಯಾದ ರಾಷ್ಟ್ರೀಯತೆಯ ಗೀಳೇ ಎಲ್ಲೆಯೊಳಗಿನ ಭೂಭಾಗವನ್ನು ಮಾತ್ರ ನೋಡುತ್ತಾ ಅಲ್ಪಮಾನವನಾಗುವುದು. ರಾಷ್ಟ್ರೀಯತೆಯ ಗೀಳಿನ ಮನುಷ್ಯನಿಗೆ ವಿಶ್ವ ಮಾನವ ಪರಿಕಲ್ಪನೆಯು ನಿಲುಕದೇ ಹೋಗುವುದು.

ಜೇಮ್ಸ್ ಕೇಮರಾನ್‌ರವರ 'ಅವತಾರ್'

ಈ ಸಿನಿಮಾದಲ್ಲಿ ಈ ಭೂಮಿ ಜೀವದ ಗಣಿ. ಒಡಲಲ್ಲಿ ಜೀವದ ಸೆಲೆಯನ್ನೇ ಇಟ್ಟುಕೊಂಡು, ಮಡಿಲಿನಲ್ಲಿ ಜೀವಗಳನ್ನು ಪೋಷಿಸುವ ಫಲವತ್ತತೆಯ ಖನಿ. ಭೂಮಿಯ ಜೀವಂತಿಕೆಯ ಸೆಲೆಯನ್ನು ಜೀವಂತವಾಗಿಯೇ ಇಡುವುದರಲ್ಲಿ ಮನುಕುಲ ಉಳಿದೆಲ್ಲಾ ಜೀವಸಂಕುಲಕ್ಕಿಂತ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿದ್ದಾನೆ. ವಿಜ್ಞಾನ, ಕೈಗಾರಿಕೆ ಮತ್ತು ನಾಗರಿಕತೆಗಳ ಲಾಂಛನದಡಿಯಲ್ಲಿ ಪ್ರಗತಿಯೆಂದು ಮುಂದಾಲೋಚನೆಯಿಲ್ಲದೇ ಭೂಮಿಯನ್ನು ಬರಡು ಮಾಡುವ, ಅವಳ ಫಲವತ್ತತೆಯನ್ನು ಬಸಿದು, ಬಂಜರಾಗಿಸುವ ಯಾವುದೇ ಪ್ರಕ್ರಿಯೆಗಳು ನಿಲ್ಲಬೇಕು. ಇದು ಒಟ್ಟೊಬ್ಬರೂ ನಿರ್ವಹಿಸಲೇಬೇಕಾದ ನೈತಿಕ ಜವಾಬ್ದಾರಿ ಎಂಬ ವಿಚಾರವನ್ನು ಹೇಳುತ್ತಾ ಜೀವಂತ ವೃಕ್ಷವನ್ನು ಭೂಧರ್ಮದ ಸಂಕೇತವನ್ನಾಗಿಸಿಕೊಂಡು ಕಥೆ ಹೆಣೆಯುತ್ತಾರೆ.

ಈ ಭೂಮಿಯ ಮೇಲೆ ಅವತರಿಸಿರುವ ಪ್ರತಿಯೊಂದು ಜೀವಿಯೂ ಪರಸ್ಪರ ಬೆಸೆದುಕೊಂಡಿದೆ. ಪ್ರಾಣಿಗಳು, ಪಕ್ಷಿಗಳು, ಮನುಷ್ಯರು ಹಾಗೂ ಗಿಡ-ಮರಗಳು; ಎಲ್ಲವೂ ಈ ಪರಸ್ಪರ ಬೆಸೆದುಕೊಳ್ಳುವ ತಂತುಗಳನ್ನು ಹೊಂದಿವೆ. ಈ ತಂತುಗಳ ಮೂಲದ ಸೆಲೆ ಪ್ರಕೃತಿಯಲ್ಲಿದೆ. ಇಡೀ ಜೀವಪ್ರಕೃತಿಯನ್ನು ತಾನಾಗಿರಿಸಿಕೊಂಡಿರುವ ಭೂತಾಯಿಯು ತನ್ನ ಪ್ರಕೃತಿ-ಸಹಜತೆಯಿಂದ ಜೀವ ಜಗತ್ತಿನ ಸಮತೋಲನವನ್ನು ಕಾಪಾಡಲು ಶಕ್ತಳಾಗಿದ್ದಾಳೆ. ಆದರೆ, ನಾವು ಅವಳ ಮೂಲದ ಸೆಲೆಯೊಂದಿಗೆ ಬೆಸೆದುಕೊಳ್ಳದೇ, ಸಂಪರ್ಕವನ್ನು ಏರ್ಪಡಿಸಿಕೊಳ್ಳದೇ ಸಹಜೀವಿಗಳೊಂದಿಗೆ ಸಾಮರಸ್ಯದಿಂದ ಇರುವುದನ್ನು ಕಳೆದುಕೊಂಡಿದ್ದೇವೆ. ಯಾರ ಪರ ಅಥವಾ ವಿರೋಧ ಪಕ್ಷಕ್ಕೆ ಜಾರದ ಪ್ರಕೃತಿ ಮಾತೆ ಬರಿದೇ ದಾತೆಯಾಗಿರುವುದರಿಂದ, ಅವಳ ಮೂಲ ಉದ್ದೇಶಕ್ಕೆ ನಾವು ವ್ಯತಿರಿಕ್ತವಾಗಿ ನಡೆಯದೇ, ಅವಳನ್ನು, ಅವಳ ಧ್ಯೇಯವನ್ನು, ಅವಳ ದಾರಿಯನ್ನು ಅನುಸರಿಸಬೇಕಾಗಿರುವುದು ಒಂದು ಶ್ರೇಷ್ಠವಾದ ಮೌಲ್ಯವೂ ಹೌದು, ಜೀವಜಗತ್ತು ಉಳಿಯಲು ಆವಶ್ಯವೂ ಹೌದು ಎಂಬ ಉದಾತ್ತ ಸಂದೇಶವನ್ನು ದೊಡ್ಡ ಪ್ರಮಾಣದಲ್ಲಿ ಜಗತ್ತಿನ ಸಹಜೀವಿಗಳೊಂದಿಗೆ ಹಂಚಿಕೊಳ್ಳಲು ಯತ್ನಿಸಿದ ಜೇಮ್ಸ್ ಕೇಮರಾನ್ ಒಬ್ಬ ಮಾನವತಾವಾದಿ ಮತ್ತು ಭೂ ಧರ್ಮೀಯ.

ಗ್ರೀಕಿನ ಜಿಯಾ- ಅಂದರೆ ಭೂ-ತಾಯಿ ಎಂಬ ಪುರಾತನ ದೇವತೆಯ ಪರಿಕಲ್ಪನೆಯಿಂದ ಪ್ರೇರೇಪಿತವಾಗಿರುವ ಕಥಾಸಾರವನ್ನು 'ಅವತಾರ್' ಒಳಗೊಂಡಿದೆ.

ಧರ್ಮ ವರ್ಸಸ್ ಸಂಸ್ಕೃತಿ

ಭಾರತವನ್ನೂ ಒಳಗೊಂಡಂತೆ ವಿಶ್ವದ ನಾನಾ ಸಂಸ್ಕೃತಿಗಳಲ್ಲಿ ಭೂಮಿಯನ್ನು ಪೌರಾಣಿಕ ಪರಿಕಲ್ಪನೆಯಲ್ಲಿ ಅತಿರಂಜಿತವಾಗಿ ವರ್ಣಿಸಿದ್ದಾರೆ. ಅವುಗಳು ಆಯಾ ಸಂಸ್ಕೃತಿಗಳ ಹಿನ್ನೆಲೆಗಳ ಪ್ರತಿಫಲನವೇ ಹೊರತು, ಅದನ್ನು ಹೇಗೂ ವಾಸ್ತವದಲ್ಲಿ ಪರಿಗಣಿಸಲು ಸಾಧ್ಯವಿಲ್ಲ. ಭೂಮಿ ಚಪ್ಪಟೆಯಾಗಿತ್ತು, ಇಲ್ಲ ಗೋಲಾಕಾರವಾಗಿದೆ ಎಂಬ ಸಂಘರ್ಷ 19ನೆಯ ಶತಮಾನದವರೆಗೂ ಎಳೆದುಕೊಂಡೇ ಬಂದಿತ್ತು. ಭೂಮಿ ಚಪ್ಪಟೆಯಾಗಿತ್ತು ಎಂದು ವಾದಿಸುತ್ತಿದ್ದವರು ಧರ್ಮಗಳನ್ನು ಗುತ್ತಿಗೆಗೆ ಹಿಡಿದ ಸನಾತನವಾದಿಗಳಾದ ಕರ್ಮಠ ಧರ್ಮಾಧಿಕಾರಿಗಳೇ ಹೊರತು ಯಾವುದೇ ಸಂಸ್ಕೃತಿಯ ಪ್ರತಿನಿಧಿಗಳಲ್ಲ. ಧರ್ಮ ಮತ್ತು ಸಂಸ್ಕೃತಿಯನ್ನು ಒಟ್ಟಾಗಿಸುವ ಅಪಾಯ ಬಹು ಹಿಂದಿನಿಂದಲೂ ಇದೆ. ಭೂಮಿ ಎಂಬುವುದನ್ನು ರಾಷ್ಟ್ರ ಎಂಬುದಕ್ಕೆ ಸಮೀಕರಿಸಿ, ಸಂಸ್ಕೃತಿಯೆಂಬುದನ್ನು ಧರ್ಮಕ್ಕೆ ಸಮೀಕರಿಸಿ ಸಂಕುಚಿತಗೊಳಿಸುವ ಮಂದಿಯ ಹುನ್ನಾರ ಮಾತ್ರ ಅತ್ಯಂತ ಆಶ್ಚರ್ಯ ಮತ್ತು ಆಘಾತಕರ. ಹೀಗಾದಾಗಲೇ ವಿಜ್ಞಾನಕ್ಕೂ ಮತ್ತು ಧರ್ಮಕ್ಕೂ, ಮಾನವ ಅಥವಾ ಸಮಾಜಶಾಸ್ತ್ರೀಯ ಅಭ್ಯಾಸಿಗಳಿಗೂ ಮತ್ತು ಧರ್ಮದ ಪ್ರತಿನಿಧಿಗಳಿಗೂ ಸಂಘರ್ಷವುಂಟಾಗುವುದು.

ಧರ್ಮ ಎಂದರೆ ರಿಲೀಜಿಯನ್ ಎಂಬ ಅರ್ಥದಲ್ಲಿ ಉಪಯೋಗಿಸುವಾಗ ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ, ಸಂಸ್ಕೃತಿಯೇ ಧರ್ಮಕ್ಕಿಂತ ಪುರಾತನವಾದದ್ದು. ತಮ್ಮ ಸಂಸ್ಕೃತಿಯನ್ನು, ಅದರ ಹಿನ್ನೆಲೆಯನ್ನು ಮರೆತು ಧರ್ಮಕ್ಕೆ ಜೋತು ಬಿದ್ದಾಗ ಸಂಸ್ಕೃತಿಯ ಉದಾತ್ತತೆ ನಾಶವಾಗುತ್ತದೆ. ವ್ಯಕ್ತಿ ಔದಾರ್ಯ ಹೀನನಾಗುತ್ತಾನೆ.

ವೇದಗಳಲ್ಲೇ ರಾಷ್ಟ್ರದ ಪರಿಕಲ್ಪನೆ ಇತ್ತು ಎಂದು ವಾದಿಸುವ ಜನ ಈಗಲೂ ಅಂತಹ ವೈದಿಕ ರಾಷ್ಟ್ರದ ಅಥವಾ ಹಿಂದೂ ರಾಷ್ಟ್ರದ ಪುನರುತ್ಥಾನಕ್ಕೆ ಶ್ರಮಿಸಬೇಕು ಎಂದು ಕರೆಕೊಡುತ್ತಾರೆ. "ಋಷಿಗಳ ತಪಸ್ಸಿನಿಂದ ರಾಷ್ಟ್ರದ ಉದಯವಾಯಿತು" ಎಂದು ಡಾ.ಎಂ. ಶಿವಕುಮಾರ ಸ್ವಾಮಿಗಳೂ ಕೂಡ ಹಿಂದೂ ಪರ ಸಂಘಟನೆಗಳ ಪ್ರತಿನಿಧಿಯಂತೆ ತಮ್ಮ "ಅಥರ್ವ ವೇದದ ಪೃಥಿವೀ ಸೂಕ್ತದಲ್ಲಿ ರಾಷ್ಟ್ರದ ಕಲ್ಪನೆ" ಎಂಬ ಲೇಖನದಲ್ಲಿ ವಿವರಿಸಿದ್ದಾರೆ. ಹಿಂದೆ ಭೂಮಿಯ ಪರಿಕಲ್ಪನೆಯ ಮಿಥ್ ಹೇಗಿತ್ತೋ ಹಾಗೆಯೇ ಇಂದು ರಾಷ್ಟ್ರೀಯತೆಯ ಮಿಥ್ ಪ್ರಚಲಿತದಲ್ಲಿದೆ. ಅದೆಲ್ಲದರ ಬಗ್ಗೆ ಮುಂದೆ ನೋಡೋಣ. ●

'ನಮೋ' ಬ್ರಿಗೇಡ್ ಬಾಯಿಗೆ ಬೀಗ ಬಿದ್ದಿದೆ

ಬೆಲೆ ಏರಿಕೆ, ಭ್ರಷ್ಟಾಚಾರ ಮತ್ತು ಕುಂಠಿತ ಅಭಿವೃದ್ಧಿಗಳನ್ನೇ ಮುಖ್ಯ ವಿಷಯವಾಗಿಟ್ಟುಕೊಂಡು ಜನರನ್ನು ಭಾಷಣದ ಮೋಡಿಯಲ್ಲಿ ಮುಳುಗಿಸಿ ಅಧಿಕಾರದ ಗದ್ದುಗೆಯೇರಿದವರು ಇದೀಗ ಉಲ್ಟಾ ಹೊಡೆಯುತ್ತಿರುವುದನ್ನು ಕಂಡು ಇವರಿಗೆ ವೋಟು ಹಾಕಿದವರೆಲ್ಲ ಕಂಗಾಲಾಗಿದ್ದರೆ ಅದರಲ್ಲಿ ಅಚ್ಚರಿಯೇನಿದೆ? ಚುನಾವಣೆಗೆ ಮುನ್ನ ಕಿರಾಣಿ ಅಂಗಡಿಯಾತ, ಸಣ್ಣ ಹೋಟೆಲ್ ಮಾಲಿಕ, ಕಾರು ರಿಕ್ಷಾ ಡ್ರೈವರ್, ಟೆಕ್ಕಿಗಳಂಥವರು "ಅವರಂತೂ ಮಿತಿಯಿಲ್ಲದ ಭ್ರಷ್ಟಾಚಾರ ಮಾಡಿದರು. ಇವರಿಗೊಂದು ಛಾನ್ಸ್ ಕೊಟ್ಟು ನೋಡೋಣ" ಎಂದು ಹೇಳುತ್ತಿದ್ದರು. "ಒಂಭೂರು ಕಾದು ನೋಡಿ. ಅಕ್ಕಿ, ಬೇಳೆ, ಎಣ್ಣೆ, ತರಕಾರಿ, ಡೀಸೆಲ್, ಪೆಟ್ರೋಲ್, ಗ್ಯಾಸ್ ಬೆಲೆಗಳು ಹೇಗೆ ಪಾತಾಳಕ್ಕಿಳಿಯಲಿವೆ" ಎನ್ನುತ್ತಿದ್ದ ಅದೇ ಮಂದಿಯ ಬಾಯಿಗಿಂದು ಬೀಗ ಬಿದ್ದಿದೆ.

ರೈಲು ಪ್ರಯಾಣ ಮತ್ತು ಸರಕು ಸಾಗಾಣಿಕೆಯ ದರ ಹೆಚ್ಚಿಸುವ ಪ್ರಸ್ತಾಪ, ಅಡುಗೆ ಅನಿಲದ ಬೆಲೆಯನ್ನು ಪ್ರತಿತಿಂಗಳು ರೂ. 10ರಂತೆ ಏರಿಸುತ್ತಾ ಬೆಂಬಲ ಬೆಲೆಯನ್ನೇ ಇಲ್ಲವಾಗಿಸುವ ಯೋಚನೆ, ಸಕ್ಕರೆ ಆಮದಿನ ಮೇಲೆ ಸುಂಕ ಹೆಚ್ಚಿಸುವ ನಿರ್ಧಾರ, ಕಬ್ಬು ಬೆಳೆಗಾರರಿಗೆ ಸುಮಾರು 15,000 ಕೋಟಿಯಷ್ಟು ಬಾಕಿ ಇರಿಸಿಕೊಂಡಿರುವ ಸಕ್ಕರೆ ಕಾರ್ಖಾನೆ ಮಾಲೀಕರಿಗೆ 4400 ಕೋಟಿ ಬಡ್ಡಿರಹಿತ ಸಾಲ ಮತ್ತು ಇನ್ನೂ ಏನೇನೋ ಸವಲತ್ತುಗಳನ್ನು ಒದಗಿಸುತ್ತಿರುವುದು, ವಿಶೇಷ ಆರ್ಥಿಕ ವಲಯಗಳಿಗೆ ಮರುಜೀವ ನೀಡುತ್ತಿರುವುದು, ಈರುಳ್ಳಿ ಬೆಲೆ ಗಗನಕ್ಕೇರುತ್ತಿರುವುದು, ಇನ್ನಿತರ ದಿನಬಳಕೆಯ ವಸ್ತುಗಳ ಬೆಲೆಗಳಲ್ಲೂ ಏರಿಕೆ ಇತ್ಯಾದಿ, ಇತ್ಯಾದಿ ಸುದ್ದಿಗಳನ್ನು ಕೇಳುತ್ತಿದ್ದಂತೆ ಜನರಿಗೆ ಷಾಕ್ ಹೊಡೆದಂತಾಗಿದೆ. ಜನರೀಗ ಸಂಸತ್ತಿನ ಮೆಟ್ಟಿಲಿಗೆ ತಲೆಬಾಗಿ ಬಡ, ದಮನಿತ ಜನರ ಬಗ್ಗೆ ಎದೆ ಕರಗುವಂಥಾ ಭಾಷಣ ಮಾಡಿದವರು ಇವರೇನಾ ಎಂದು ಕೇಳುತ್ತಿದ್ದಾರೆ. ಇವರ 'ಒಳ್ಳೆಯ ದಿನಗಳು ಬರಲಿವೆ' ಎಂಬ ಭರವಸೆಗಳೆಲ್ಲ ಯಾರ ಸಲುವಾಗಿ ಎಂದು ತಲೆ ಕೆರೆದುಕೊಳ್ಳುತ್ತಿದ್ದಾರೆ. ಇವರ ಪಿಳ್ಳೆ ನೆವಗಳನ್ನು, ಖೊಟ್ಟಿ ಸಮಜಾಯಿಷಿಗಳನ್ನು, ಬಾಲಿಶ ಸಮರ್ಥನೆಗಳನ್ನು ಕೇಳಿ ನಗಬೇಕೊ ಅಳಬೇಕೊ ಎಂದು ತಿಳಿಯದಾಗಿದ್ದಾರೆ.

ಇನ್ನೊಂದು ಸ್ತರದಲ್ಲಿ ಇನ್ನಿತರ ವಿಲಕ್ಷಣ ವಿದ್ಯಮಾನಗಳು




ಜರುಗುತ್ತಿರುವುದನ್ನು ಕಾಣಬಹುದಾಗಿದೆ. ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯರು ಠೇವಣಿ ಇಟ್ಟಿರುವ ಹಣ ಲಕ್ಷಾಂತರ ಕೋಟಿ ರೂಪಾಯಿಗಳ ಬದಲು ಬರೀ 14,000 ಕೋಟಿಯಷ್ಟಿರಬಹುದೆಂದು ತಿಳಿದುಬಂದಿರುವುದು ಚುನಾವಣಾ ಕಾಲದಲ್ಲಿ ಊದಿದ ಬೂಸಿ ಬಲೂನಿಗೆ ಸೂಜಿ ಚುಚ್ಚಿದಂತಾಗಿದೆ. ಈ 14,000 ಕೋಟಿಯಲ್ಲಿ ಬಿಳಿ, ಕಪ್ಪುಗಳ ಅನುಪಾತವೆಷ್ಟೆಂದು ತಿಳಿದಾಗ ಮೊತ್ತ ಇನ್ನಷ್ಟು ಕಮ್ಮಿಯಾಗಬಹುದೆನ್ನುವುದು ಬೇರೆ ವಿಚಾರ. ಆದರೀಗ ಪ್ರಶ್ನೆ ಏನೆಂದರೆ ಮಿಕ್ಕ ಲಕ್ಷಾಂತರ ಕೋಟಿ ಕಾಳಧನ ಎಲ್ಲಿದೆ? ಅದನ್ನು ಪತ್ತೆ ಹಚ್ಚುವ ಮಾತುಗಳೇಕೆ ಕೇಳಿಸುತ್ತಿಲ್ಲ? ದಿನನಿತ್ಯದ ವ್ಯಾಪಾರ, ವಹಿವಾಟುಗಳಲ್ಲಿ, ಹೈಟೆಕ್ ಮಠ, ಮಂದಿರ, ಆಶ್ರಮ ಮುಂತಾದ ಜಾಗಗಳಲ್ಲಿ ದೇಶದೊಳಗೇ ಉತ್ಪಾದನೆಯಾಗುವ ಕಪ್ಪುಹಣದ ಬಗ್ಗೆ ಯಾಕೆ ಯಾರೂ ಚಕಾರವೆತ್ತುತ್ತಿಲ್ಲ? ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಫೈನಾನ್ಸ್ ಅಂಡ್ ಪಾಲಿಸಿ (NIPFP) ಎಂಬ ಸಂಸ್ಥೆ ಈಗಾಗಲೆ ಭಾರತದಲ್ಲಿ ಮತ್ತು ವಿದೇಶಗಳಲ್ಲಿರುವ ಕಪ್ಪುಹಣದ ಬಗ್ಗೆ ಅಧ್ಯಯನ ನಡೆಸಿ ಅದರ ಮೊತ್ತ ಏನಿಲ್ಲೆಂದರೂ 500ರಿಂದ 1400 ಬಿಲಿಯ ಡಾಲರುಗಳಷ್ಟಿರಬಹುದೆಂದು ಅಂದಾಜಿಸಿದೆ. ಇದು ಮೋದಿ ಸರ್ಕಾರಕ್ಕೆ ಗೊತ್ತಿದೆಯಾದರೂ ಅದೇಕೆ ಈಗ ಗಪ್‌ಚುಪ್ ಆಗಿದೆ?

ಮತ್ತೊಂದೆಡೆ ಹಿಂದುತ್ವದ ಮುಖ್ಯ ಅಜೆಂಡಾ ಬಾಲಬಿಚ್ಚುತ್ತಿದೆ. ಕಾಶ್ಮೀರದಲ್ಲಿ ಜಾರಿಯಲ್ಲಿರುವ ಸಂವಿಧಾನದ 370ನೆ ವಿಧಿಯನ್ನು ಕಿತ್ತುಹಾಕಬೇಕೆಂಬ ಆಗ್ರಹ ಪುಟಿದೆದ್ದಿದೆ. ಸಮಾನ ನಾಗರಿಕ ಸಂಹಿತೆಯ ಗುಮ್ಮ ಮತ್ತೊಮ್ಮೆ ಕಪಾಟಿನಿಂದ ಹೊರಬಂದಿದೆ. ಮಹಾರಾಷ್ಟ್ರ, ಹರಿಯಾಣಾ, ಉತ್ತರ ಪ್ರದೇಶಗಳಲ್ಲಿ ಕೋಮು ಅಟ್ಟಹಾಸ ಹೆಚ್ಚುತ್ತಿದೆ. ಇತರ ರಾಜ್ಯಗಳಲ್ಲಿಯೂ ಕೋಮುವಾದಿಗಳ ಹೂಂಕಾರ ಆರಂಭವಾಗಿದೆ. ಉಗ್ರ ಸಾಂಸ್ಕೃತಿಕ ಪೊಲೀಸರ ಮೂರನೆಯ ಕಣ್ಣು ತೆರೆದಿದೆ. ತಮ್ಮ ಮೂಗಿನ ನೇರಕ್ಕಿರದ ಪುಸ್ತಕಗಳನ್ನೆಲ್ಲ ಸಾರಾಸಗಟಾಗಿ ನಿಷೇಧಿಸುವ ಕಾರ್ಯ ಚುರುಕುಗೊಂಡಿದೆ. ಪಠ್ಯಪುಸ್ತಕಗಳ ಕೇಸರೀಕರಣದ ಪೆಟ್ ಯೋಜನೆಗೆ ಹಸಿರು ನಿಶಾನೆ ಸಿಕ್ಕಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಮೋದಿಯನ್ನು ಟೀಕಿಸುವವರು ಸೀದಾ ಜೈಲಿಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ವ್ಯಂಗ್ಯ ಚಿತ್ರಕಾರರು ಎಚ್ಚರದಿಂದ ಕುಂಚ ಬಳಸಬೇಕಾದ ಸ್ಥಿತಿ ನಿರ್ಮಾಣವಾಗುತ್ತಿದೆ. ಹೀಗೇ ಮುಂದುವರಿದರೆ ಕಾರ್ಪೊರೇಟು ಒಡೆತನಕ್ಕೆ ಬಲಿಯಾಗದೆ ಉಳಿದ ಬೆರಳೆಣಿಕೆಯ ಮಾಧ್ಯಮಗಳ ಸರದಿಗೆ ದಿನ ದೂರವಿಲ್ಲ. ಗುಪ್ತಚರ ಇಲಾಖೆಯನ್ನು ಎನ್‌ಜಿಓಗಳ ಮೇಲೆ ಛೂಬಿಟ್ಟು ಅವು 'ಗುಜರಾತ್ ಮಾದರಿ ಅಭಿವೃದ್ಧಿ'ಯನ್ನು ಇಡೀ ದೇಶಕ್ಕೆ ವಿಸ್ತರಿಸುವಲ್ಲಿ ಅಡ್ಡಿಯಾಗಿವೆ ಎನ್ನುತ್ತಾ ಅವುಗಳನ್ನೆಲ್ಲ ಸುಮ್ಮನಾಗಿಸುವ ಯತ್ನ ಶುರುವಾಗಿದೆ. 2002ರ ಹತ್ಯಾಕಾಂಡ, ಸೊಹ್ರಾಬುದ್ದೀನ್, ಇಶ್ರತ್ ಜಹಾನ್ ಇತ್ಯಾದಿ ನಕಲಿ ಎನ್ಕೌಂಟರ್‌ಗಳು, ಸ್ನೂಪ್‌ಗೇಟ್ ಮತ್ತಿತರ ಪ್ರಕರಣಗಳ ತನಿಖೆ ಹಳ್ಳ ಹಿಡಿಯುವ ಕುರಿತು ಎಳ್ಳಷ್ಟು ಸಂಶಯ ಉಳಿದಿದೆಯೇ? ಇನ್ನೊಂದು ಕಡೆ ದಿನಾ ಬೆಳಗಾದರೆ ಸ್ವದೇಶೀ ಮಂತ್ರ ಜಪಿಸುವ ಅಷಾಢಭೂತಿ ಗುಂಪುಗಳು ದೇಶದ ಭದ್ರತೆಗೆ ಸಂಬಂಧಿಸಿದ ರಕ್ಷಣಾ ಸಾಮಗ್ರಿ, ಮಾಧ್ಯಮ, ರೈಲ್ವೆ ಮೊದಲಾದ ಕ್ಷೇತ್ರಗಳಲ್ಲಿ 100% ವಿದೇಶೀ ನೇರ ಹೂಡಿಕೆಯ ಪ್ರಸ್ತಾಪದ ಬಗ್ಗೆ ಉಸಿರೆತ್ತದಿರುವುದು ತುಂಬಾ ಕುತೂಹಲಕಾರಿಯಾಗಿದೆ. ಯಾರಿಗೂ ಬೇಡವಾದ ಅಣು ವಿದ್ಯುತ್ ಸ್ಥಾವರಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವುದಕ್ಕೂ ಇವರದೇನೂ ಆಕ್ಷೇಪ ಇರುವಂತಿಲ್ಲ.

ಈ ರೀತಿ ಪ್ರತಿರೋಧದ ಧ್ವನಿಗಳನ್ನು ಅಡಗಿಸುವ ಹುನ್ನಾರ, ಸಮೂಹ ಮಾಧ್ಯಮಗಳನ್ನೆಲ್ಲ ತುತ್ತೂರಿಯಾಗಿಸುವ ಯತ್ನ, ಆಡಳಿತದಲ್ಲಿ ಕಡಿಮೆಯಾಗುತ್ತಿರುವ ಪಾರದರ್ಶಕತೆ, ಕಾರ್ಪೊರೇಟ್‌ಗಳಿಗೆ ಕೆಂಪು ಹಾಸು, ಅಲ್ಪಸಂಖ್ಯಾತ ಪ್ರಜೆಗಳಲ್ಲಿ ಭಯ, ಅಭದ್ರತೆ ಹುಟ್ಟಿಸಿ ಅವರನ್ನು ದ್ವಿತೀಯ ದರ್ಜೆಗೆ ತಳ್ಳುವ ಪ್ರಯತ್ನ, ಸಕಲ ವ್ಯವಹಾರಗಳು ಒಬ್ಬ ವ್ಯಕ್ತಿಯಲ್ಲಿ ಕೇಂದ್ರೀಕೃತಗೊಳ್ಳುತ್ತಿರುವುದು ಇವೆಲ್ಲವೂ ಯಾವುದರ ಮುನ್ಸೂಚನೆ?

● ಸುರೇಶ್ ಭಟ್ ಬಾಕ್ರಬೈಲ್





ಬುದ್ಧಿಜೀವಿಗಳ ಅವಹೇಳನ ನಿಲ್ಲಲಿ

'ಬುದ್ಧಿಜೀವಿಗಳು', 'ವಿಚಾರವಾದಿಗಳು', 'ಚಿಂತಕರು' ಮೊದಲಾದ ಪರಿಭಾಷೆಗಳನ್ನು ಅಪಮಾನಿಸುವ, ತುಚ್ಛೀಕರಿಸುವ, ಲೇವಡಿ ಮಾಡುವ ಹಾಗೂ ಬುದ್ಧಿಜೀವಿಗಳನ್ನು ಬೆದರಿಸುವ, ಸದೆಬಡಿವ ಹಾಗೂ ಅಪ್ರಸ್ತುತಗೊಳಿಸುವ ಸಾಂಸ್ಕೃತಿಕ ರಾಜಕಾರಣ ಹಿಂದೆಂದಿಗಿಂತಲೂ ಇಂದು ತೀವ್ರವಾಗಿ ಕ್ರಿಯಾಶೀಲವಾಗಿದೆ. ಈ ಬಗೆಯ ಮನೋಧರ್ಮವನ್ನು ಸಾಮಾಜಿಕ ವಿವೇಕವಾಗಿಸುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ನವಬಂಡವಾಳವಾದ ಹಾಗೂ ಕೋಮುವಾದಗಳು ಸಮಾಜವನ್ನು ಸಂಪೂರ್ಣವಾಗಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ನಡೆಸುತ್ತಿರುವ ಸಾಂಸ್ಕೃತಿಕ ಕಾರ್ಯಾಚರಣೆಗಳಲ್ಲಿ ಇದೂ ಒಂದು. ಕಠೋರ ಸತ್ಯವನ್ನು ನುಡಿವ ಚಿಂತಕರನ್ನು ಹತ್ತಿಕ್ಕುವ ಕೊಲ್ಲುವ ಚರಿತ್ರೆ ಇಂದು ನಿನ್ನೆಯದಲ್ಲ. ಚಾರ್ವಾಕರನ್ನು ಹತ್ತಿಕ್ಕಲಾಯಿತು. ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಬುದ್ಧಿಜೀವಿಗಳನ್ನು ಹತ್ತಿಕ್ಕಲಾಯಿತು. ಮಧ್ಯಕಾಲೀನ ಯುರೋಪಿನಲ್ಲಿ ಚರ್ಚ್ ಈ ಕೆಲಸ ಮಾಡಿತು. ಕರ್ನಾಟಕದಲ್ಲಿ ಮುಸ್ಲಿಂ ಮೂಲಭೂತವಾದಿಗಳು ಮತ್ತು ಹಿಂದೂ ಪುರೋಹಿತಶಾಹಿಗಳು ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿಯಂತ್ರಿಸುವ ಯತ್ನವೂ ಹೊಸದಲ್ಲ. ಈ ಪಟ್ಟಿಗೆ ಕಳೆದ ಮೂರು ದಶಕಗಳಿಂದ ಬಲಿಷ್ಠ ಜಾತಿಗಳಲ್ಲಿರುವ ಕೆಲವೇ ಸಂಖ್ಯೆಯ ಪ್ರತಿಗಾಮಿಗಳೂ ಸೇರಿದ್ದಾರೆ. ಅಸಮಾನತೆ ಮತ್ತು ಮೌಢ್ಯಗಳ ವಿರುದ್ಧ ದನಿ ಎತ್ತುವ 'ಬುದ್ಧಿಜೀವಿಗಳ ನಿಲುವುಗಳು ಪಟ್ಟಭದ್ರರ ವರ್ಗಹಿತಾಸಕ್ತಿಗೆ ಅಪ್ರಿಯವಾಗುವುದರಿಂದ ಅವರನ್ನು ಪರೋಕ್ಷವಾಗಿ ಬಡಿಯಲು ನೆಪಗಳನ್ನು ಹುಡುಕಲಾಗುತ್ತದೆ. ಡಾ.ಯು.ಆರ್.ಅನಂತಮೂರ್ತಿಯವರ ವಿಷಯದಲ್ಲಿಯೂ ಅದು ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಶಿವಮೊಗ್ಗೆಯ ಸ್ನೇಹಿತರ (17 ನೇ ಜೂನ್, ಪ್ರ.ವಾ. ವಾ.ವಾ) ಅಭಿಪ್ರಾಯಗಳನ್ನು ನಾವು ಬೆಂಬಲಿಸುತ್ತೇವೆ. ಹಾಗೆಯೇ ಡಾ. ಟಿ.ಎನ್. ವಾಸುದೇವಮೂರ್ತಿಯವರ (18ನೇ ಜೂನ್, ಪ್ರ.ವಾ. ವಾ.ವಾ) 'ಕಟ್ಟಕಾಲದಲ್ಲಿಯೇ ಬುದ್ಧಿಜೀವಿಗಳೆನಿಸಿಕೊಂಡವರ ವಿಚಾರಗಳ ಚರ್ಚೆ ಸಾರ್ವಜನಿಕ ವೇದಿಕೆಯಲ್ಲಿ ನಡೆಯಬೇಕೆಂಬ' ದಿಟ್ಟತನವನ್ನು ನಾವು ಬೆಂಬಲಿಸುತ್ತೇವೆ.

ಸಮುದಾಯಗಳು ತಮ್ಮ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾದವೆಂದು ಪ್ರತಿಭಟಿಸುವುದಕ್ಕೆ ಒಂದು ಸಹಜ ಭಿನ್ನಮತದ ಆಯಾಮವಿದೆ. ಆದರೆ ಜನರನ್ನು ನಿಮ್ಮ ಭಾವನೆಗಳಿಗೆ ಲೇಖಕರು, ಚಿಂತಕರು, ಧಕ್ಕೆ ಮಾಡುತ್ತಿದ್ದಾರೆಂದು ಪ್ರಚೋದಿಸಿ ಕೆರಳಿಸುವ ಕಾರ್ಯಾಚರಣೆಗೆ ಇನ್ನೊಂದು ಆಯಾಮವಿದೆ. ಈಗ ನಡೆಯುತ್ತಿರುವುದು ಎರಡನೆಯ ಆಯಾಮ. ದುರಂತವೆಂದರೆ ಡಾ.ಎಂ.ಎಂ.ಕಲಬುರ್ಗಿಯವರಂಥ ಹಿರಿಯ ವಿದ್ವಾಂಸರು ಇದಕ್ಕೆ ಚಾಲನೆ ನೀಡಿದರು. ಬಸವ ಪ್ರಶಸ್ತಿ ವಿವಾದ ಹಾಗೂ ವಿಚಾರಸಂಕಿರಣವೊಂದರ ಭಾಷಣದಲ್ಲಿ ಅನಂತಮೂರ್ತಿಯವರನ್ನು ಕುರಿತಂತೆ ಮತೀಯ ನೆಲೆಯಲ್ಲಿ ಸಮುದಾಯಗಳು ಕೆರಳುವಂಥ ಅಪವ್ಯಾಖ್ಯಾನ ಮಾಡಿದರು. ತನ್ನ ಸಹ ಲೇಖಕರೊಬ್ಬರನ್ನು ಕುರಿತಂತೆ ಲೇಖಕರೊಬ್ಬರ ಇಂಥ ಅಸಹನೆಯ ವರ್ತನೆಯನ್ನು ನಾವು ಖಂಡಿಸುತ್ತೇವೆ. ಲೇಖಕ, ಬುದ್ಧಿಜೀವಿಗಳ ವೈಯಕ್ತಿಕ ಭಿನ್ನಮತಕ್ಕೆ ಸೈದ್ಧಾಂತಿಕ ಆಯಾಮವಿದ್ದರೆ ಸರಿ. ಆದರೆ ಅದು ದ್ವೇಷ, ಅಸೂಯೆ, ಸಣ್ಣತನದ ರೂಪದಲ್ಲಿದ್ದರೆ ಅದರ ಪ್ರಯೋಜನವನ್ನು ಬ್ರಾಹ್ಮಣವಾದ, ಪುರೋಹಿತಶಾಹಿ ಪಡೆದುಕೊಳ್ಳುತ್ತದೆ. ಒಂದೇ ಕಲ್ಲಿಗೆ ಎರಡು ಹಕ್ಕಿಗಳನ್ನು ಹೊಡೆಯುವ ಅವಕಾಶವನ್ನು ಸಂಘ ಪರಿವಾರ ಹಾಗೂ ಪುರೋಹಿತಶಾಹಿ ಬಿಟ್ಟುಕೊಟ್ಟೀತೇ? ಇವುಗಳ ಹಿಡಿತದಲ್ಲಿರುವ ಕೆಲವು ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳು ಜನರನ್ನು ಕೆರಳಿಸುವ ವ್ಯವಸ್ಥಿತ ಕೆಲಸವನ್ನು ಮಾಡಿದವು. ಬುದ್ಧಿಜೀವಿಗಳ ಅಭಿಪ್ರಾಯಗಳು ಪ್ರಶ್ನಾತೀತವೇನಲ್ಲ. ಆದರೆ ಅವುಗಳ ಪರ ವಹಿಸುವ, ವಿರೋಧಿಸುವ ಪ್ರಕ್ರಿಯೆಗಳು ಪ್ರಜಾಸತ್ತಾತ್ಮಕವಾಗಿರಬೇಕು. ಆದರೆ ಇಬ್ಬರೂ ಲೇಖಕರ ಮೇಲೆ ಏಕಕಾಲದಲ್ಲಿ ದಾಳಿ ನಡೆಯಿತು ಮತ್ತು ಇನ್ನೂ ಮುಂದುವರೆದಿದೆ. ಈ ನಾಡಿನ ಹಿರಿಯ ಲೇಖಕರಿಬ್ಬರ ಮನೆಯ ಸುತ್ತ ಪೊಲೀಸು ಕಾವಲು ನಿಯೋಜಿಸುವಂಥ ಸಂದರ್ಭ ನಿರ್ಮಾಣವಾದದ್ದು ಸಮಾಜ ಫ್ಯಾಸಿಸಂ ಕಡೆಗೆ ಚಲಿಸುತ್ತಿರುವದರ ಸಂಕೇತವಾಗಿದೆ.



ಲೇಖಕರ ಭಿನ್ನಾಭಿಪ್ರಾಯ, ಅಸಹನೆಗಳನ್ನೇ ನೆಪ ಮಾಡಿಕೊಂಡು ಅವರ ಮೇಲೆ ಹಲ್ಲೆ ನಡೆಸಲು ಮುಂದಾಗುವ ಮೂಲಕ ಯಾವ ಸಂದರ್ಭಗಳಲ್ಲಿಯೂ ಬುದ್ಧಿಜೀವಿಗಳು ದನಿ ಎತ್ತಬಾರದು ಎಂಬ ಸಂದೇಶವನ್ನು ರವಾನಿಸುತ್ತಿರುವ ಕೋಮುವಾದಿ, ಮೂಲಭೂತವಾದಿ ಸಂಘಟನೆಗಳ, ಬಂಡವಾಳಶಾಹಿ ಹುನ್ನಾರಗಳ ಹಾಗೂ ಅವುಗಳ ಮುಖವಾಣಿಯಾಗಿ ಕೆಲಸ ಮಾಡುತ್ತಿರುವ ಕೆಲವು ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳ ಕಾರ್ಯಾಚರಣೆ ಹಾಗೂ ಫ್ಯಾಸಿಸ್ಟ್ ನಿಲುವುಗಳನ್ನು ನಾವು ಖಂಡಿಸುತ್ತೇವೆ. ಬಂಡವಾಳವಾದ, ಕೋಮುವಾದ, ಮೂಲಭೂತವಾದ ಹಾಗೂ ಬ್ರಾಹ್ಮಣವಾದಗಳಿಗೆ ನಾಸ್ತಿಕವಾದ, ವಿಚಾರವಾದ, ವೈಜ್ಞಾನಿಕತೆ, ದೇವರ ವಿರೋಧ, ಪುರೋಹಿತಶಾಹಿ ವಿರೋಧಗಳು ತಮ್ಮ ಅಸ್ತಿತ್ವವನ್ನು ಅಲ್ಲಾಡಿಸುವ ಸಂಗತಿಗಳಾಗಿ ಕಾಣುತ್ತವೆ. ಇದು ಸಾಧ್ಯವಾದರೆ ಅವುಗಳ ಏಕಾನಮಿ ಹಾಗೂ ಸಾಂಸ್ಕೃತಿಕ ನಾಯಕತ್ವಗಳಿಗೆ ಹೊಡೆತ ಬೀಳುತ್ತದೆ. ಶೂದ್ರ, ದಲಿತ, ಮಹಿಳೆ ಹಾಗೂ ಶೋಷಿತ ಸಮುದಾಯಗಳ ಮೇಲಿನ ಯಜಮಾನಿಕೆ ಕೊನೆಗೊಳ್ಳುತ್ತದೆ. ಆ ಆತಂಕದಿಂದ ಬುದ್ಧಿಜೀವಿಗಳನ್ನು ಅಪ್ರಸ್ತುತಗೊಳಿಸಲು ನಡೆಯುತ್ತಿರುವ ಯತ್ನಗಳು ಸ್ವಾತಂತ್ರ್ಯೋತ್ತರ ಭಾರತದ ಸಂವಿಧಾನ ಪ್ರಣೀತ ಸಮಾಜವಾದಿ ಜಾತ್ಯತೀತ ಪ್ರಜಾಸತ್ತಾತ್ಮಕ ಆಶಯವನ್ನು ಹಿಂಪಡೆಯುವ ನವಬ್ರಾಹ್ಮಣವಾದದ ಹುನ್ನಾರವಾಗಿವೆ. ಅದಕ್ಕೆ ಅನಂತಮೂರ್ತಿಯವರು ನೆ... ಮಾತ್ರ. ನಾಳೆ ಮತ್ತೊಬ್ಬರೂ ಹಲ್ಲೆಗೆ ಗುರಿಯಾಗಬಹುದು. ಆದ್ದರಿಂದ ಸಹಲೇಖಕರು ಇದು ವೈಯಕ್ತಿಕ ವಿಚಾರವೆಂದು ಸುಮ್ಮನಿರದೇ ಬುದ್ಧಿಜೀವಿಗಳನ್ನು ಕುರಿತಾಗಿ ನಡೆಯುತ್ತಿರುವ ಕೀಳುಮಟ್ಟದ ಚರ್ಚೆಗಳನ್ನು ವಿರೋಧಿಸಬೇಕಾಗಿದೆ. ಚಿಂತಕರಾದವರು ನಾಡಿನ ಹಿತದ ದೃಷ್ಟಿಯಿಂದ ಸಾಮಾಜಿಕ ಸಮಸ್ಯೆಗಳ ಮೇಲೆ ಚರ್ಚೆಯನ್ನು ಎತ್ತುವಾಗ, ... ಚರ್ಚೆಯನ್ನು ಪಟ್ಟಭದ್ರ ಹಿತಾಸಕ್ತಿಗಳು ದುರ್ಬಳ... ಮಾಡದಂತೆ ಎಚ್ಚರ ವಹಿಸುವ ಹೊಸಭಾಷೆ ಮತ್ತು ವಿಧಾನಗಳನ್ನು ಸಹ ಶೋಧಿಸಿಕೊಳ್ಳಬೇಕಾಗಿದೆ.

- ಡಾ. ಕೆ.ಆರ್. ದುರ್ಗಾದಾಸ್,
ಪ್ರೊ. ಅಶೋಕ ಶೆಟ್ಟರ್, ಜಗದೀ...
ಮಂಗಳೂರುಮಠ, ಡಾ. ಸಂಜೀವ ಕುಲಕರ್ಣಿ,
ಶಂಕರ ಹಲಗತ್ತಿ, ಡಾ.ಎಂ.ಡಿ.ಒಕ್ಕುಂದ,
ಡಾ. ವಿನಯಾ, ಸುನಂದಾ ಹಾಗು...
ಪ್ರಕಾಶ್ ಕಡಮೆ, ಬಸವರಾಜ ಸೂಳಿಭಾ...
ಮಹಾಂತೇಶ್ ನವಲ್ಕಲ್, ಬಿ. ಪೀರ್ ಬಾಷ...
ಅರುಣ ಜೋಳದಕೂಡಲ...

ಜೂನ್ 25, 2014ರ ಸಂಚಿಕೆಯಲ್ಲಿ 'ಫುಟ್‌ಬಾ... ಸಾಂಬಾ' ಲೇಖನಗಳು ಚೆನ್ನಾಗಿ ಮೂಡಿಬಂದಿದ್ದವು. ಆದ... ಅದರ ಜೊತೆಗೆ ಫಿಫಾ ವಿರುದ್ಧ ಬ್ರೆಜಿಲ್‌ನ ಕೊಳಗೇ... ನಿವಾಸಿಗಳು ನಡೆಸುತ್ತಿರುವ 'ಸ್ವಾಧೀನ ಹೋರಾಟ... ಬಗ್ಗೆಯೂ ಲೇಖನಗಳು ಬರಬೇಕಿತ್ತು. ಹಾಗೆಯೆ... ಫುಟ್‌ಬಾಲ್‌ನ ಪ್ರಮುಖ ಅಂಶಗಳು ಎಂಬ ಬಾಕ್ಸ್‌ನ... ಈ ಬಾರಿಯ ಪಂದ್ಯಗಳಿಗೆ ಫುಟ್‌ಬಾಲ್‌ಗಳ... ತಯಾರಿಸುತ್ತಿರುವ ದೇಶ ಪಾಕಿಸ್ತಾನ ಮತ್ತು ಅವು... ತಯಾರಿಕೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾ... ಎಂದೂ ಸೇರಿಸಬಹುದಿತ್ತು.

-ಸರೋವರ್ ಬೆಂಕಿನಕೆರೆ, ಎಸ್ ಎಂ ಎಸ್ ಮೂ...

ಮಣಿಪುರದಲ್ಲಿ 'ಇಂಡಿಯನ್ ಆರ್ಮಿ ರೇಪ್ ಅ...

ಹಾಲಿವುಡ್ ಹಾರ್ಟ್ ಮೆರಿಲ್ ಸ್ಟ್ರೀಪ್



'ಕ್ರೇಮರ್ ವರ್ಸಸ್ ಕ್ರೇಮರ್', 'ದಿ ಐರನ್ ಲೇಡಿ', 'ದಿ ಬ್ರಿಡ್ಜಸ್ ಆಫ್ ಮ್ಯಾಡಿಸನ್ ಕಂಟ್ರಿ', 'ದಿ ಡೀರ್ ಹಂಟರ್', 'ಜೂಲಿ ಅಂಡ್ ಜೂಲಿಯ', 'ಮಮ್ಮ ಮಿಯಾ', 'ಸಿಲ್ಕ್ ವುಡ್', 'ದಿ ಹವರ್ಸ್', 'ಅಡಪ್ಟೇಷನ್' ಸೇರಿದಂತೆ ಸುಮಾರು ಎಪ್ಪತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಆಸ್ಕರ್ ಅವಾರ್ಡ್ ವಿಜೇತ ಹಾಲಿವುಡ್ ನಟಿ ಮೆರಿಲ್ ಸ್ಟ್ರೀಪ್ ಜೂನ್ 22ರಂದು ತಮ್ಮ 65ನೇ ವಯಸ್ಸಿಗೆ ಕಾಲಿಟ್ಟ ನೆಪದಲ್ಲಿ ಈ ಬರಹ....

ಕಳೆದ ಮೂರೂವರೆ ದಶಕಗಳಿಂದ ಜಗತ್ತನ್ನೇ ರಂಜಿಸುತ್ತಿರುವ ನಟಿ ಮೆರಿಲ್ ಸ್ಟ್ರೀಪ್. ಹಾಲಿವುಡ್ ಸಿನಿಮಾಗಳಿಗೆ ಹೊಸಬಗೆಯ ಬೆಡಗು, ಬೆರಗು ಮೂಡಿಸಿದವರ ಪೈಕಿ ಈಕೆಯ ಕೊಡುಗೆಯೂ ಅಪಾರವಾದುದ್ದೇ. ಈಕೆಗೂ ಮೊದಲು ಕ್ಯಾಥರೀನ್ ಹೆಪ್‌ಬರ್ಗ್, ಇನ್‌ಗ್ರಿಡ್ ಬರ್ಗ್‌ಮನ್, ಒಲಿವಿಯ, ಎಜಿಜಬೆತ್ ಟೇಲರ್, ಸೂಸನ್ ಹೇವರ್ಡ್ ತರಹದ ಪ್ರತಿಭಾವಂತ ಬೆಡಗಿಯರು ಪ್ರಪಂಚದ ಚಿತ್ರರಸಿಕರನ್ನು ಮೋಡಿ ಮಾಡಿದ್ದರೂ ಮೆರಿಲ್ ಇವರೆಲ್ಲರ ನಡುವೆ ಬೇರೆಯದೇ ಬಗೆಯಲ್ಲಿ ಗ್ರಹಿಕೆಗೆ ಸಿಗುತ್ತಾಳೆ. ಆಗ ನಾಟಕಗಳ ಜಮಾನ. ಆಗ ಯಾವೊಬ್ಬ ಕಲಾವಿದನಾಗಲಿ ನಾಟಕದ ಮೂಲಕವೇ ಬಣ್ಣದ ಲೋಕಕ್ಕೆ ಪ್ರವೇಶ ಪಡೆದುಕೊಳ್ಳುತ್ತಿದ್ದ ಕಾಲಮಾನವದು. ಆ ಸಂಪ್ರದಾಯಕ್ಕೆ ಮೆರಿಲ್ ಕೂಡ ಹೊರತಾಗಿಲ್ಲ; 'ಹೆನ್ರಿ-5', 'ದಿ ಟೇಮಿಂಗ್ ಆಫ್ ದಿ ಶ್ರೂ', 'ಮೆಷರ್ ಫಾರ್ ಮೆಷರ್' ಬಗೆಯ ನಾಟಕಗಳಲ್ಲಿ ನಟಿಸುವ ಮೂಲಕ ಆ ಕಾಲಕ್ಕೆ ನ್ಯೂಯಾರ್ಕ್, ನ್ಯೂಜೆರ್ಸಿಗಳಲ್ಲಿ ನಿಜಕ್ಕೂ ಸಂಚಲನ ಉಂಟುಮಾಡಿದ್ದಳು. ಆಕೆ ರಂಗದ ಮೇಲೆ ಬಂದರೆ ಜನ ಕಣ್ಣು ಮಿಟುಕಿಸದೆ ನೋಡುತ್ತಿದ್ದಂಥ ಕ್ಷಣಗಳಿಗೂ ಬರವಿರಲಿಲ್ಲ.

ಹೀಗೆ ನಾಟಕಗಳ ಮೂಲಕ ಕಲಾಲೋಕಕ್ಕೆ ಪಾದಾರ್ಪಣೆ ಮಾಡಿದ ಈಕೆ ನಂತರದ ದಿನಗಳಲ್ಲಿ ಸಿನಿಮಾಗಳಲ್ಲಿ ಕಾಣಿಸಿಕೊಂಡಳು. ಮೆರಿಲ್ ಸ್ಟ್ರೀಪ್ ನಟಿಸಿದ ಮೊದಲ ಸಿನಿಮಾ 'ಜೂಲಿಯ'. ಚಿತ್ರದ ಫ್ಲ್ಯಾಶ್ ಬ್ಯಾಕಿನಲ್ಲಿ ಬರುವ ಆಕೆ ನಟಿಸಿದ ಪಾತ್ರ ಪುಟ್ಟದಾದರೂ ಮಹತ್ವ ಉಳ್ಳದ್ದಾಗಿತ್ತು. ಮೆರಿಲ್ ತನ್ನೊಳಗಿನ ಕಲಾವಿದೆಯನ್ನು ತಕ್ಕಮಟ್ಟಿಗಾದರೂ ಜಗತ್ತಿನೆದುರು ತೆರೆದಿಡಲು ಸಹಕಾರಿಯಾಗಿತ್ತು. ಹೀಗೆ ಮೊದಮೊದಲಿಗೆ ಪೋಷಕ ಪಾತ್ರಗಳಲ್ಲಿಯೇ ನಟಿಸುತ್ತಿದ್ದ ಸ್ಟ್ರೀಪ್‌ಗೆ ಒಂದು ಬ್ರೇಕ್ ಅನ್ನುವಂಥದ್ದು ಸಿಕ್ಕಿದ್ದು 1977ರಲ್ಲಿ. ಆ ವರ್ಷ ಬರೋಬ್ಬರಿ ಮೂರು ಚಿತ್ರಗಳಲ್ಲಿ ನಟಿಸಿದ್ದಳು. ಆ ಪೈಕಿ 'ಮನ್‌ಹಟನ್' ರೊಮ್ಯಾಂಟಿಕ್ ಕಾಮಿಡಿ ಚಿತ್ರವಾದರೆ, 'ದಿ ಸೆಡಕ್ಷನ್ ಆಫ್ ಜೋ ಟೈಟಾನ್' ಪೊಲಿಟಿಕಲ್ ಡ್ರಾಮಾ. ಇನ್ನು 'ಕ್ರೇಮರ್ ವರ್ಸಸ್ ಕ್ರೇಮರ್' ಪಕ್ಕಾ ಫ್ಯಾಮಿಲಿ ಡ್ರಾಮಾ. ಈ ಚಿತ್ರಗಳು ಮೆರಿಲ್ ಒಬ್ಬ ಅತ್ಯುತ್ತಮ ಪೋಷಕ ನಟಿ ಎಂಬುದನ್ನು ಸಾಬೀತುಮಾಡುವುದರ ಜೊತೆಗೆ 'ಲಾಸ್ ಏಂಜಲೀಸ್ ಫಿಲಂ ಕ್ರಿಟಿಕ್ಸ್ ಅಸೋಸಿಯೇಶನ್ ಅವಾರ್ಡ್', 'ನ್ಯಾಷನಲ್ ಬೋರ್ಡ್ ಆಫ್ ರಿವ್ಯೂ ಅವಾರ್ಡ್', 'ನ್ಯಾಷನಲ್ ಸೊಸೈಟಿ ಆಫ್ ಫಿಲಂ ಕ್ರಿಟಿಕ್ಸ್ ಅವಾರ್ಡ್' ಹಾಗೂ 'ಗೋಲ್ಡನ್ ಗ್ಲೋಬ್ ಅವಾರ್ಡ್' ತರಹದ ಅವಾರ್ಡ್‌ಗಳನ್ನೂ ಸ್ಟ್ರೀಪ್‌ಗೆ ತಂದುಕೊಟ್ಟಿದ್ದವು.

'ಜೂಲಿಯ' ಚಿತ್ರದಿಂದ ಹಿಡಿದು ಆಕೆಯ ಇತ್ತೀಚಿನ ಚಿತ್ರ 'ಆಗಸ್ಟ್: ಓಸೇಜ್ ಕಂಟ್ರಿ'ವರೆಗೆ ಮೆರಿಲ್ ತನ್ನದೇ ಹೆಜ್ಜೆಗುರುತು ಮೂಡಿಸುತ್ತಾ ನಡೆದವಳು. ನಟಿಸಬಲ್ಲ, ಹಾಡಬಲ್ಲ, ರಂಜಿಸಬಲ್ಲ ಈ ನಟಿಯನ್ನು ದಿನೇದಿನೇ ಮಾಗಿಸುತ್ತಾ ಹೋಗಿದ್ದು ತಾನು ನಿರ್ವಹಿಸಿದ ಬಗೆಬಗೆಯ ಪಾತ್ರಗಳು ಮತ್ತು ಜೀವನಾನುಭವ. 'ದಿ ಬ್ರಿಡ್ಜಸ್ ಆಫ್ ಮಾಡಿಸನ್ ಕಂಟ್ರಿ', 'ದಿ ಡೆವಿಲ್ ವೇರ್ಸ್ ಪ್ರಾಡ', 'ಸೋಫೀಸ್ ಚಾಯ್ಸ್', 'ದಿ ಐರನ್ ಲೇಡಿ', 'ಜೂಲಿ ಅಂಡ್ ಜೂಲಿಯ', 'ಮಮ್ಮ ಮಿಯ', 'ಮಾರ್ವಿನ್ಸ್ ರೂಂ', 'ಎವಿಲ್ ಏಂಜಲ್ಸ್', 'ಔಟ್ ಆಫ್ ಆಫ್ರಿಕಾ' ತರಹದ ಚಿತ್ರಗಳಲ್ಲಿ ನಟಿಸುತ್ತಾ ಮಾಗತೊಡಗಿದಳು. ಪಾತ್ರಗಳ ಜೀವಂತಿಕೆಯತ್ತ ಗಮನವಿಟ್ಟು ಶ್ರದ್ಧೆಯಿಂದ ವೃತ್ತಿಧರ್ಮ ಪಾಲಿಸತೊಡಗಿದಳು. ಆ ಮೂಲಕ ಜಗತ್ತೇ ಒಮ್ಮೆ ತಿರುಗಿ ನೋಡುವಂಥ ನಟಿ ಎನಿಸಿಕೊಂಡಳು. ನ್ಯೂಜೆರ್ಸಿಯ ಈ ಹುಡುಗಿ ತನ್ನ ಮಾತು, ವ್ಯಕ್ತಿತ್ವದ ಮೂಲಕ ಮತ್ತಷ್ಟು ಜನಪ್ರಿಯಳಾಗತೊಡಗಿದ್ದೂ ಖರೆ.

ಆಕೆಯ ಅಭಿನಯದಲ್ಲಿನ ಭಿನ್ನಭಿನ್ನ ಪ್ರಕಾರಗಳು ಹಿಡಿಸುತ್ತಾ ಹೋದವು. ಒಂದು ಪಾತ್ರದಲ್ಲಿ ಕಾಣಿಸಿಕೊಂಡಂತೆ ಇನ್ನೊಂದು ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರಲಿಲ್ಲ. ಪ್ರೇಯಸಿ, ಹಟಮಾರಿ, ಮುಗ್ಧೆ, ಬುದ್ಧಿವಂತೆ- ಈ ರೀತಿ ಬೇರೆ ಬೇರೆ ರೀತಿಯಲ್ಲಿ ತನ್ನೊಳಗಿನ ಅಪ್ರತಿಮ ಕಲಾವಿದೆಗೆ ಜೀವ ಕೊಡುತ್ತಾ ಬೆಳೆದಳು. ಇಂತಹ ಅಚ್ಚರಿಯ ಸಂಗತಿಗಳು ಮೆರಿಲ್‌ಳನ್ನು ಸ್ವಪ್ನಸುಂದರಿಯನ್ನಾಗಿಸಿದವು. ಪ್ರಪಂಚದ ಯುವಕರ ಹೃದಯಗಳಲ್ಲಿ ತರಂಗ ಎಬ್ಬಿಸುವಲ್ಲಿ ಆಕೆಯ ಸೊಂಪುಸೊಂಪಾದ ಬಂಗಾರ ಬಣ್ಣದ ಕೇಶ, ಕೋಲುಮುಖ, ಚುಂಬಕ ಕಣ್ಣು, ಸುಕೋಮಲ ಕತ್ತಿನಿಳಿಜಾರು, ಉದ್ದನೆಯ ಮೂಗು, ನುಣುಪುಗೆನ್ನೆ ಗೆದ್ದವು. ಹರೆಯದ ಹುಡುಗರನ್ನು ಥಿಯೇಟರಿಗೆ ಎಳೆದು ತರುವಲ್ಲಿ ಯಶಸ್ವಿಯಾಗಿದ್ದವು. ಮೆರಿಲ್‌ಳ ಚಿತ್ರಗಳನ್ನು ನೋಡಿದವರಿಗೆ ಈಕೆಯ ಮೃದು ಸ್ವಭಾವ, ನವಿರು ವ್ಯಕ್ತಿತ್ವ, ಪ್ರೇಮಿಸುವ ನಿಯತ್ತು, ಪ್ರಾಮಾಣಿಕತೆ ಇತ್ಯಾದಿಗಳು ಗೊತ್ತಾಗುತ್ತವೆ. ಇವತ್ತು ಮೆರಿಲ್ ವಿಶ್ವದ ಅದ್ಭುತ ನಟಿಯರ ಪೈಕಿ ಪ್ರಮುಖಳು. ಸರಳತೆಯ ಸಾಕಾರಮೂರ್ತಿಯಂತಿರುವ, ಯಾವುದೇ ಹಮ್ಮುಬಿಮ್ಮುಗಳಿಲ್ಲದ, ಈಗಲೂ ಕೆನ್ನೆಗೊಂದು ಮುತ್ತಿಡಬೇಕು ಎನ್ನಿಸುವಷ್ಟು ಆಪ್ತತೆಯ ಜೀವಂತ ದಂತಕತೆ.

ಪ್ರೀತಿ, ಪ್ರೇಮ, ಕಾಮಿಡಿ, ಕೌಟುಂಬಿಕ ಕಥೆಗಳನ್ನು ಆಧರಿಸಿದ್ದ ಸಿನಿಮಾಗಳೇ ತಯಾರಾಗುತ್ತಿರುವ ಇವತ್ತಿನ ಕಾಲದಲ್ಲಿ ಪ್ರಭಾವಿ ವ್ಯಕ್ತಿಯೊಬ್ಬನ/ಳ ಕುರಿತ ಅಥವಾ ದಂತಕತೆಯೊಬ್ಬನ/ಳ ಜೀವನ ಕುರಿತ ಚಿತ್ರಗಳನ್ನು ತಯಾರಿಸುವುದು ನಿಜಕ್ಕೂ ಸವಾಲಿನ ವಿಷಯ. ಒಂದು ವೇಳೆ ಯಾರಾದರೂ ಧೈರ್ಯ ಮಾಡಿ ಅಂತಹ ಸಬ್ಜೆಕ್ಟ್‌ಗಳನ್ನು ಕೈಗೆತ್ತಿಕೊಂಡರೂ ಆ ಬಗೆಯ ಪಾತ್ರಗಳಿಗೆ ಜೀವ ತುಂಬಬಲ್ಲ ಗತ್ತು, ಗಾಂಭೀರ್ಯತೆ, ತೂಕದ ವ್ಯಕ್ತಿತ್ವ ಇರುವಂಥ ಕಲಾವಿದರು ಸಿಗುವುದು ಕಷ್ಟ. ಆ ನಿಟ್ಟಿನಲ್ಲಿ ಮೆರಿಲ್ ಸ್ಟ್ರೀಪ್ ತರಹದ ನಟಿಯರು ಆ ಕೊರತೆಯನ್ನು ತುಂಬಬಲ್ಲರು. ಅದಕ್ಕೆ ಸಾಕ್ಷಿಯಾಗಿ ಮೆರಿಲ್ ಮಾಡಿದಂಥ ಕೆಲವು ದಾಖಲಾರ್ಹ ಸಿನಿಮಾಗಳು ನಮ್ಮ ಕಣ್ಣ ಮುಂದಿವೆ. ಅವುಗಳ ಪೈಕಿ 'ದಿ ಐರನ್ ಲೇಡಿ' ಒಂದು. ಈ ಚಿತ್ರದಲ್ಲಿ ಮೆರಿಲ್ ನಿರ್ವಹಿಸಿದ್ದು ಇಂಗ್ಲೆಂಡಿನ ಮಾಜಿ ಪ್ರಧಾನಿ ಮಾರ್ಗರೆಟ್ ಥ್ಯಾಚರ್ ಪಾತ್ರವನ್ನು. ಹೆಚ್ಚು ಕಮ್ಮಿ ಮಾರ್ಗರೆಟ್‌ರನ್ನೇ ಹೋಲುವ ಮೆರಿಲ್ ಆ ಚಿತ್ರದಲ್ಲಿ ಅದ್ಭುತವಾಗಿ ಕಾಣಿಸಿಕೊಂಡಿದ್ದಳು. ಮೆರಿಲ್ ಕರಾಮತ್ತು ಇರುವ ಮತ್ತೊಂದು ಚಿತ್ರ 'ಡೆವಿಲ್ ವೇರ್ಸ್ ಪ್ರಾಡ'. ಈ ಚಿತ್ರದಲ್ಲಿ ಮೆರಿಲ್ ನಿರ್ವಹಿಸಿದ ಪಾತ್ರ ಹೆಚ್ಚೂ ಕಮ್ಮಿ ಇಂಗ್ಲೀಷ್ ಪತ್ರಕರ್ತೆ, ಫ್ಯಾಷನ್ ಜರ್ನಲಿಸ್ಟ್ ಅನ್ನಾ ವಿಂಟೋರ್ ಬದುಕನ್ನಾಧರಿಸಿದ್ದು. ಆಗಾಗ ಇಂತಹ



ಸಾಹಸಗಳಿಗೆ ಕೈ ಹಾಕುವ ಮೆರಿಲ್ ಈಗ ಅಂಥದ್ದೇ ಒಂದು ಹೊಸಸಾಹಸಕ್ಕೆ ಮುಂದಾಗಿದ್ದಾಳೆ. ಅದೇನೆಂದರೆ, ತನ್ನ ಮುಂಬರುವ ಚಿತ್ರ 'ಮಾಸ್ಟರ್ ಕ್ಲಾಸ್'ನಲ್ಲಿ ಗಾಯಕಿ ಮರಿಯಾ ಕೆಲ್ಲಾಸ್ ಪಾತ್ರವನ್ನು ಮಾಡುವುದು. ಅದಕ್ಕಾಗಿ ತಾನು ವೋಕಲ್ ಕಾರ್ಡ್ಸ್ ಪ್ರಾಕ್ಟೀಸ್ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದಾಳೆ. ಈ ಬಹುನಿರೀಕ್ಷಿತ 'ಮಾಸ್ಟರ್ ಕ್ಲಾಸ್' ಜನವರಿ, 2015ರಲ್ಲಿ ಸೆಟ್ಟೇರಲಿದೆ ಎಂಬುದು ಮೆರಿಲ್ ಅಭಿಮಾನಿಗಳಲ್ಲಿನ ಬಹುಚರ್ಚಿತ ವಿಷಯ.




ಇನ್ನು ಈಕೆಯ ಸಾಂಸಾರಿಕ ಬದುಕಿನತ್ತ ಒಮ್ಮೆ ನೋಡುವುದಾದರೆ, ನಟ ಜಾನ್ ಕ್ಯಾಸಲ್ ಜೊತೆ ಮೂರು ವರ್ಷ ಸಂಸಾರ ನಡೆಸಿದ ಈಕೆ ಆತನ ಸಾವಿನ ನಂತರ ಶಿಲ್ಪಿ ಡಾನ್ ಗಮ್ಮರ್ ಎಂಬಾತನನ್ನು ಲಗ್ನವಾಗಿ ಆತನಿಂದ ನಾಲ್ಕು ಮಕ್ಕಳನ್ನು ಪಡೆದಿದ್ದಾಳೆ. ಆ ಪೈಕಿ ಮಮ್ಮಿ ಗಮ್ಮರ್ ಮತ್ತು ಗ್ರೇಸ್ ಗಮ್ಮರ್ ನಟಿಯರಾದರೆ, ಹೆನ್ರಿ ಗಮ್ಮರ್ ಸಂಗೀತಗಾರ. ಒಬ್ಬ ವ್ಯಕ್ತಿ ಯಾವುದೇ ಕ್ಷೇತ್ರದಲ್ಲಿ ಎಷ್ಟೇ ಎತ್ತರಕ್ಕೆ ಬೆಳೆದರೂ ಸ್ವಂತ ಆಲೋಚನೆಯ ಮೇಲೆ ಬದುಕನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಈ ಮಾತು ಧಾರ್ಮಿಕ ನಿಲುವುಗಳಿಗೂ ಸಂಬಂಧ ಪಡುತ್ತದೆ ಎಂಬುದಕ್ಕೆ ಮೆರಿಲ್ ಆದರ್ಶಪ್ರಾಯಳು. ಮೆರಿಲ್ ಹೇಳುವ ಪ್ರಕಾರ ಆಕೆ ಯಾವುದೇ ಧಾರ್ಮಿಕ ಆಚರಣೆಗಳ ಬಗ್ಗೆ ಉತ್ಸಾಹ ಹೊಂದಿರುವವಳಲ್ಲ. 'ನಾನು ಯಾವುದೇ ಚರ್ಚ್, ಮಂದಿರ, ಆಶ್ರಮಕ್ಕೆ ಒಳಪಟ್ಟವಳಲ್ಲ, ನನಗೆ ಪ್ರಾರ್ಥನೆಗಳ ಬಗ್ಗೆಯೂ ವಿಶ್ವಾಸವಿಲ್ಲ' ಎಂಬ ಆಕೆಯ ಮಾತೇ ಈ ಮೇಲಿನ ಮಾತನ್ನು ದೃಢೀಕರಿಸುತ್ತದೆ.

ಮೆರಿಲ್ ಸ್ಟ್ರೀಪ್ ಬಗ್ಗೆ ಧ್ಯಾನಿಸುವಾಗ ನಮ್ಮನ್ನು ಆಕೆಯ ಈ ನಿಷ್ಠುರತೆ, ನೇರವಂತಿಕೆ, ಪಾರದರ್ಶಕ ಧೋರಣೆಗಳು ಕಾಡುತ್ತವೆ. ಸಿನಿಮಾ ನಟನೆ ಎಂಬುದು ಪಾತ್ರಗಳಿಗೆ ಜೀವ ತುಂಬುವ ಕಲೆ ಎಂದು ನಂಬಿರುತ್ತೇವೆ. ಆದರೆ ಅಕಿರಾ ಖುರೋಸಾವ ತರಹದ ಸಿನಿಮಾ ನಿರ್ದೇಶಕ, ಆಂಟನ್ ಚೆಕೊವ್ ತರಹದ ನಾಟಕಕಾರ, ಮೆರಿಲ್ ಸ್ಟ್ರೀಪ್ ತರಹದ ನಟಿ ಒಂದು ಸತ್ಯವನ್ನು ದಾಖಲಿಸುತ್ತಾರೆ. ಅದೇನೆಂದರೆ, ದೃಶ್ಯ ಕಟ್ಟುವ, ಬರೆಯುವ, ನಟಿಸುವ ಕಸುಬುದಾರಿಕೆ ಪ್ರಚಾರದ ತೆವಲಿನಿಂದಾಚೆಗೆ ಉಳಿದಾಗ ಮಾತ್ರ ಅಪ್ಪಟ ಕಲೆ; ಮೆರಿಲ್‌ಳ ಸಹಜ ವ್ಯಕ್ತಿತ್ವವೇ ಆಕೆಯ ಕಲೆಯ ದ್ರವ್ಯ. ಈ ಸಹಜತೆಯಲ್ಲಿ ಆಕೆಯ ಗೆಲುವಿನ ಅನರ್ಘತೆ, ಸೋಲಿನ ಪ್ರಜ್ಞೆ, ಅಂತರ್ಯದ ದುಗುಡ, ಕೀರ್ತಿಯ ಶೂನ್ಯತೆ ಎಲ್ಲವೂ ಅಡಕಗೊಂಡಿರುತ್ತವೆ. ಬರೀ ಅರವತ್ತೈದು ವರ್ಷದಲ್ಲಿ ಮಾನವನ ಅಂತರಂಗವನ್ನು ಶೋಧಿಸುವ ಯತ್ನದಲ್ಲಿ ಗೆದ್ದ ಈ ವೃದ್ಧೆ ಕೆಲವು ಕಾಲೇಜು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡುತ್ತಾಳೆ. ನಾಟಕ ಸಂಸ್ಥೆಗಳಿಗೆ ಧನಸಹಾಯ ಮಾಡುತ್ತಾಳೆ. 'ನ್ಯಾಷನಲ್ ವುಮೆನ್ಸ್ ಹಿಸ್ಟರಿ ಮ್ಯೂಸಿಯಂ'ನ ಸ್ಪೋಕ್ಸ್ ಪರ್ಸನ್ ಆಗಿದ್ದುಕೊಂಡು ದೊಡ್ಡ ಮೊತ್ತದ ಹಣ ನೀಡುತ್ತಾಳೆ. ಎಲ್ಲಕ್ಕಿಂತ ಮಿಗಿಲಾಗಿ ಆಸ್ಕರ್ ತರಹದ ಪ್ರಶಸ್ತಿಯನ್ನು ಬರೋಬ್ಬರಿ ಮೂರು ಬಾರಿಯೂ, ಬಾಫ್ಟಾ ಅವಾರ್ಡನ್ನು ಎರಡು ಬಾರಿಯೂ, ಗೋಲ್ಡನ್ ಗ್ಲೋಬ್ ಪ್ರಶಸ್ತಿಯನ್ನು ಎಂಟು ಬಾರಿಯೂ ಪಡೆಯುವುದರ ಜೊತೆಗೆ ಐವತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ತನ್ನನ್ನು ತಾನು ಅರ್ಪಿಸಿಕೊಂಡು ಜಗತ್ತಿನ ಮುಂದೆ ಅಚ್ಚರಿಯಾಗಿ ಕಾಣುತ್ತಾಳೆ.

ಕಾವ್ಯರಚನೆ, ಗೀತಗಾಯನ, ವಾದ್ಯ ವಾದನಗಳಂತೆಯೇ ನಟನಾ ಕಲೆಯು ಕೂಡ ಅಂತರ್ಮುಖಿ ಮಾನವನ ಜೀವಸೆಲೆಗಳಲ್ಲಿ ಒಂದು. ಅಭಿನಯವು ಕಸುಬು ಅಥವಾ ವೃತ್ತಿ ಎನ್ನುವುದಕ್ಕಿಂತ ಮಿಗಿಲಾಗಿ ತನ್ಮೂಲಕ ಮಾನವ ಜಗತ್ತಿಗೆ ಜ್ಞಾನವಾಹಿಯಾಗಿ ಕಾರ್ಯ ನಿರ್ವಹಿಸಬಲ್ಲ ಕಲೆ ಎನ್ನಬಹುದು. ಮೆರಿಲ್ ಸ್ಟ್ರೀಪ್ ಆ ಬಗೆಯ ಸೂಕ್ಷ್ಮತೆ ಹಾಗೂ ಪ್ರಜ್ಞೆಗಳಿಂದ ರೂಪಿತವಾದ ಜೀವ. ಈಕೆಯ ಚಿತ್ರಗಳಿಂದ, ಬದುಕಿನಿಂದ ನಾವೆಲ್ಲ ಹೀರಿಕೊಳ್ಳಬೇಕಾದ್ದು ಬಹಳಷ್ಟಿದೆ, ಅಲ್ಲವೇ?

● ಹೃದಯಶಿವ

...ಎಂದು ಬರಕೊಂಡು ಬೆತ್ತಲೆಯಾಗಿ ಪ್ರತಿಭಟಿಸಿದ ಅಮ್ಮಂದಿರ ಕೂಗಿಗೆ ಇನ್ನೂ ಬೆಲೆ ಸಿಕ್ಕಿಲ್ಲ.



ನಾಗರಾಜ್ ಹೆಟ್ಟೂರ್ ಅವರು ಅತೀವ ನೋವಿನಿಂದ ಬರೆದ 'ಇಲ್ಲಿ ಹೆಣ್ಣುಮಕ್ಕಳ ದೇಶಗಳು ಅತ್ಯಾಚಾರಕ್ಕಿವೆ' ಎಂಬ ಕವನವು ಪುರುಷಾಧಿಪತ್ಯ ಮತ್ತು ಜಾತೀಯತೆಯ ಸೋಂಕಿನಿಂದ ಬಳಲುತ್ತಿರುವ ನಮ್ಮ ನಾಡಿನ ಜನರ ಕಣ್ಣು ತೆರೆಸುತ್ತವೆಯೇ?

-ಗುಲಾಬ್ ನಧಾಫ್, ಬಾಗಲಕೋಟೆ

ಕಲಿಕಾ ಮಾಧ್ಯಮ ಪೋಷಕರ ಹಕ್ಕು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಅದಕ್ಕೆ ಪ್ರತಿಯಾಗಿ ಕನ್ನಡ ಹೋರಾಟಗಾರರು ಗೋಕಾಕ್ ಮಾದರಿ ಚಳವಳಿಗೆ ಕರೆ ಕೊಟ್ಟಿರುವುದು ಸರಿಯಷ್ಟೇ. ಈ ನಮ್ಮ ಭ್ರಷ್ಟ ವ್ಯವಸ್ಥೆಯು ಹೆಜ್ಜೆಹೆಜ್ಜೆಗೂ ಇಂತಹ ಅರ್ಥಹೀನ ಸಮಸ್ಯೆಗಳನ್ನು ನಮಗೆ ತಂದೊಡ್ಡುವುದು, ನಾವು ಒಂದಾದಮೇಲೆ ಒಂದರಂತೆ ಅವುಗಳ ವಿರುದ್ಧ ಹೋರಾಟ ಮಾಡುವುದು... ಇದೇ ಆಯ್ತು ನಮ್ಮ ಜೀವನವೆಲ್ಲ.

-ವೀರಭ್ಯಾತಯ್ಯ, ಬೆಂಗಳೂರು

ಕಳೆದ ಲೋಕಸಭೆಯ ಚುನಾವಣೆಯ ಸಂದರ್ಭದಲ್ಲಿ ಹಲವು ಯುವಕರ ಮೊಬೈಲ್‌ಗಳಲ್ಲಿ ಕರ್ನಾಟಕದ ಕೋಮುವಾದಿ ಬಲಪಂಥೀಯ ಅಂಕಣಕಾರನೊಬ್ಬ ಭಾಷಣ ಮಾಡುತ್ತಿದ್ದ ವೀಡಿಯೋ ಒಂದನ್ನು ನೋಡಿದ್ದೆ. ಅಬ್ಬಾ ಆತನ ಭಾಷಣ ಕೇಳಿದ ಯಾರಿಗಾದರೂ ರಕ್ತ ಕುದಿಯಬೇಕು. ಈ ದೇಶದ ಗಡಿ ಕಾಯುವ ಯೋಧರ ಬಂದೂಕನ್ನು ಜೇಡಮೋಡಿ ಉಗ್ರರು ಕಸಿದಿದ್ದನ್ನು ಆತ ವಿವರಿಸಿದ್ದನೆಂದರೆ ಅದನ್ನು ಕೇಳಿದ ಯುವಕರಲ್ಲಿ ದುಃಖ ಮತ್ತು ಆವೇಷ ಎರಡೂ ಉಕ್ಕಿ ಬರುವಂತಿತ್ತು.

ಆದರೆ ಆ ಬಲಪಂಥೀಯನ ಮತ್ತು ಆತನ ಹಿಂಬಾಲಕರಿಗೆ ನಾನು ಹಲವು ಪ್ರಶ್ನೆಗಳನ್ನು ಕೇಳಬಯಸುತ್ತೇನೆ.

1. ಈ ನಮ್ಮ ದೇಶದಲ್ಲಿ ಹುಟ್ಟಿದ, ನಿಮ್ಮಂತೆಯೇ ಇರುವ ಹಲವರನ್ನು ದಲಿತ ಜಾತಿಯಲ್ಲಿ ಹುಟ್ಟಿದರೆಂಬ ಕಾರಣಕ್ಕೆ ಊರಿನಿಂದ ಹೊರಗೆ ಇಟ್ಟಿದ್ದೀರಲ್ಲ, ಅದನ್ನು ಕಂಡು ನಿಮಗೆ ನಾಚಿಕೆಯಾಗುವುದಿಲ್ಲವೇ?

2. ಮೊನ್ನೆ ಉತ್ತರ ಪ್ರದೇಶದಲ್ಲಿ ಇಬ್ಬರು ದಲಿತ ಹೆಣ್ಣುಮಕ್ಕಳನ್ನು ಅಮಾನುಷವಾಗಿ ಅತ್ಯಾಚಾರವೆಸಗಿ ನೇಣು ಹಾಕಿದರಲ್ಲ ಅದನ್ನು ನೋಡಿ ನಿಮ್ಮ ಹೊಟ್ಟೆ ಚುರುಕ್ ಎನ್ನಲಿಲ್ಲವೇ?

3. ನಿಮ್ಮ ಧರ್ಮದ ಪ್ರಕಾರ ಹೆಣ್ಣು ಒಂದು ಭೋಗದ ವಸ್ತು ಮಾತ್ರವೇ?

4. ಅದೇ ಮೇಲ್ಜಾತಿ ಮತ್ತು ಮೇಲ್ವರ್ಗದ ಮಹಿಳೆಯರ ಮೇಲೆ ಅತ್ಯಾಚಾರವೆಸಗಿದ್ದರೆ, ಅದರಲ್ಲೂ ಓರ್ವ ಅಲ್ಪಸಂಖ್ಯಾತ ಅಂತಹ ಕೃತ್ಯವೆಸಗಿದ್ದರೆ ನೀವು ನಿಮ್ಮ ಹಿಂದೂ ಎಂಬ ಅಸ್ತ್ರ ಬಳಸಿ ಇಡೀ ದೇಶಕ್ಕೆ ಕೊಳ್ಳಿ ಇಡುತ್ತಿದ್ದಿರಲ್ಲವೇ?

5. ಆಗಲೂ ದಲಿತ ಯುವಕರನ್ನೇ ನಿಮ್ಮ ದಾಳಗಳನ್ನಾಗಿ ಬಳಸಿಕೊಳ್ಳುತ್ತಿದ್ದಿರಲ್ಲವೆ?

6. ದಲಿತ ಹೆಣ್ಣುಮಕ್ಕಳ ಮೇಲೆ ಯಾವ ಜಾತಿ ಮತ್ತು ವರ್ಗದ ಜನ ಇಂತಹ ದೌರ್ಜನ್ಯವೆಸಗುತ್ತಿದ್ದಾರೆಂದು ಮನಮುಟ್ಟುವಂತೆ ಫೇಸ್‌ಬುಕ್‌ನಲ್ಲಿ, ಯೂಟ್ಯೂಬ್‌ನಲ್ಲಿ ವಿವರಿಸುತ್ತೀರಾ?

ನಮ್ಮ ದಲಿತ ಸಮುದಾಯಕ್ಕೆ ಹೆಚ್ಚಾಗಿ ನಿಮ್ಮ ಫೇಸ್‌ಬುಕ್ ಮತ್ತು ಯೂಟ್ಯೂಬ್ ಗೊತ್ತಿಲ್ಲ, ಆದ್ದರಿಂದ ಬನ್ನಿ ತಮಟೆ ಕಾಯಿಸಿ ಕೊಡುತ್ತೇನೆ. ಹಳ್ಳಿಹಳ್ಳಿಯಲ್ಲಿ ತಮಟೆ ಬಾರಿಸಿ ಹೇಳಿ ಆಗ ನಿಮ್ಮ ಧರ್ಮ ಎಂತಹದ್ದು ಎಂದು. ಇದು ನಿಮ್ಮಿಂದ ಸಾಧ್ಯವೇ?

- ಪ್ರಸ್ತುತ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.



ಅರುಣ್ ಸಾಗರ್ ಈಗ 'ರಿಂಗ್ ಮಾಸ್ಟರ್'

ಅರುಣ್ ಸಾಗರ್- ಅನುಶ್ರೀ ಕಾಂಬಿನೇಷನ್ನಿನ 'ರಿಂಗ್ ಮಾಸ್ಟರ್' ಎಂಬ ವಿಶಿಷ್ಟ ಹೆಸರಿನ ಸಿನಿಮಾ ಈಗಾಗಲೇ ಶುರುವಾಗಿದೆ. ವಿಶ್ರುತ್ ನಾಯಕ್ ನಿರ್ದೇಶನದ ಈ ಚಿತ್ರಕ್ಕೆ ಚೇತನ್ ಎನ್ನುವವರು ಹಣ ಹಾಕುತ್ತಿದ್ದಾರೆ. ಅರುಣ್ ಸಾಗರ್ ಹೀರೋ ಆಗಿ ನಟಿಸುತ್ತಿರುವ ಈ ಚಿತ್ರದಲ್ಲಿ ಅರುಣ್ ಸಾಗರ್ ಜೊತೆ 'ಬಿಗ್ ಬಾಸ್'ನಲ್ಲಿ ಜೊತೆಯಾಗಿದ್ದ ಅನುಶ್ರೀ ಚಿತ್ರದ ನಾಯಕಿ. ಈಕೆಯ ಜೊತೆಗೆ ಶೃಂಗ ಹಾಗೂ ಶ್ವೇತ ಎಂಬ ಇನ್ನಿಬ್ಬರು ಹುಡುಗಿಯರೂ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಸಿನಿಟೆಕ್ ಸೂರಿ ಛಾಯಾಗ್ರಹಣ ಇರುವ ಈ ಸಿನಿಮಾ ತನ್ನ ಟೈಟಲ್ ಮೂಲಕ ಆಕರ್ಷಕ ಎಂಬುದು ಸುಳ್ಳಲ್ಲ. ಅಂದಹಾಗೆ, ಅರುಣ್ ಸಾಗರ್ ಹಾಗೂ ಅನುಶ್ರೀ ಈ ಮೊದಲು 'ಬೆಂಕಿಪಟ್ನ' ಎಂಬ ಚಿತ್ರದಲ್ಲಿ ಒಟ್ಟಿಗೆ ನಟಿಸಿದ್ದರು.

ಬರಹಗಾರ ಟಿ.ಕೆ.ದಯಾನಂದ್ ನಿರ್ದೇಶಿಸಿರುವ ಈ ಸಿನಿಮಾ ಇನ್ನೂ ಬಿಡುಗಡೆಯಾಗಿಲ್ಲ ಎಂಬುದು ಬೇರೆಯ ಮಾತು.



ಲಂಕೇಶರ 'ತಮ್ಮ' ಜಯಮಾಲ ಈಗ ಎಮ್ಮೆಲ್ಸಿ!

ಪಿ.ಲಂಕೇಶರು ನಿರ್ದೇಶಿಸಿದ್ದ 'ಖಂಡವಿದೆಕೋ ಮಾಂಸವಿದೆಕೋ' ಚಿತ್ರದಲ್ಲಿ ಅದ್ಭುತವಾಗಿ ನಟಿಸಿದ್ದ, ಪತ್ರಿಕೆಯಲ್ಲಿ ಒಮ್ಮೆ 'ನನ್ನ ತಮ್ಮ' ಎಂದು ಲಂಕೇಶರಿಂದ ಮೆಚ್ಚುಗೆಯನ್ನು ಪಡೆದಿದ್ದ ಜಯಮಾಲ ಅವರು ಈಗ ಎಮ್ಮೆಲ್ಸಿ ಸ್ಥಾನಕ್ಕೆ ನಾಮಿನೇಟ್ ಆಗಿದ್ದಾರೆ. ಸರ್ಕಾರ ಸಲ್ಲಿಸಿದ್ದ ಪಟ್ಟಿಯನ್ನು ಪರಿಶೀಲಿಸಿದ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಜಯಮಾಲಾಗೆ ಹಸಿರು ನಿಶಾನೆ ತೋರಿಸಿದ್ದಾರೆ. ಈ ಎಮ್ಮೆಲ್ಸಿ ಸ್ಥಾನಕ್ಕೆ ನಟಿಯರಾದ ಭಾವನಾ ಹಾಗೂ ರಮ್ಯ ಅವರು ಜಯಮಾಲಾ ಅವರಿಗೆ ಸ್ಪರ್ಧಿಗಳಾಗಿದ್ದರು. ಮೊದಲಿನಿಂದಲೂ ಕಾಂಗ್ರೆಸ್ ಪಾರ್ಟಿ ಜೊತೆ ಒಳ್ಳೆ ನಂಟು ಉಳಿಸಿಕೊಂಡು ಬಂದಿರುವ ಜಯಮಾಲ ಕಡೆಗೂ ಆಯ್ಕೆಯಾಗಿದ್ದಾರೆ.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಮಂಡ್ಯದಿಂದ ಸೋತುಸುಣ್ಣವಾಗಿರುವ ರಮ್ಯಾಗೂ ಎಮ್ಮೆಲ್ಸಿ ಸೀಟು ಕೊಡಬೇಕೆಂಬ ಮಾತುಗಳು ಅಲ್ಲಲ್ಲಿ ಕೇಳಿಬರುತ್ತಿತ್ತು, ಆದರೆ ಕೊನೆಗೆ ಹಿರಿಯ ನಟಿಯಾದ ಜಯಮಾಲಾ ಅವರು ಶಾಸಕಿ ಆಗಿದ್ದಾರೆ.

ಜಯಮಾಲ ಅವರು ಸಿನಿಮಾ ವಲಯಕ್ಕೂ, ಜಾತ್ಯತೀತ ಸಿದ್ಧಾಂತಕ್ಕೂ ಒಳ್ಳೆಯದಾಗುವಂತೆ ಕಾರ್ಯ ನಿರ್ವಹಿಸಲಿ ಎಂಬುದು ನಮ್ಮ ಆಶಯ.

ಲಂಕೇಶರ ಸಾಹಿತ್ಯ ಮತ್ತು 'ಬಹುಪರಾಕ್'

ಇತ್ತೀಚೆಗೆ ಸುನಿ ಎಂಬುವವರು ನಿರ್ದೇಶಿಸುತ್ತಿರುವ 'ಬಹುಪರಾಕ್' ಚಿತ್ರದಲ್ಲಿ ಪಿ.ಲಂಕೇಶರ ಖ್ಯಾತ ನಾಟಕ 'ಸಂಕ್ರಾಂತಿ'ಯಿಂದ ಹಲವು ಸಾಲುಗಳನ್ನು ಒಂದು ಹಾಡಿಗಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಬರೆದಿದ್ದೆವು. ಈಗ ಆ ಹಾಡಿನ ವೀಡಿಯೋ ಯೂ ಟ್ಯೂಬ್‌ನಲ್ಲಿ ಲಭ್ಯವಿದೆ.

'ಬಹುಪರಾಕ್' ಚಿತ್ರದಲ್ಲಿ ನಾಯಕನಾಗಿ ನಟಿಸಿರುವ ಶ್ರೀನಗರದ ಕಿಟ್ಟಿ ಅವರು ಆ ಹಾಡಿನಲ್ಲಿ ಕೇಸರಿ ಧ್ವಜವನ್ನು ಹಿಡಿದು, ಚುನಾವಣೆಯಲ್ಲಿ ಗೆಲ್ಲಲು ಎಲ್ಲಾ ತರಹದ ಕುತಂತ್ರಗಳನ್ನು - ಲಂಚ ಕೊಡುವುದು, ಹೆಂಡ ಹಂಚುವುದು, ಅಪ್ರಾಮಾಣಿಕವಾಗಿ ದೇವರ ಮೇಲೆ ಆಣೆ ಮಾಡಿಸುವುದು - ಅನುಸರಿಸುವ ದೃಶ್ಯಗಳಿವೆ. ಅದರ ಬಗ್ಗೆ ನಮ್ಮ ತಕರಾರಿಲ್ಲ, ಅದರಲ್ಲೂ ಒಂದು ಧರ್ಮವನ್ನು ಗುತ್ತಿಗೆ ಹಿಡಿದವರಂತೆ ವರ್ತಿಸುವವರು ಕೇಸರಿ ಧ್ವಜವನ್ನು ಹಿಡಿದು ಇಂತಹ ಕೃತ್ಯಗಳಲ್ಲಿ ತೊಡಗುತ್ತಾರೆಂದು ಒಂದು ಸಿನಿಮಾ ತೋರಿಸುವುದಾದರೆ ಕೋಮುವಾದದ ವಿರೋಧಿಗಳಾಗಿದ್ದ ಲಂಕೇಶರ ಅಭಿಮಾನಿಗಳೂ ತಕರಾರು ಎತ್ತುವುದಿಲ್ಲ



ಆದರೆ ಲಂಕೇಶರ ಸಾಹಿತ್ಯಕ್ಕೆ ಸಿನಿಮಾ ಹಾಡೊಂದರಲ್ಲಿ ಕೋಮುವಾದಿ ಹಿಂದೂತ್ವದ ಕೇಸರಿ ಬಾವುಟಗಳು ಹಾರುತ್ತಿರುವುದನ್ನು ಕಂಡು ಕಳವಳಗೊಂಡ ಹಲವು ಲಂಕೇಶರ ಅಭಿಮಾನಿಗಳು ನಮ್ಮ ಕಚೇರಿಗೆ ಫೋನ್ ಮಾಡಿ "ಇದು ಹೇಗೆ ಸಾಧ್ಯವಾಯಿತು?" ಎಂದು ಪ್ರಶ್ನಿಸಿದರು. ಯಾಕೆಂದರೆ ಲಂಕೇಶರು ತಮ್ಮ ಜೀವಿತಾವಧಿಯಲ್ಲಿ ಸದಾ ಕೋಮುವಾದವನ್ನು, ಅದರಲ್ಲೂ ಹಿಂದೂತ್ವವನ್ನು, ವಿರೋಧಿಸಿದ್ದರು.

ಈ ಹಿನ್ನೆಲೆಯಲ್ಲಿ 'ಬಹುಪರಾಕ್' ಸಿನಿಮಾದ ನಿರ್ದೇಶಕ ಸುನಿ ಅವರನ್ನು ಸಂಪರ್ಕಿಸಿದಾಗ ಅವರು "ಈ ಸಿನಿಮಾದಲ್ಲಿ ಹಿಂದೂ-ಮುಸ್ಲಿಮ್ ವಿಚಾರಗಳಿಲ್ಲ ... ಅನುಕೂಲಕ್ಕೆ ಕೇಸರಿ ಧ್ವಜವನ್ನು ಉಪಯೋಗಿಸಿಕೊಂಡಿದ್ದೇನಷ್ಟೇ" ಎಂದು ಹೇಳಿದ್ದಾರೆ.

ಸುನಿ ಅವರು ತಮ್ಮ ಸಿನಿಮಾದಲ್ಲಿ ಕೋಮುವಾದವನ್ನು ಖಂಡಿಸಿದ್ದರೆ - ಅದು ಹಿಂದೂ ಕೋಮುವಾದವಾಗಲಿ, ಮುಸಲ್ಮಾನ ಕೋಮುವಾದವಾಗಲಿ ಇನ್ನೆಂಥದ್ದೋ ಧರ್ಮೀಯ ಕೋಮುವಾದವಾಗಲಿ - ಅದು ಲಂಕೇಶರ ಮತ್ತು ಈ ಪತ್ರಿಕೆಯ ಸಿದ್ಧಾಂತಕ್ಕೆ ಸರಿಹೊಂದುತ್ತದೆ. ಆದರೆ ಅದರ ಬದಲಾಗಿ ಸುನಿ ಅವರು ಲಂಕೇಶರ ಸಾಹಿತ್ಯವನ್ನು ಕೋಮುವಾದಿ ಪ್ರಚೋದನೆಗೆ ಉಪಯೋಗಿಸಿಕೊಂಡಿದ್ದರೆ ಪತ್ರಿಕೆಯ ವಿರೋಧ ಮಾತ್ರವಲ್ಲ, ಲಂಕೇಶರ ಅಸಂಖ್ಯಾತ ಅಭಿಮಾನಿಗಳ ವಿರೋಧವನ್ನೂ ಸುನಿ ಅವರು ಕಟ್ಟಿಕೊಳ್ಳಬೇಕಾಗುತ್ತದೆ.



ಶಾರ್ಪ್ ಶೂಟರ್ ಎಂಬ ಗೌಸ್ ಪೀರ್ ಸಿನಿಮಾ



ದಿಗಂತ್ ನಟಿಸುತ್ತಿರುವ 'ಶಾರ್ಪ್ ಶೂಟರ್' ಎಂದು ಕರೆಯಲ್ಪಡುವ ಚಿತ್ರ ಇತ್ತೀಚೆಗಷ್ಟೇ ಮಹೂರ್ತ ಮಾಡಿಕೊಂಡಿದೆ. ಪಕ್ಕಾ ರೊಮ್ಯಾಂಟಿಕ್ ಲವ್‌ಸ್ಟೋರಿಯಾಗಿರುವ ಈ 'ಶಾರ್ಪ್ ಶೂಟರ್' ಒಂದು ಆಕ್ಷನ್ ಸಿನಿಮಾ ಅನ್ನೋದು ಕೆಲವರಿಗಿರುವ ಮೂಢನಂಬಿಕೆ. ಯಾವ ಕೋನದಿಂದ ನೋಡಿದರೂ ಆಕ್ಷನ್ ಹೀರೋ ಥರ ಕಾಣದ ದಿಗಂತ್ ನಟಿಸುತ್ತಿರುವ ಚಿತ್ರದ ಬಗ್ಗೆ ಅಂತಹ ಅನುಮಾನಗಳು ತೀರಾ ಅಮಾಯಕತ್ವದ ಪರಮಾವಧಿಯೇ ಸರಿ. ಅಂದಹಾಗೆ, ಈ ಮೊದಲು ಹಾಡು ಬರೆದುಕೊಂಡಿದ್ದ ಗೌಸ್‌ಪೀರ್ ಈ ಚಿತ್ರಕ್ಕೆ ನಿರ್ದೇಶಕ. ಈ ಚಿತ್ರಕ್ಕೂ ಗೌಸ್ ಪೀರ್ ತಾವೇ ಕಥೆ, ಚಿತ್ರಕತೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಮಣಿಶರ್ಮ ಮತ್ತು ದೇವಿಶ್ರೀ ಪ್ರಸಾದ್ ಶಿಷ್ಯನಾಗಿ ಪಳಗಿರುವ ಶಿವ ಸಂತೋಷ್ ಸಂಗೀತ ನಿರ್ದೇಶಕ. ಕರುಣಾಕರ ಎಂಬಾತ ಕ್ಯಾಮೆರಾಮ್ಯಾನ್. ದಿಗಂತ್ ಜೊತೆಗೆ ಈ ಚಿತ್ರದಲ್ಲಿ ನಟಿಸು... ಬಳಗದಲ್ಲಿ ಲಕ್ಷ್ಮಿ, ಸುಧಾರಾಣಿ, ಮಿತ್ರ ಮತ್ತಿತರರು ಇರುತ್ತಾರೆ.

'ಕೆಂಡಸಂಪಿಗೆ' ಶೂಟಿಂಗ್ ಸ್ಟಾರ್ಟ್...



'ದುನಿಯಾ' ನಂತರ ಅಂಥದೊಂದು ಸಿನಿಮಾ ಕೊಡಲು ಸಾಧ್ಯವಾಗದ ನಿರ್ದೇಶಕ ಸೂರಿ ತಮ್ಮ ಈವರೆಗಿನ ವೃತ್ತಿ ಬದುಕಿನ... ಹೆಚ್ಚುಕಮ್ಮಿ ಒಂದೇ ಬಗೆಯ ಕಥೆಯು... ಸಿನಿಮಾಗಳನ್ನು ಮಾಡಿಕೊಂಡು ಬಂದವರೆಂ... ಮಾತುಗಳು ಅಲ್ಲಲ್ಲಿ ಕೇಳಿಬರುವುದುಂಟು. ಇಂತ... ಸೂರಿ 'ಜಾಕಿ', 'ಅಣ್ಣಾ ಬಾಂಡ್' ನಂತರ ಮತ್ತೊಮ್ಮೆ ಪುನೀತ್ ರಾಜಕುಮಾರ್ ಹಾಕಿಕೊಂಡು ಒಂದು ಸಿನಿಮಾ ಮಾಡಲು ಸ್ಕೆಚ್ ಹಾಕಿದ್ದಾರೆ. 'ದೊಡ್ಮನೆ ಹುಡುಗ' ಆ ಚಿತ್ರದ ಹೆಸರು. ಅದಕ್ಕೂ ಮೊದಲು ಈಗಾಗಲೇ ತಮ್ಮ ಮತ್ತೊಂದು ಚಿತ್ರ 'ಕೆಂಡಸಂಪಿಗೆ'ಗೆ ಗುಟ್ಟಾಗಿ ಒಂದು ಶೆಡ್ಯೂಲ್ ಶೂಟಿಂಗ್ ಮುಗಿಸಿಕೊಂಡು ಬಂದಿದ್ದಾರೆ. ... ಮೊದಲು 'ಕಂಟ್ರಿ ಪಿಸ್ತೂಲ್', 'ಕರೆನ್ಸಿ' ಎಂಬ ಸಿನಿಮಾಗಳನ್ನು ಮಾಡುತ್ತೇನೆ ಎಂದು ಹೇಳಿಕೊಂಡಿದ್ದ ಸೂರಿ ಈಗ ಅವನ್ನು ಪಕ್ಕಕ್ಕಿಟ್ಟು ಪುನೀತ್ ಸಿನಿಮಾ ಮಾಡುವ ತೀರ್ಮಾನಕ್ಕೆ ಬಂದಿದ್ದಾರಂತೆ. ಅದಕ್ಕೂ ಮೊದಲು ಹೊಸಮುಖಗಳೇ ತುಂಬಿ ತುಳುಕುತ್ತಿರುವ ಈ 'ಕೆಂಡಸಂಪಿಗೆ' ಸಿನಿಮಾವನ್ನು ಪ್ರಾರಂಭಿಸಿದ್ದಾರೆ.

ಈ 'ಕೆಂಡ ಸಂಪಿಗೆ'ಗೆ ಸತ್ಯ ಹೆಗ್ಡೆ ಕ್ಯಾಮೆರಾ ಕೆಲಸ ಮಾಡಿದರೆ, ಎಡಿಟರ್ ದೀಪು ಎಸ್ ಕುಮಾರ್ ಲೆಕ್ಕಾಚಾರವಾಗಿ ಶಾಟ್‌ಗಳನ್ನು ಜೋಡಿಸಿಕೊಡುವ ಹೊಣೆ ಹೊತ್ತಿದ್ದಾರೆ.

ಸೂರಿ ಇನ್ನಾದರೂ 'ದುನಿಯಾ' ತರಹದ ಒಂದು ಸಿನ್ಮಾ ಕೊಡಲಿ ಎಂಬುದು ಕನ್ನಡ ಸಿನಿಮಾ ನೋಡುವ ಪ್ರತಿಯೊಬ್ಬನ ಆಸೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com